ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 14 ಶನಿವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 179 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ರೈತರ ಹಿತ ಕಾಯುವಲ್ಲಿ ಸಿದ್ದರಾಮಯ್ಯ ಸರ್ಕಾರ ಸಂಪೂರ್ಣ ವಿಫಲ

● ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ, ಹಿರಿಯ ಶಾಸಕ ಜಿ.ಟಿ.ದೇವೇಗೌಡ ವಾಗ್ದಾಳಿ

● ಗ್ಯಾರಂಟಿ ಯೋಜನೆಗಳಿಗೆ ಹೊಂದಿಸುವುದನ್ನು ಬಿಟ್ಟು ಬೇರೇನೂ ಮಾಡುತ್ತಿಲ್ಲ; ರೈತರ ಸ್ಥಿತಿ ದುಸ್ಥಿತಿ



ಬೆಳಗಾವಿ, ಅ.13–ರಾಜ್ಯದ 195 ತಾಲೂಕುಗಳಲ್ಲಿ ಭೀಕರ ಬರಗಾಲವಿದ್ದು, ರೈತರ ಹಿತ ಕಾಯುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡರು ಆಕ್ರೋಶ ವ್ಯಕ್ತಪಡಿಸಿದರು.

ಬೆಳಗಾವಿ ನಗರದಲ್ಲಿ, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪಕ್ಷದ ಮುಖಂಡರು, ಕಾರ್ಯಕರ್ತರುಗಳಿಗೆ ಏರ್ಪಡಿಸಿದ್ದ ಪಕ್ಷದ ಪುನಶ್ಚೇತನ ಪರ್ವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರವೇ ನೀಡಿರುವ ಮಾಹಿತಿ ಪ್ರಕಾರ ರಾಜ್ಯದ ಸುಮಾರು 40 ಲಕ್ಷ ಹೆಕ್ಟೇರ್ ಪ್ರದೇಶದ, ಸುಮಾರು 4, 800 ಕೋಟಿ ಮೌಲ್ಯದ ಬೆಳೆ ನಾಶವಾಗಿದ್ದು ರಾಜ್ಯ ಸರ್ಕಾರ ಇದುವರೆವಿಗೂ ರೈತರಿಗೆ ಒಂದೇ ಒಂದು ರೂಪಾಯಿ ಪರಿಹಾರ ನೀಡದಿರುವುದು ದುರದೃಷ್ಟಕರ ಸಂಗತಿ ಎಂದರು.

ಕೇಂದ್ರ ಪವರ್ ಗ್ರೀಡ್ ಸೆಲ್‌ನಲ್ಲಿ ವಿದ್ಯುತ್ ಲಭ್ಯವಿದ್ದರೂ ಸರ್ಕಾರ ವಿದ್ಯುತ್ ಖರೀದಿಸಲು ಮುಂದಾಗದ ಕಾರಣ ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಇಲ್ಲದೆ ರೈತರು ಸಂಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸುವ ಒಂದೇ ಉದ್ದೇಶದಿಂದ ರೈತರನ್ನು ಹಾಗೂ ರಾಜ್ಯದ ಜನರನ್ನು ಕಡೆಗಣಿಸುತ್ತಿದ್ದು, ಇದರಿಂದ ರೈತರ ಆರ್ಥಿಕತೆ ಪಾತಾಳಕ್ಕೆ ಇಳಿದಿದೆ ಎಂದು ವಾಗ್ದಾಳಿ ನಡೆಸಿದರು.

ಜೆಡಿಎಸ್ ಪಕ್ಷವನ್ನು ದಕ್ಷಿಣ ಕರ್ನಾಟಕಕ್ಕೆ ಮಾತ್ರ ಸೀಮಿತ ಎಂದು ಹೇಳುವವರು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ದಕ್ಷಿಣ ಕರ್ನಾಟಕಕ್ಕೆ ಮಾಡಲಾಯಿತೇ, ಮುಳವಾಡ ಏತ ನೀರಾವರಿ ಯೋಜನೆ, ನಾರಾಯಣಪುರ ಬಲದಂಡೆ ವಿಸ್ತರೀಕರಣ ಈ ಎಲ್ಲಾ ಯೋಜನೆಗಳನ್ನು ದಕ್ಷಿಣ ಕರ್ನಾಟಕಕ್ಕೆ ಮಾಡಲಾಗಿದೆಯೇ ಎನ್ನುವುದನ್ನು ಪಕ್ಷದ ಕಾರ್ಯಕರ್ತರು ಅರ್ಥ ಮಾಡಿಕೊಳ್ಳುವ ಮೂಲಕ ಮುಂದಿನ ಲೋಕಸಭಾ ಚುನಾವಣೆಯಲ್ಲಿ ದೇಶದ ಅಭಿವೃದ್ಧಿ, ಏಳಿಗೆಗಾಗಿ, ಜನರ ಒಳತಿಗಾಗಿ ಸದಾ ದುಡಿಯುವ ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ನಿಟ್ಟಿನಲ್ಲಿ ಹಾಗೂ ಕುಮಾರಸ್ವಾಮಿರವರನ್ನು ಮುಖ್ಯಮಂತ್ರಿ ಮಾಡುವ ದಿಕ್ಕಿನಲ್ಲಿ ಹಿಂದಿನದೆಲ್ಲವನ್ನು ಮರೆತು ಒಟ್ಟಾಗಿ ಕೆಲಸ ಮಾಡುವಂತೆ ಜೆಡಿಎಸ್ ಪಕ್ಷದ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಮೈತ್ರಿಯ ಬಗ್ಗೆ ಮಾತನಾಡಿದ ಜಿ.ಟಿ. ದೇವೇಗೌಡರು, ಜೆಡಿಎಸ್‌ನವರು ಕೋಮುವಾದಿಗಳ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ ಎಂದು ಹೇಳುವ ಕಾಂಗ್ರೆಸ್‌ನವರು ಮಹಾರಾಷ್ಟ್ರದಲ್ಲಿ ಯಾರ ಜೊತೆ ಮೈತ್ರಿ ಮಾಡಿಕೊಂಡಿದ್ದಾರೆ, ಬಿಹಾರದಲ್ಲಿ ನಾಲ್ಕೈದು ಬಾರಿ ಬಿಜೆಪಿಯೊಂದಿಗೆ ಸೇರಿ ಸರ್ಕಾರ ರಚಿಸಿದವರ ಜೊತೆ ನಿತೀಶ್ ಕುಮಾರ್ ಮೈತ್ರಿ ಮಾಡಿಕೊಂಡಿಲ್ಲವೇ, ತಮಿಳುನಾಡು, ಕೇರಳದಲ್ಲಿ ಮುಸ್ಲಿಂ ಲೀಗ್ ಜೊತೆ ಮೈತ್ರಿ ಮಾಡಿಕೊಂಡಿಲ್ಲವೇ ಎಂದು ಪ್ರಶ್ನಿಸಿದರು. ಕಾರ್ಯಕ್ರಮಕ್ಕೂ ಮುನ್ನಾ ಹುಬ್ಬಳ್ಳಿ ನಗರದಲ್ಲಿರುವ ಮೂರು ಸಾವಿರ ಮಠಕ್ಕೆ ಭೇಟಿ ನೀಡಿ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಇದೆ ಸಂದರ್ಭದಲ್ಲಿ ಎಲ್ಲರೂ ಒಗ್ಗೂಡುವುದು ಒಳ್ಳೆಯ ಬೆಳವಣಿಗೆ. ಈ ಹೊಂದಾಣಿಕೆಯು ರಾಜ್ಯದ ಜನರಿಗೆ ಮುಂದಿನ ದಿನಗಳಲ್ಲಿ ಒಳ್ಳೆಯದಾಗಲಿದೆ ಎಂದು ಸ್ವಾಮೀಜಿಗಳು ವಿಶ್ವಾಸದ ಮಾತನಾಡಿ, ದೂರವಾಣಿ ಮೂಲಕ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ ಅವರ ಆರೋಗ್ಯ ವಿಚಾರಿಸಿದರು.



ಕಾರ್ಯಕ್ರಮಕ್ಕೂ ಮುನ್ನ ಜಿ.ಟಿ. ದೇವೇಗೌಡ ಹುಬ್ಬಳ್ಳಿ ನಗರದ ಮೂರು ಸಾವಿರ ಮಠಕ್ಕೆ ಭೇಟಿ ನೀಡಿ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ರಾಷ್ಟ್ರೀಯ ಉಪಾಧ್ಯಕ್ಷರಾದ ವಿವೇಕ್ ರಾವ್ ಪಾಟೀಲ್, ಕೋರ್ ಕಮಿಟಿ ಸಂಚಾಲಕರಾದ ವೈಎಸ್‌ವಿ ದತ್ತ, ಸದಸ್ಯರುಗಳಾದ ಅಲ್ಕೋಡ್ ಹನುಮಂತಪ್ಪ, ಹೆಚ್.ಕೆ.ಕುಮಾರಸ್ವಾಮಿ, ಬಂಡೆಪ್ಪ ಕಾಶಂಪೂರ್, ನಾಡಗೌಡ, ರಾಜೂಗೌಡ, ಸುರೇಶಗೌಡ, ಕೃಷ್ಣಾರೆಡ್ಡಿ, ಪ್ರಸನ್ನ ಕುಮಾರ್, ದೊಡ್ಡಪ್ಪಗೌಡ ಪಾಟೀಲ್, ವೀರಭದ್ರಪ್ಪ ಹಾಲರವಿ, ತಿಮ್ಮರಾಯಪ್ಪ, ಸುಧಾಕರ್ ಶೆಟ್ರು, ಬೆಳಗಾವಿ ಲೋಕಸಭಾ ಕ್ಷೇತ್ರದ ಅಧ್ಯಕ್ಷರು, ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಅಧ್ಯಕ್ಷರು, ಪಕ್ಷದ ಅಭ್ಯರ್ಥಿಗಳು, ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡರುಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ನಾಳೆಯಿಂದ ಮೈಸೂರಲ್ಲಿ ಶರನ್ನವರಾತ್ರಿ ಪೂಜಾ ಮಹೋತ್ಸವ

ಮೈಸೂರು, ಅ. 13– ಮೈಸೂರಿನ ಶ್ರೀ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಅ. 15 ರಿಂದ 24 ರವರೆಗೆ ಮೈಸೂರು ನಗರದ ಜಯನಗರದಲ್ಲಿರುವ ಶ್ರೀರಾಮ ಮಂದಿರದಲ್ಲಿ ಶರನ್ನವರಾತ್ರಿ ಪೂಜಾ ಮಹೋತ್ಸವವನ್ನು ಏರ್ಪಡಿಸಲಾಗಿದೆ.

ಶ್ರೀ ವೇಂಕಟಾಚಲ ಅವಧೂತ ಗುರು ಮಹಾರಾಜರ ಆಶೀರ್ವಾದ ಮತ್ತು ಶ್ರೀ ಅರ್ಜುನ ಅವಧೂತರ ಉಪಸ್ಥಿತಿಯಲ್ಲಿ ಪ್ರತಿದಿನ ಬೆಳಗ್ಗೆ ಶ್ರೀ ದುರ್ಗಾ ಸಪ್ತಶತಿ ಪಾರಾಯಣ ಮತ್ತು ಹೋಮ ನಡೆಯಲಿದೆ.

ಅ.15ರಂದು ಬೆಳಗ್ಗೆ 10 ಗಂಟೆಗೆ ಗಣಪತಿ ಹೋಮ ಮತ್ತು ನವಗ್ರಹ ಹೋಮ, ಅ.16ರಂದು ರುದ್ರ ಹೋಮ, ಅ.17ರಂದು ಸುಬ್ರಹ್ಮಣ್ಯ ಹೋಮ, ಅ.18ರಂದು ಪುರುಷ ಸೂಕ್ತ ಹೋಮ ಮತ್ತು ವಿಷ್ಣು ಪಾರಾಯಣ ಹೋಮ, ಅ.19 ರಂದು ಲಲಿತಾ ಹೋಮ, ಅ.20ರಂದು ಶ್ರೀ ಸೂಕ್ತ ಮತ್ತು ಮಹಾಲಕ್ಷ್ಮಿ ಹೋಮ ನಡೆಯಲಿದೆ.

ಅ.21ರಂದು ಬಗಳಮುಖಿ ಹೋಮ, ಅ.22ರಂದು ದುರ್ಗಾ ಹೋಮ ಹಾಗೂ ಅ.23ರಂದು ಚಂಡಿ ಹೋಮ ನಡೆಯಲಿದೆ. ಅ.17, 19 ಮತ್ತು 22 ರಂದು ಸಂಜೆ 7ರಿಂದ ರಾತ್ರಿ 9 ಗಂಟೆಯವರೆಗೆ ದುರ್ಗಾ ದೀಪ ನಮಸ್ಕಾರವನ್ನು ಏರ್ಪಡಿಸಲಾಗಿದ್ದು, ಪ್ರತಿದಿನ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ.

ಸಾರ್ವಜನಿಕರು ಮತ್ತು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಗವಂತನ ಕೃಪೆಗೆ ಪಾತ್ರರಾಗುವಂತೆ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಗೋಕುಲಂನಲ್ಲಿ ಮದಕರಿ ನಾಯಕರ ಜಯಂತಿ ಆಚರಣೆ



ಮೈಸೂರು, ಅ.13–ಮೈಸೂರಿನ ಗೋಕುಲಂನ ನಾಯಕರ ಕಾಲೋನಿಯಲ್ಲಿ ಐತಿಹಾಸಿಕ ಚಿತ್ರದುರ್ಗ ಸಂಸ್ಥಾನದ ಕೊನೆಯ ಅರಸ, ವೀರ ಮದಕರಿ ನಾಯಕರ ಜಯಂತಿಯನ್ನು ಆಚರಿಸಲಾಯಿತು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಮದಕರಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಚಿತ್ರದುರ್ಗ ಮತ್ತು ಮದಕರಿನಾಯಕ ಬೇರೆ ಬೇರೆಯಲ್ಲ ಒಂದೇ ಎಂಬ ಅವಿನಾಭಾವತೆ ಇಂದಿಗೂ ಜನಜನಿತವಾಗಿದೆ, ದುರ್ಗ ಎಂದರೆ ಮದಕರಿ, ಮದಕರಿ ಎಂದರೆ ದುರ್ಗ ಮದಕರಿನಾಯಕ ವೀರಾಧಿವೀರ, ರಾಷ್ಟ್ರ ಪುರುಷ, ಕೆಚ್ಚೆದೆಯ ಹೋರಾಟಗಾರರ, ದೇಶಭಕ್ತರ ಅದೆಷ್ಟೋ ವೀರಗಾಥೆಯನ್ನು ನಮ್ಮ ಕನ್ನಡ ನಾಡಿನಲ್ಲಿ ಈಗಲೂ ತನ್ನ ಕಾಲ ಗರ್ಭದಲ್ಲಿ ಹುದುಗಿಟ್ಟುಕೊಂಡಿದೆ. ಅಂತಹ ಕೆಚ್ಚೆದೆಯ ವೀರರಲ್ಲಿ ಶ್ರೇಷ್ಠ ಮದಕರಿ ನಾಯಕರೂ ಕೂಡ ಒಬ್ಬರು. ತನ್ನ ನಾಡಿಗಾಗಿ, ಪ್ರಜೆಗಳಿಗಾಗಿ ವಿಶ್ವಾಸದ್ರೋಹಿ ನವಾಬ ಹೈದರಾಲಿ ವಿರುದ್ಧ ರಣರಂಗದಲ್ಲಿ ಕೊನೆಯವರೆಗೂ ಹೋರಾಡಿ ವೀರಮರಣವನ್ನಪ್ಪಿದರೂ ತನ್ನ ಪ್ರಜೆಗಳಿಂದ 'ದುರ್ಗದ ಹುಲಿ' ಎನಿಸಿಕೊಂಡ ಮದಕರಿ ನಾಯಕ ಅವರನ್ನು ಹೈದರಾಲಿಯು ಮೋಸದಿಂದ ಬಂಧಿಸಿ, ಶ್ರೀರಂಗಪಟ್ಟಣದಲ್ಲಿ ಸೆರೆಯಾಗಿಟ್ಟು ಅನ್ನಕ್ಕೆ ವಿಷ ಹಾಕಿ ಶ್ರೀರಂಗಪಟ್ಟಣದಲ್ಲಿ ಕೊಲ್ಲಲಾಯಿತು. ಅವರ ಹೋರಾಟ ಆಡಳಿತದ ಅವಧಿಯಲ್ಲಿ ಮಾಡಿದ ಕೆಲಸಗಳು ಇಂದಿಗೂ ಸ್ಮರಣೀಯ. ಅವರನ್ನು ರಾಜ್ಯದ ಜನ ಗೌರವಪೂರ್ವಕವಾಗಿ ನೆನಪಿಸಿಕೊಳ್ಳುತ್ತಾರೆ. ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಯಲ್ಲಿ ಮದಕರಿ ನಾಯಕರ ಸ್ಮಾರಕ ನಿರ್ಮಾಣ ಮಾಡಲು ಸರ್ಕಾರ ಕ್ರಮವಹಿಸಬೇಕೆಂದು ಆಗ್ರಹಿಸಿದರು ಈ ಸಂದರ್ಭದಲ್ಲಿ ಚಿಕ್ಕರಂಗನಾಯಕ, ದೇವರಾಜ ಬ್ಲಾಕ್ ಎಸ್‌ಟಿ ಘಟಕ ಕಾಂಗ್ರೆಸ್ ಅಧ್ಯಕ್ಷ ರಮೇಶ್ ನಾರಾಯಣ, ರವಿ, ಕೇಬಲ್ ಕಿಟ್ಟಿ ನಟರಾಜು, ಮಾದನಾಯಕ, ಮಹದೇವನಾಯಕ ಮತ್ತಿತರರು ಇದ್ದರು.

ನಾಳೆ ವಿಸ್ತಾರ ಸಹಸ್ರ ಚಂಡಿಕಾ ಹೋಮ

ಮೈಸೂರು, ಅ.13–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ ಅ.15ರಂದು ಬೆಳಗ್ಗೆ 9 ಗಂಟೆಗೆ ವಿಸ್ತಾರ ಸಹಸ್ರ ಚಂಡಿ ಹೋಮ ಆರಂಭಿಸಲಾಗುವುದು. ಪ್ರತಿಯೊಬ್ಬರಿಗೂ ಪ್ರತ್ಯೇಕ ಸಂಕಲ್ಪ ಮಾಡಲಾಗುವುದು.

ಮಧ್ಯಾಹ್ನ 12.30ಕ್ಕೆ ಮಹಾ ಪೂರ್ಣಾಹುತಿ ಮತ್ತು ಶ್ರೀಚಕ್ರ ನವಾವರಣ ಪೂಜೆ ನಡೆಯಲಿದೆ. ಹೆಚ್ಚಿನ ವಿವರಗಳಿಗಾಗಿ ಮೈ.ಕುಮಾರ್ ಅವರನ್ನು ಮೊಬೈಲ್ ಸಂಖ್ಯೆ 98451 83399 ಅಥವಾ 93421 83392 ಅನ್ನು ಸಂಪರ್ಕಿಸಬಹುದು.

60 ಉಗ್ರರ ಕೊಂದು 250 ಒತ್ತೆಯಾಳುಗಳ ರಕ್ಷಿಸಿದ ಇಸ್ರೇಲ್

ಟೆಲ್ ಅವೀವ್, ಅ.13–ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ಉಗ್ರ ಸಂಘಟನೆ ಹಮಾಸ್ ನಡುವಿನ ಸಂಘರ್ಷ ಏಳನೇ ದಿನವೂ ಮುಂದುವರಿದಿದೆ. ಇಸ್ರೇಲಿ ಸೇನೆಯು ಹಮಾಸ್ ಹೋರಾಟಗಾರರ ವಿರುದ್ಧ ನಡೆಸಿದ ಕಾರ್ಯಾಚರಣೆಯ ಒಂದು ವೀಡಿಯೊವನ್ನು ಬಿಡುಗಡೆ ಮಾಡಿದೆ.

ವೀಡಿಯೊದಲ್ಲಿ, ಇಸ್ರೇಲಿ ಡಿಫೆನ್ಸ್ ಫೋರ್ಸ್ (ಐಡಿಎಫ್) ಸೈನಿಕರು ಕಾಂಪೌಂಡ್ ಒಳಗೆ ಪ್ರವೇಶಿಸಿ ಹಮಾಸ್ ಭಯೋತ್ಪಾದಕರ ಒತ್ತೆಯಾಳಾಗಿದ್ದ ಜನರನ್ನು ರಕ್ಷಿಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಬಾಡಿ ಕ್ಯಾಮರಾ ದೃಶ್ಯಗಳನ್ನು ಹಂಚಿಕೊಂಡಿರುವ IDF, 'ಇಸ್ರೇಲಿ ಸೇನೆಯು ಗಾಜಾ ಭದ್ರತಾ ಬೇಲಿ ಬಳಿ ಕಾರ್ಯಾಚರಣೆ ನಡೆಸಿತು. ಈ ಅವಧಿಯಲ್ಲಿ, ಭಯೋತ್ಪಾದಕರ ಒತ್ತೆಯಾಳಾಗಿದ್ದ 250 ಜನರನ್ನು ಸೇನೆಯು ಸುರಕ್ಷಿತವಾಗಿ ರಕ್ಷಿಸಿದ್ದು 60 ಹಮಾಸ್ ಭಯೋತ್ಪಾದಕರನ್ನು ಹತ್ಯೆ ಮಾಡಿದೆ. ಅಲ್ಲದೆ ಕಾರ್ಯಾಚರಣೆ ವೇಳೆ 26 ಮಂದಿಯನ್ನು ಜೀವಂತವಾಗಿ ಸೆರೆಹಿಡಿಯಲಾಗಿದ್ದು ಇದರಲ್ಲಿ ಹಮಾಸ್ ದಕ್ಷಿಣ ನೌಕಾ ವಿಭಾಗದ ಉಪ ಕಮಾಂಡರ್ ಅಬು ಅಲಿ ಕೂಡ ಸೇರಿದ್ದಾನೆ. ಒತ್ತೆಯಾಳುಗಳನ್ನು ಹಿಡಿದಿಟ್ಟುಕೊಂಡಿರುವ ಕಟ್ಟಡವನ್ನು ಪತ್ತೆಹಚ್ಚುವ ಮೊದಲು ಡಜನ್‌ಗಿಂತಲೂ ಹೆಚ್ಚು ಸೈನಿಕರು ಹಲವಾರು ಕಟ್ಟಡಗಳ ಒಳಗೆ ಹೋಗುವುದನ್ನು ವಿಡಿಯೋದಲ್ಲಿ ಕಾಣಬಹುದಾಗಿತ್ತು. ಹಮಾಸ್ ಗಡಿ ಪೋಸ್ಟ್‌ನಲ್ಲಿ ಸೈನಿಕರು ಹಿಂದಿನಿಂದ ಗುಂಡು ಹಾರಿಸುವುದು ಮತ್ತು ಗ್ರೆನೇಡ್‌ಗಳನ್ನು ಎಸೆಯುವುದು ಕಂಡುಬಂದಿದೆ. ವೀಡಿಯೋದಲ್ಲಿ ಹಿರಿಯ ಅಧಿಕಾರಿಯೊಬ್ಬರು ಸೈನಿಕರಿಗೆ ಸೂಚನೆ ನೀಡುತ್ತಿರುವುದನ್ನು ಕೇಳಬಹುದು.

ಚಲನಚಿತ್ರೋತ್ಸವದ ಪ್ರಯುಕ್ತ ಸೆಲ್ಫಿ ಸ್ಟಿಕ್ ಸ್ಪರ್ಧೆ

ಮೈಸೂರು, ಅ.13– ಮೈಸೂರು ದಸರಾ ಚಲನಚಿತ್ರೋತ್ಸವ ಉಪಸಮಿತಿ ವತಿಯಿಂದ ಅ.16ರಂದು ಬೆಳಗ್ಗೆ 9.30ಕ್ಕೆ ನಗರದ ಮಾಲ್ ಆಫ್ ಮೈಸೂರ್‌ನ ಐನಾಕ್ಸ್‌ನಲ್ಲಿ ಚಲನಚಿತ್ರೋತ್ಸವನ್ನು ಚಂದನವನದ ನಟಿ ಮಿಲನ ನಾಗರಾಜ್ ಉದ್ಘಾಟಿಸಲಿದ್ದಾರೆ. ಚಲನಚಿತ್ರೋತ್ಸವದ ಪ್ರಯುಕ್ತ ಸೆಲ್ಫಿ ಸ್ಟಿಕ್ ಸ್ಪರ್ಧೆಯನ್ನು ಏರ್ಪಡಿಸಿದ್ದು, ನಗರದ ಮಾಲ್ ಆಫ್ ಮೈಸೂರ್‌ನ ಐನಾಕ್ಸ್ ಹಾಗೂ ಬಿ.ಎಮ್.ಹೆಚ್‌ನ ಡಿ.ಆರ್.ಸಿಯಲ್ಲಿರುವ ಸೆಲ್ಫಿ ಸ್ಟ್ಯಾಂಡ್‌ಗಳಲ್ಲಿ ಸೆಲ್ಫಿ ತೆಗೆದು @MYDFF2023 ಪೇಜ್‌ಗೆ ಟ್ಯಾಗ್ ಮಾಡುವ ಮೂಲಕ ಸೆಲ್ಫಿಸ್ಟಿಕ್ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಉತ್ತಮವಾದ ಮೂರು ಸೆಲ್ಫಿಗಳಿಗೆ ಪ್ರಶಸ್ತಿ ನೀಡಲಾಗುವುದು ಇಂದು ದಸರಾ ಚಲನಚಿತ್ರೋತ್ಸವ ಉಪ ಸಮಿತಿಯ ಉಪ ವಿಶೇಷಾಧಿಕಾರಿಗಳಾದ ಎಮ್.ಕೆ. ಸವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ ರಂಗ ಪ್ರಯೋಗಗಳ ದೃಶ್ಯ ಛಾಯಾಚಿತ್ರ ಪ್ರದರ್ಶನ

ಮೈಸೂರು, ಅ. 13–ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯು ರಂಗಾಯಣ ಮೈಸೂರು ಸಹಯೋಗದೊಂದಿಗೆ ನಾಡಹಬ್ಬ ದಸರಾ ಸಂದರ್ಭದಲ್ಲಿ 9 ದಿನಗಳ ಕಾಲ ಸಾಂಸ್ಕೃತಿಕ ರಾಜಧಾನಿಯಾದ ಮೈಸೂರಿನ ಪ್ರಸಿದ್ಧ ಹವ್ಯಾಸಿ ರಂಗ ತಂಡಗಳು ಪ್ರದರ್ಶಿಸಿದ ರಂಗ ಪ್ರಯೋಗಗಳ ದೃಶ್ಯ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ. ಪ್ರದರ್ಶನದಲ್ಲಿ ಕಳೆದ ಆರು ದಶಕಗಳಿಂದ ಮೈಸೂರಿನ ಮನೆ ಮಾತಾಗಿರುವ ರಂಗತಂಡಗಳಾದ ಸಮುದಾಯ, ಮಿತ್ರವಿಂದ ಗೋವಿಂದ, ಸಮತೆಂತೋ, ಅಮರಕಲಾ ಸಂಘ ಕಲಾಪ್ರಿಯ, ಕಲಾ ಸುರುಚಿ, ನಮನ ಕಲಾವೇದಿಕೆ, ಅಪ್ರವರಂಬೆ, ಕದಂಬ ರಂಗ ವೇದಿಕೆ, ಜನಮನ, ನಿರಂತರ ಅಭಿಯಂತರರು, ನಟನ, ರಂಗವಲ್ಲಿ, ರಂಗಸಂಗಮ, ಪರಿವರ್ತನ ರಂಗ ಸಮಾಜ, ಜಿಪಿಐಈಆರ್, ನಾದರಂಗ, ಗೆಜ್ಜೆ ಹೆಜ್ಜೆ, ಹೀಗೆಯೇ ಹಲವಾರು ರಂಗ ತಂಡಗಳ ನಾಟಕದ ವೈಭವವನ್ನು ದೃಶ್ಯ ಛಾಯಾಚಿತ್ರ ಪ್ರದರ್ಶನದಲ್ಲಿ ಪ್ರದರ್ಶಿಸಲಾಗುವುದು. ರಂಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಈ ಚಿತ್ರ ಪ್ರದರ್ಶನವನ್ನು ವೀಕ್ಷಿಸಿ ಮೈಸೂರಿನ ರಂಗ ಚಳುವಳಿಗೆ ಪ್ರೋತ್ಸಾಹ ನೀಡಬೇಕೆಂದು ಕೋರಲಾಗಿದೆ. ದೃಶ್ಯ ಛಾಯಾಚಿತ್ರ ಪ್ರದರ್ಶನವನ್ನು, ರಂಗಾಯಣದ ಆವರಣದಲ್ಲಿರುವ ಬಿವಿ ಕಾರಂತರ ಚಾವಡಿಯಲ್ಲಿ ಅ.15ರಂದು ಸಂಜೆ 5.30ಕ್ಕೆ ಡಿಸಿ ಡಾ. ಕೆ.ವಿ.ರಾಜೇಂದ್ರ ಉದ್ಘಾಟಿಸಲಿದ್ದಾರೆ. ವೇದಿಕೆಯ ಅಧ್ಯಕ್ಷ ಸುರೇಶ್ ಬಾಬು ಹಾಗೂ ರಂಗಾಯಣದ ಉಪನಿರ್ದೇಶಕರಾದ ನಿರ್ಮಲ ಮಠಪತಿ ಉಪಸ್ಥಿತರಿರಲಿದ್ದಾರೆ.

ನಾಳೆಯಿಂದ ದಸರಾ ಪುಸ್ತಕ ಮೇಳ ಉದ್ಘಾಟನೆ



ಮೈಸೂರು,ಅ.13– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಮೈಸೂರು ದಸರಾ ಮಹೋತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಮೈಸೂರು ದಸರಾ ಮಹೋತ್ಸವ–2023ರ ಅಂಗವಾಗಿ ಅಕ್ಟೋಬರ್ 15ರಿಂದ 23ರವರೆಗೆ ಮೈಸೂರು ದಸರಾ ಕನ್ನಡ ಪುಸ್ತಕ ಮಾರಾಟ ಮೇಳವನ್ನು ಹಳೆ ಡಿಸಿ ಆಫೀಸ್ ಪಕ್ಕದಲ್ಲಿರುವ ಓವೆಲ್ ಗ್ರೌಂಡ್ ಮೈದಾನದಲ್ಲಿ ಆಯೋಜಿಸಲಾಗಿದೆ.

ಅಕ್ಟೋಬರ್ 15ರಂದು ಸಂಜೆ 5 ಗಂಟೆಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶ್ರೀ ಶಿವರಾಜ ತಂಗಡಿಗೆ ಅವರು ಪುಸ್ತಕ ಮೇಳವನ್ನು ಉದ್ಘಾಟಿಸಲಿದ್ದಾರೆ.

ಪುಸ್ತಕ ಮೇಳದಲ್ಲಿ ಪ್ರತಿದಿನ ಹೆಸರಾಂತ ಸಾಹಿತಿಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ "ಸೆಲ್ಫಿ ವಿತ್ ಸಾಹಿತಿ" ಎಂಬ ಶೀರ್ಷಿಕೆ ಅಡಿ ಸಾಹಿತಿಗಳ ಜೊತೆ ಪುಸ್ತಕ ಮೇಳಕ್ಕೆ ಬರುವ ಸಾರ್ವಜನಿಕರಿಗೆ ಸೆಲ್ಫಿ ತೆಗೆದುಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ಪ್ರತಿದಿನ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು, ಅ.15ರಂದು ಎನ್.ಬಸವಯ್ಯ ಮತ್ತು ತಂಡದಿಂದ ಜಾನಪದ ಗಾಯನ ಅ.16ರಂದು ಪ್ರೊಫೆಸರ್ ಎಂ.ಕೃಷ್ಣೇಗೌಡ ಅವರಿಂದ ನಗೆ ನುಡಿ ಕಾರ್ಯಕ್ರಮ ಅ.17ರಂದು ಗಾನ ಸಾವಿರದ ಯಕ್ಷಗಾನ ಶಾಲೆ ವತಿಯಿಂದ ಕಂಸ ವಧೆ ಪ್ರಸಂಗ ಅ.18ರಂದು ವೈ.ಎಂ. ಪುಟ್ಟಣ್ಣಯ್ಯ ಮತ್ತು ತಂಡದ ವತಿಯಿಂದ ರಂಗ ಗೀತೆಗಳ ಕಾರ್ಯಕ್ರಮ ಅ.19ರಂದು ಡಾ.ಎಂ ಖಾಸಿಂ ಮಲ್ಲಿಗೆ ಮತ್ತು ತಂಡದ ವತಿಯಿಂದ ಸುಗಮ ಸಂಗೀತ ಅ.20ರಂದು ಉಷಾ ಬಿ. ಅವರಿಂದ ನೃತ್ಯ ಅ.21ರಂದು ಶ್ರೀಗಂಗಾಧರ ಮೂರ್ತಿ ಅವರಿಂದ ಪ್ರಾತ್ಯಕ್ಷಿಕೆ ಹಾಗೂ ಅ.22ರಂದು ಡಾ. ರಾಘವೇಂದ್ರ ಹೆಚ್.ಕುಲಕರ್ಣಿ ಅವರಿಂದ ಕರ್ನಾಟಕದಲ್ಲಿ ಶಿಲ್ಪಕಲೆಯ ವೈವಿಧ್ಯಗಳ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದಸರಾ ಬೊಂಬೆ ಪ್ರದರ್ಶನ

ಮೈಸೂರು, ಅ. 11–ಮೈಸೂರು, ಭಾರತ ವಿಕಾಸ ಪರಿಷದ್, ಮೈಸೂರು ಶಾಖೆ ಮತ್ತು ರಾಮ್‌ಸನ್ಸ್ ಬೊಂಬೆಮನೆ ಸಂಯುಕ್ತ ಆಶ್ರಯದಲ್ಲಿ ದಸರಾ ಬೊಂಬೆ ಪ್ರದರ್ಶನ ಏರ್ಪಡಿಸಲಾಗಿದೆ. ಸಾರ್ವಜನಿಕರಲ್ಲಿ ಈ ಸಾಂಪ್ರದಾಯಿಕ ಸಂಭ್ರಮಾಚರಣೆಯ ಅರಿವು ಮಹತ್ವವನ್ನು ತಿಳಿಸಿ ಮನೆ ಮನೆಯಲ್ಲೂ ಪಾರಂಪರಿಕ, ಆಕರ್ಷಕ ದಸರಾ ಬೊಂಬೆ ಪ್ರದರ್ಶನದ ಈ ಪರಂಪರೆಯನ್ನು ಮುಂದಿನ ಪೀಳಿಗೆಯೂ ಮುಂದುವರೆಸಿಕೊಂಡು ಹೋಗುವಂತೆ ಪ್ರೋತ್ಸಾಹಿಸುವುದೇ ಇದರ ಮೂಲ ಉದ್ದೇಶವಾಗಿದೆ. ಅ.18, 19, 20ರಂದು ಖುದ್ದಾಗಿ ನಿಮ್ಮ ಮನೆಗೆ ಬಂದು ಮೌಲ್ಯಮಾಪನ ಮಾಡಲಿದ್ದಾರೆ. ಪ್ರವೇಶ ಶುಲ್ಕ ರೂ. 200. ಮೊ. 9886329439.

ನಾಳೆ ಚಲನಚಿತ್ರೋತ್ಸವ ಉದ್ಘಾಟನೆ



ಮೈಸೂರು, ಅ.13– ಮೈಸೂರು ದಸರಾ ಮಹೋತ್ಸವ–2023ರ ಅಂಗವಾಗಿ ದಸರಾ ಚಲನಚಿತ್ರೋತ್ಸವ ಉಪಸಮಿತಿ ವತಿಯಿಂದ ಅ.15ರಂದು ಬೆಳಿಗ್ಗೆ 11:30ಕ್ಕೆ ನಗರದ ಕಲಾಮಂದಿರದಲ್ಲಿ ಚಲನಚಿತ್ರೋತ್ಸವ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಘನ ಉಪಸ್ಥಿತಿಯಲ್ಲಿ ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಉದ್ಘಾಟಿಸುವರು. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರ ಗೌರವ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರವರು ವಹಿಸುವರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆಯ ಮಹಾಪೌರ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ಸಮಾರಂಭದ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಅನಿಲ್ ಕುಮಾರ್ ಸಿ., ಜಿ.ಟಿ.ದೇವೇಗೌಡ, ರವಿಶಂಕರ್ ಡಿ, ಟಿ.ಎಸ್.ಶ್ರೀವತ್ಸ, ದರ್ಶನ್ ಧೃವನಾರಾಯಣ್, ಜಿ.ಡಿ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಹೆಚ್.ವಿಶ್ವನಾಥ್ ಡಾ. ಡಿ.ತಿಮ್ಮಯ್ಯ ಮಧು ಜಿ. ಮಾದೇಗೌಡ, ಸಿ.ಎನ್.ಮಂಜೇಗೌಡ ಸೇರಿದಂತೆ ಉಪಮಹಾಪೌರರಾದ ಡಾ. ಜಿ ರೂಪ ಭಾಗವಹಿಸುವರು. ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಚಲನಚಿತ್ರ ಕಲಾವಿದರು ಹಾಗೂ ಸಂಗೀತ ನಿರ್ದೇಶಕ ಸಾಧುಕೋಕಿಲ, ಹಿರಿಯ ಚಲನಚಿತ್ರ ಕಲಾವಿದರಾದ ಸುಧಾ ನರಸಿಂಹರಾಜು, ಚಲನಚಿತ್ರ ಕಲಾವಿದರಾದ ಮಿಲನ ನಾಗರಾಜ್, ಡಾರ್ಲಿಂಗ್ ಕೃಷ್ಣ, ಮಾನ್ವಿತಾ ಕಾಮತ್, ಮಯೂರಿ ಕ್ಯಾತರಿ ಹಾಗೂ ವೈಭವಿ ಶಾಂಡಿಲ್ಯ ಭಾಗವಹಿಸುವರು.

ಬೆಳಗ್ಗೆ 10 ಗಂಟೆಯಿಂದ ಸಾಧುಕೋಕಿಲ ಅವರ ತಂಡದಿಂದ ಹಾಸ್ಯ ಮತ್ತು ಮನರಂಜನಾ ಕಾರ್ಯಕ್ರಮ ನಡೆಯಲಿದೆ ಎಂದು ದಸರಾ ಚಲನಚಿತ್ರೋತ್ಸವ ಉಪಸಮಿತಿಯ ವಿಶೇಷಾಧಿಕಾರಿಗಳಾದ ಎಂ.ಕೆ.ಸವಿತಾ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 14 ಶನಿವಾರ 2023

ಸಂಪುಟ: 44 | ಸಂಚಿಕೆ: 179 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹ 4


'ಮೈಸೂರು ಮಿತ್ರ'ನ ಅ.15ರ ಸಂಚಿಕೆಯೊಂದಿಗೆ 12 ಪುಟಗಳ ದಸರಾ ವಿಶೇಷಾಂಕ ನೀಡಲಾಗುತ್ತಿದೆ.

ಹೊರ ರಾಜ್ಯದಿಂದ ಖರೀದಿಸಿ ರೈತರ ಕೃಷಿ ಪಂಪ್‌ಸೆಟ್‌ಗೆ 5 ಗಂಟೆ ವಿದ್ಯುತ್ ಪೂರೈಕೆ

*** ರಾಜ್ಯ ಸರ್ಕಾರ ತೀರ್ಮಾನ * ಮೂರು ಪಾಳಿಯಲ್ಲಿ ಐದು ಗಂಟೆ ವಿದ್ಯುತ್ ಕಲ್ಪಿಸಲು ವಿದ್ಯುತ್ ಕಂಪನಿಗಳಿಗೆ ಸೂಚನೆ * ಉಸ್ತುವಾರಿ ಸಚಿವರ ನೇತೃತ್ವದ ಸಮಿತಿಯಿಂದ ಪರಿಶೀಲನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು**







ಬೆಂಗಳೂರು, ಅ.13(ಕೆಎಂಶಿ)– ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ಇರುವುದರಿಂದ ಹೆಚ್ಚಾಗಿರುವ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಸಿ ಕೃಷಿ ಪಂಪ್‌ಸೆಟ್‌ಗಳಿಗೆ ಐದು ಗಂಟೆಗಳ ಕಾಲ ವಿದ್ಯುತ್ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ರೈತರಿಗೆ ಪ್ರತಿದಿನ ಮೂರು ಪಾಳಿಗಳಲ್ಲಿ ನಿರಂತರ ಐದು ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡುವಂತೆ ಹಾಗೂ ಲೋಡ್‌ಶೆಡ್ಡಿಂಗ್ ಆಗದಂತೆ ಎಚ್ಚರಿಕೆ ವಹಿಸಲು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಎಂಡಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಇಂಧನ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ನಿರ್ದೇಶನ ನೀಡಲಾಗಿದೆ. ಲಭ್ಯವಿರುವ ವಿದ್ಯುತ್ತಿನ ದಕ್ಷ ಹಂಚಿಕೆಯೂ ಅತೀ ಮುಖ್ಯವಾಗಿದ್ದು, ಎಸ್ಕಾಂಗಳ ಎಂ.ಡಿ.ಗಳು ಈ ಕುರಿತು ಹೆಚ್ಚಿನ ನಿಗಾ ವಹಿಸಿ ರೈತರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು.

ಎಲ್ಲ ಮುಖ್ಯ ಎಂಜಿನಿಯರುಗಳನ್ನು ಜಿಲ್ಲೆಗೊಬ್ಬರಂತೆ ನೋಡಲ್ ಅಧಿಕಾರಿಗಳಾಗಿ ನೇಮಕ ಮಾಡಲಾಗಿದ್ದು, ಅವರು ನಿರಂತರ 5 ಗಂಟೆ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ಅಡಚಣೆಯಾಗದಂತೆ ಖಾತರಿಪಡಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಇಂದಿನ ಸಭೆಯ ತೀರ್ಮಾನಗಳ ಪಾಲನೆಯಾಗುತ್ತಿರುವುದನ್ನು ಖಾತರಿಪಡಿಸಬೇಕು. ಕಳೆದ ಐದು ವರ್ಷಗಳಿಂದ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯ ಹೆಚ್ಚಳ ಕೇವಲ 4000 ಮೆಗಾವ್ಯಾಟ್‌ನಷ್ಟು ಮಾತ್ರ ಇದೆ. ರಾಜ್ಯದ ಒಟ್ಟಾರೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 32,000 ಮೆಗಾವ್ಯಾಟ್ ಇದ್ದರೂ ಇದರಲ್ಲಿ 16 ಸಾವಿರ ಮೆಗಾವ್ಯಾಟ್ ಸೌರ ವಿದ್ಯುತ್ ಆಗಿದ್ದು, ಇದು ಹಗಲು ಹೊತ್ತಿನಲ್ಲಿ ಮಾತ್ರ ಉತ್ಪಾದನೆ ಆಗುವುದರಿಂದ ಬೇಡಿಕೆ ನಿರ್ವಹಣೆಯಲ್ಲಿ ವ್ಯತ್ಯಯವಾಗುತ್ತಿದೆ. ಜೊತೆಗೆ ಕಲ್ಲಿದ್ದಲಿನಲ್ಲಿ ಕೆಲವು ಸಮಸ್ಯೆಗಳಿದ್ದುದನ್ನು ನಿವಾರಿಸಲಾಗಿದ್ದು, ಇದೀಗ ಆಮದು ಕಲ್ಲಿದ್ದಲು ಖರೀದಿಗೆ ಟೆಂಡರ್ ಕರೆಯಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ನವೆಂಬರ್‌ನಿಂದ ಉತ್ತರ ಪ್ರದೇಶದಿಂದ 300 ಮೆ.ವ್ಯಾ., ಪಂಜಾಬ್‌ನಿಂದ 600 ಮೆ.ವ್ಯಾ. ವಿದ್ಯುತ್ ಪಡೆಯಲಾಗುವುದು. ಕೆ.ಇ.ಆರ್.ಸಿ.. ಅನುಮೋದನೆಯೊಂದಿಗೆ 1500 ಮೆಗಾವ್ಯಾಟ್ ಅಲ್ಪಾವಧಿ ವಿದ್ಯುತ್ ▶ 7ನೇ ಪುಟಕ್ಕೆ

ರಾಜ್ಯದಲ್ಲಿ ಒಟ್ಟು 216 ಬರಪೀಡಿತ ತಾಲೂಕು



ಬೆಂಗಳೂರು, ಅ.13– 2023–24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಹೆಚ್ಚುವರಿ ಬರಪೀಡಿತ ತಾಲೂಕುಗಳನ್ನು ಘೋಷಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಹಿಂದೆ ನಡೆಸಿದ ಸಮೀಕ್ಷೆಯಲ್ಲಿ ರಾಜ್ಯದ 236 ತಾಲೂಕುಗಳ ಪೈಕಿ 161 ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕು ಹಾಗೂ 34 ತಾಲೂಕುಗಳನ್ನು ಸಾಧಾರಣ ಬರಪೀಡಿತವೆಂದು ಒಟ್ಟು 195 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಲಾಗಿತ್ತು. ಈ ಪೈಕಿ 22 ಸಾಧಾರಣ ಬರಪೀಡಿತ ತಾಲೂಕುಗಳಲ್ಲಿ ಮತ್ತೊಮ್ಮೆ ಬೆಳೆ ಹಾನಿ ಸಮೀಕ್ಷೆ ▶ 7ನೇ ಪುಟಕ್ಕೆ

ತೆಲಂಗಾಣ ಚುನಾವಣೆಗಾಗಿ ಕರ್ನಾಟಕದಲ್ಲಿ ಹಣ ಸಂಗ್ರಹ

ಕಾಂಗ್ರೆಸ್ ವಿರುದ್ಧ ಬಿಆರ್‌ಎಸ್ ಆರೋಪ

ಹೈದರಾಬಾದ್, ಅ.13– ದೇಶದಲ್ಲಿ ಪಂಚರಾಜ್ಯಗಳಾದ ರಾಜಸ್ತಾನ, ಮಧ್ಯಪ್ರದೇಶ, ತೆಲಂಗಾಣ, ಛತ್ತೀಸ್‌ಗಢ, ಮಿಜೋರಾಂನಲ್ಲಿ ಚುನಾವಣೆ ಘೋಷಣೆ ಆಗಿದ್ದು, ಚುನಾವಣಾ ಹಿನ್ನೆಲೆಯಲ್ಲಿ ರಾಜ್ಯದಿಂದ ಹಣ ಸಂಗ್ರಹ ಮಾಡುವ ಕೆಲಸ ನಡೆಯುತ್ತಿದೆಯೇ..? ಎಂಬ ಅನುಮಾನಗಳು ಮೂಡತೊಡಗಿವೆ. ಚುನಾವಣೆ ಘೋಷಣೆ ಆದ ಬೆನ್ನಲ್ಲೇ ರಾಜ್ಯದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸುತ್ತಿದ್ದು, ಚಿನ್ನದ ವ್ಯಾಪಾರಿಗಳು, ಬಿಲ್ಡರ್‌ಗಳು ಹಾಗು ಉದ್ಯಮಿಗಳನ್ನು ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ.

ಸುಮಾರು 200ಕ್ಕೂ ಅಧಿಕಾರಿಗಳ ತಂಡ ಬೆಂಗಳೂರಿನಲ್ಲಿ ಶೋಧ ಕಾರ್ಯ ನಡೆಸಿದ್ದು, ಸುಮಾರು 15 ಸ್ಥಳಗಳಲ್ಲಿ ದಾಖಲೆ ಪತ್ರಗಳ ಪರಿಶೀಲನೆ ನಡೆಸಿದ್ದಾರೆ. ಸಾಕಷ್ಟು ಉದ್ಯಮಿಗಳಿಂದ ಹಣ ವರ್ಗಾವಣೆ ಆಗಿರುವ ಮಾಹಿತಿ ಸಿಕ್ಕಿದೆ ಎನ್ನುವ ಮಾಹಿತಿ ▶ 7ನೇ ಪುಟಕ್ಕೆ

ವಿಶ್ವಕಪ್ ಕ್ರಿಕೆಟ್–2023
ಇಂದು ಭಾರತ–ಪಾಕಿಸ್ತಾನ ಹಣಾಹಣಿ

ರೋಚಕ ಪಂದ್ಯ ವೀಕ್ಷಣೆಗೆ ಕಾತರದಿಂದ ಕಾದಿರುವ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು



ಅಹಮದಾಬಾದ್, ಅ.13– ಇಡೀ ಕ್ರಿಕೆಟ್ ಜಗತ್ತೇ ಕಾತರದಿಂದ ಕಾಯುತ್ತಿರುವ ಅತಿಥೇಯ ಭಾರತ ಹಾಗೂ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ನಡುವಿನ ಹೈವೋಲ್ಟೇಜ್ ಪಂದ್ಯಕ್ಕೆ ಕ್ಷಣಗಣನೆ ಆರಂಭವಾಗಿದ್ದು, ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ವೇದಿಕೆ ಸಿದ್ಧವಾಗಿದೆ.

ಅ.14ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಪಂದ್ಯ ಆರಂಭವಾಗಲಿದ್ದು, ಉಭಯ ತಂಡಗಳು ವಿಶ್ವಕಪ್ ಪಂದ್ಯಾವಳಿಯ ಆರಂಭಿಕ ಎರಡೂ ಪಂದ್ಯಗಳಲ್ಲಿ ಗೆಲುವು ಸಾಧಿಸಿ ಆತ್ಮವಿಶ್ವಾಸದಿಂದ ಬೀಗುತ್ತಿದ್ದು, ತಮ್ಮದೇ ಆದ ರಣತಂತ್ರದೊಂದಿಗೆ ಕಣಕ್ಕಿಳಿಯುವುದರಿಂದ ಈ ಪಂದ್ಯ ಸಾಕಷ್ಟು ರೋಚಕತೆ ಸೃಷ್ಟಿಸಿದೆ.

7 ಬಾರಿ ಮುಖಾಮುಖಿಯಲ್ಲೂ ಗೆಲುವು: ಇದುವರೆಗೂ ನಡೆದಿರುವ ವಿಶ್ವಕಪ್ ಪಂದ್ಯಾವಳಿಗಳಲ್ಲಿ ಭಾರತ ಹಾಗೂ ಪಾಕಿಸ್ತಾನ 7 ಬಾರಿ(1992, 1996, 1999, 2003, 2011, 2015, 2019) ಮುಖಾಮುಖಿಯಾಗಿದ್ದು, ಎಲ್ಲಾ ಪಂದ್ಯಗಳನ್ನು ಗೆಲ್ಲುವ ಮೂಲಕ ಭಾರತ ಪಾಕಿಸ್ತಾನದ ವಿರುದ್ಧ ಪ್ರಾಬಲ್ಯ ಸಾಧಿಸಿದೆ. ಇನ್ನೂ ನಾಳಿನ ಪಂದ್ಯ ಗೆಲ್ಲುವ ಮೂಲಕ ಭಾರತ, ತನ್ನ ದಾಖಲೆಯನ್ನು 8–0ಗೆ ವಿಸ್ತರಿಸುವ ಗುರಿ ಹೊಂದಿದ್ದರೆ, ಅತ್ತ ಪಾಕಿಸ್ತಾನ ನಾಳಿನ ಪಂದ್ಯ ಗೆಲ್ಲುವ ಮೂಲಕ ಭಾರತದ ದಾಖಲೆ ಮುರಿಯುವ ವಿಶ್ವಾಸದಲ್ಲಿದೆ.

ಪಂದ್ಯದ ವಿವರ

ದಿನಾಂಕ: ಅ.14 (ಶನಿವಾರ)
ಸಮಯ: ಮಧ್ಯಾಹ್ನ 2 ಗಂಟೆ
ಸ್ಥಳ: ಅಹಮದಾಬಾದ್, ನರೇಂದ್ರ ಮೋದಿ ಸ್ಟೇಡಿಯಂ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ
ಫ್ರೀ ಲೈವ್ ಸ್ಟ್ರೀಮಿಂಗ್: ಡಿಸ್ನಿ ಪ್ಲಸ್ ಹಾಟ್ ಸ್ಟಾರ್

ಸುರಕ್ಷತಾ ದಸರಾಗೆ 8,000 ಪೊಲೀಸರ ನಿಯೋಜನೆ



ಮೈಸೂರು, ಅ. 13(ಆರ್‌ಕೆ)– 2023ರ ಮೈಸೂರು ದಸರಾ ಮಹೋತ್ಸವಕ್ಕೆ ಬರೋಬ್ಬರಿ 8,000 ಮಂದಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗುವುದು.

ಇದೇ ಮೊದಲಿಗೆ ಅತೀ ಹೆಚ್ಚು ಮಂದಿ ಪೊಲೀಸರನ್ನು ನವರಾತ್ರಿ ಉತ್ಸವದ ಬಂದೋಬಸ್ತ್‌ಗಾಗಿ ಬಳಸಿಕೊಳ್ಳುತ್ತಿದ್ದು, ಇನ್ನಿಲ್ಲದ ಕಟ್ಟೆಚ್ಚರ ವಹಿಸಲಾಗಿದೆ. ಸರ್ಕಾರದ ಸ್ತ್ರೀಶಕ್ತಿ ಯೋಜನೆಯಿಂದ ಹೆಚ್ಚಿನ ಸಂಖ್ಯೆಯ ಮಹಿಳೆಯರು ಉಚಿತ ಪ್ರಯಾಣ ಸೌಲಭ್ಯ ಬಳಸಿಕೊಂಡು ದಸರೆಗೆ ಆಗಮಿಸುವ ನಿರೀಕ್ಷೆ ಇರುವುದರಿಂದ ಹಾಗೂ ಮಹಿಷಾ ದಸರಾ ಆಚರಣಾ ವಿವಾದದ ಹಿನ್ನೆಲೆಯಲ್ಲಿ ಈ ವರ್ಷ ಅತೀ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲು ಪ್ರಮುಖ ಕಾರಣವಾಗಿದೆ.

ಹೊರ ಜಿಲ್ಲೆಗಳಿಂದ ಒಟ್ಟು 6,000 ಸಿಬ್ಬಂದಿಯನ್ನು ದಸರಾ ಮಹೋತ್ಸವಕ್ಕೆ ಕರೆಸಿಕೊಳ್ಳಲಾಗುತ್ತಿದ್ದು, 3,000 ಮಂದಿ ಗೃಹರಕ್ಷಕ ದಳ, ಡಿಎಆರ್, ಕೆಎಸ್‌ಆರ್‌ಪಿ ತುಕಡಿಗಳ ಪೊಲೀಸರು ಇಂದು ಮೈಸೂರು ತಲುಪಿದ್ದಾರೆ. ▶ 7ನೇ ಪುಟಕ್ಕೆ

ಗುತ್ತಿಗೆದಾರರು, ಮಾಜಿ ಕಾರ್ಪೋರೇಟರ್ ಮನೆಗಳ ಮೇಲೆ ಐಟಿ ದಾಳಿ: ಮಂಚದಡಿ ಸಿಕ್ತು 42 ಕೋಟಿ ನಗದು

■ ರಾಜ್ಯದ ಪ್ರಮುಖ ರಾಜಕಾರಣಿ ಪುತ್ರ ಸೇರಿ ಹಲವರ ವಿಚಾರಣೆ
■ ಬಿಜೆಪಿ ನಾಯಕರ ಆರೋಪದಲ್ಲಿ ಹುರುಳಿಲ್ಲ: ಸಿಎಂ, ಡಿಸಿಎಂ



ಬೆಂಗಳೂರು, ಅ.13 (ಕೆಎಂಶಿ)– ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಹಲವೆಡೆ ದಾಳಿ ನಡೆಸಿ, ಕೋಟ್ಯಾಂತರ ರೂ. ವಶಕ್ಕೆ ಪಡೆದಿದ್ದಾರೆ.

ರಾಜ್ಯದ ಪ್ರಮುಖ ರಾಜಕಾರಣಿಯ ಪುತ್ರನು ಸೇರಿದಂತೆ ಹಲವು ಗುತ್ತಿಗೆದಾರರು ಮತ್ತು ಮಾಜಿ ಪಾಲಿಕೆ ಸದಸ್ಯರನ್ನು ಐಟಿ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದ್ದಾರೆ. ತೆಲಂಗಾಣ ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಟ್ಟೆಚ್ಚರ ವಹಿಸಿರುವ ಐಟಿ ಅಧಿಕಾರಿಗಳು, ಹೈದರಾಬಾದ್‌ನಲ್ಲಿ ಹಲವೆಡೆ ದಾಳಿ ನಡೆಸಿ ಅಪಾರ ಪ್ರಮಾಣದಲ್ಲಿ ಹಣ ವಶಕ್ಕೆ ತೆಗೆದುಕೊಂಡಿದ್ದರು. ಅಲ್ಲಿ ದೊರೆತ ಸುಳಿವಿನ ಮೇರೆಗೆ ಚೆನ್ನೈನಿಂದ ಆಗಮಿಸಿದ್ದ ಐಟಿ ಅಧಿಕಾರಿಗಳು ಕಳೆದ ಎರಡು ದಿನಗಳಿಂದ ರಾಜಧಾನಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ದಾಳಿ ನಡೆಸಿ ಕೋಟ್ಯಾಂತರ ರೂ. ನಗದು ಹಾಗೂ ಇನ್ನಿತರ ದಾಖಲೆ–ಪತ್ರಗಳನ್ನು ಪತ್ತೆ ಮಾಡಿದ್ದಾರೆ.

ಸುಮಾರು 200 ಅಧಿಕಾರಿಗಳ ತಂಡವು ಶೋಧ ಕಾರ್ಯ ನಡೆಸಿದ್ದು, 26 ಸ್ಥಳಗಳಲ್ಲಿ ಪರಿಶೀಲನೆ ಮುಂದುವರೆಸಿದ್ದಾರೆ. ಸಾಕಷ್ಟು ಉದ್ದಿಮೆಗಳಿಂದ ಹಣ ವರ್ಗಾವಣೆಯಾದ ಮಾಹಿತಿ ಲಭ್ಯವಾಗಿದೆ. ಕಳೆದ ಒಂದು ವಾರದಿಂದ ದೆಹಲಿ, ▶ 7ನೇ ಪುಟಕ್ಕೆ

ಪರ್ಸೆಂಟೇಜ್ ಹಣವಿದು...!

ಬೃಹತ್ ಬೆಂಗಳೂರು ವ್ಯಾಪ್ತಿಯಲ್ಲಿ ನಡೆದ ಕಾಮಗಾರಿಯ 650 ಕೋಟಿ ರೂಪಾಯಿಯನ್ನು ಗುತ್ತಿಗೆದಾರರಿಗೆ ಬಿಡುಗಡೆ ಮಾಡಲಾಗಿತ್ತು. ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಪರ್ಸೆಂಟೇಜ್ ಸಂಗ್ರಹಿಸಿಡಲಾಗಿದ್ದ ಹಣವನ್ನು ಐಟಿ ಅಧಿಕಾರಿಗಳು ದಾಳಿ ನಡೆಸಿ ವಶಕ್ಕೆ ಪಡೆದಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಐಟಿ ದಾಳಿಗೂ, ನಮಗೂ ಸಂಬಂಧ ಇಲ್ಲ



ಐಟಿ ದಾಳಿಗೂ, ನಮಗೂ ಸಂಬಂಧವಿಲ್ಲ ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿ ನಾಯಕರು ಮಾಡುತ್ತಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದಿದ್ದಾರೆ. ಆಧಾರರಹಿತ ಆರೋಪಗಳಿಗೆ ನಾವು ಉತ್ತರಿಸುವ ಅಗತ್ಯವಿಲ್ಲ. ನಾವು ಯಾವ ರಾಜ್ಯಗಳಿಗೂ ಚುನಾವಣಾ ವೆಚ್ಚಕ್ಕಾಗಿ ಹಣ ಕಳುಹಿಸುವುದಿಲ್ಲ. ಇಲ್ಲಿಂದ ಹಣ ಹೋಗುತ್ತಿದೆ ಎಂದು ಹೇಳುವುದಕ್ಕೆ ಬಿಜೆಪಿ ನಾಯಕರು ನೋಡಿದ್ದಾರೆಯೇ ಎಂದು ಪ್ರಶ್ನಿಸಿದರು. ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇಂತಹ ದಾಳಿಗಳು ನಡೆಯುವುದಿಲ್ಲ. ರಾಜಕೀಯವಾಗಿ ಬಿಜೆಪಿಯೇತರ ರಾಜ್ಯಗಳಲ್ಲಿ ಈ ದಾಳಿಗಳು ನಿರಂತರವಾಗಿ ನಡೆಯುತ್ತಿರುತ್ತವೆ ಎಂದಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ರಾಜಕೀಯ ದುರುದ್ದೇಶದಿಂದ ಈ ರೀತಿಯ ದಾಳಿ ಮಾಡುತ್ತಿದ್ದಾರೆ ಎಂದು ಅವರು ದೂರಿದ್ದಾರೆ.

ಮೈಸೂರಲ್ಲಿ ಅದ್ದೂರಿಯಾಗಿ ನೆರವೇರಿದ 'ಮಹಿಷ ದಸರಾ'

ಮೂಲ ನಿವಾಸಿಗಳಿಂದ 'ಮಹಿಷ ಸಾಂಸ್ಕೃತಿಕ ಹಬ್ಬ'

● ಮನುವಾದಿಗಳು ಗನ್‌ವಾದಿಗಳು; ನಾವು ಪೆನ್ ವಾದಿಗಳು ● ಇಂತಹವರ ಹಬ್ಬ, ದೇವರು ನಮಗೆ ಬೇಕಿಲ್ಲ ● ಮಹಿಷ ದಸರಾ ತಡೆಯುವವರು ಅಡ್ರೆಸ್‌ಗಿಲ್ಲದಂತೆ ನಾಪತ್ತೆ ● ಚಾಮುಂಡೇಶ್ವರಿಗೆ ನರ ಬಲಿ ಕೊಡುವುದನ್ನು ತಡೆದಿದ್ದು ಹೈದರಾಲಿ

ಮೈಸೂರು, ಅ.13(ಬಿಎಲ್‌ಯು)– ಹಲವರ ವಿರೋಧ ಹಾಗೂ ಅಡೆತಡೆಗಳ ನಡುವೆ ಮೈಸೂರಿನಲ್ಲಿ ಇಂದು 'ಮಹಿಷ ದಸರಾ' ಯಶಸ್ವಿಯಾಗಿ ನೆರವೇರಿತು. ಮೈಸೂರಿನ ಪುರಭವನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಷಾಸುರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮಹಿಷ ದಸರಾ ಆಚರಣೆಗೆ ಚಾಲನೆ ನೀಡಲಾಯಿತು.

ರಾಜ್ಯದ ಮೂಲ ನಿವಾಸಿಗಳಿಂದ 'ಮಹಿಷ ಸಾಂಸ್ಕೃತಿಕ ಹಬ್ಬ' ಹಾಗೂ ಮೈಸೂರಿನ ಅಸ್ಮಿತೆಗಾಗಿ 'ಮಹಿಷ ದಸರಾ' ಆಚರಣೆ ಘೋಷ ವಾಕ್ಯದೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಮಹಿಷ ದಸರಾ ಆಚರಣಾ ಸಮಿತಿ ಆಯೋಜಿಸಿತ್ತು. ನಗರದ ಅಶೋಕಪುರಂನಿಂದ ಹೊರಟ ನೂರಾರು ಮಂದಿ, ಬೈಕ್ ರ್‍ಯಾಲಿ ಮೂಲಕ ಪುರಭವನಕ್ಕೆ ಆಗಮಿಸಿದರು. ಕಾರ್ಯಕ್ರಮಕ್ಕೂ ಮುನ್ನ ಪುರಭವನದಲ್ಲಿರುವ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. 'ಜೈ ಭೀಮ್' ಘೋಷಣೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಭೀಮ ಗೀತೆ ಹಾಗೂ ಕ್ರಾಂತಿ ಗೀತೆಗಳನ್ನು ಹಾಡಲಾಯಿತು. ಈ ವೇಳೆ ಸಂವಿಧಾನದ ಪೀಠಿಕೆಯನ್ನು ವಾಚನ ಮಾಡಲಾಯಿತು. ತರುವಾಯ ಬೋಧಿಸತ್ವ ಬಂತೇಜಿ ಅವರು ▶ 6ನೇ ಪುಟಕ್ಕೆ

ಅಂತೂ ಚಾಮುಂಡಿಬೆಟ್ಟದಲ್ಲಿ ಮಹಿಷ ದಸರಾ ತಡೆಯುವಲ್ಲಿ ನಾವು ಯಶಸ್ವಿಯಾಗಿದ್ದೇವೆ...

ಸಂಸದ ಪ್ರತಾಪ್ ಸಿಂಹ ಪ್ರತಿಕ್ರಿಯೆ



ಮೈಸೂರು, ಅ.13(ಬಿಎಲ್‌ಯು)– ಚಾಮುಂಡಿಬೆಟ್ಟದಲ್ಲಿ ಮಹಿಷ ದಸರಾ ಆಚರಣೆ ಮಾಡುವುದನ್ನು ತಡೆಯುವ ಮೂಲಕ ಅವರ ಸೊಕ್ಕು ಅಡಗಿಸಿದ್ದೇವೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಪ್ರತಿ ವರ್ಷ ಚಾಮುಂಡಿಬೆಟ್ಟಕ್ಕೆ ಹೋಗಿ ಮಹಿಷನಿಗೆ ಪುಷ್ಪಾರ್ಚನೆ ಮಾಡಿ ಚಾಮುಂಡೇಶ್ವರಿಯನ್ನು ನಿಂದಿಸುತ್ತಿದ್ದರು. ಆದರೆ ಈ ಬಾರಿ ಮಹಿಷ ದಸರಾಗೆ ವಿರುದ್ಧವಾಗಿ ಚಲೋ ಚಾಮುಂಡಿಬೆಟ್ಟ ನಡೆಸಲು ನಾವು ಕರೆ ಕೊಟ್ಟಿದ್ದೆವು. ಅಂತಿಮವಾಗಿ ಪೊಲಿಸರು ಅನುಮತಿ ನೀಡಲಿಲ್ಲ.

ಈ ಮೂಲಕ ಚಾಮುಂಡಿಬೆಟ್ಟದಲ್ಲಿ ನಡೆಸುತ್ತಿದ್ದ ಅನಾಚಾರ ಹಾಗೂ ಚಾಮುಂಡೇಶ್ವರಿಯನ್ನು ನಿಂದಿಸುವುದನ್ನು, ಅವಮಾನಕರವಾಗಿ ಮಾತನಾಡುವುದನ್ನು ತಡೆದಿದ್ದೇವೆ. ಇದರಿಂದ ಚಾಮುಂಡಿಬೆಟ್ಟದ ಪಾವಿತ್ರ್ಯತೆ ಉಳಿಸಿ, ಅವರ ಸೊಕ್ಕು ಅಡಗಿಸಿದ್ದೇವೆ. ಅಂತಿಮವಾಗಿ ನಮ್ಮ ಉದ್ದೇಶವನ್ನು ಸಾರ್ಥಕಗೊಳಿಸಿದ್ದೇವೆ ಎಂದಿದ್ದಾರೆ. ಚಾಮುಂಡಿಬೆಟ್ಟದಲ್ಲಿ ಮಹಿಷ ದಸರಾ ಆಚರಣೆಗೆ ಅವಕಾಶ ನೀಡದ ಮೈಸೂರು ಪೊಲೀಸರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇವತ್ತು ಟೌನ್‌ಹಾಲ್‌ನಲ್ಲಿ ನಡೆದಿರುವುದು ಮಹಿಷ ಉತ್ಸವವೇ ಹೊರತು, ಮಹಿಷ ದಸರಾ ವಲ್ಲ. ಮಹಿಷ ಉತ್ಸವಕ್ಕೆ ಪೊಲೀಸರು ಅನುಮತಿ ಕೊಟ್ಟಿದ್ದರೆ ಹೊರತು ಮಹಿಷ ದಸರಾಗೆ ಅಲ್ಲ. ಆದರೆ ಮಹಿಷ ದಸರಾ ಎಂದು ವೇದಿಕೆಯಲ್ಲಿ ಮಾತಾಡಿದ್ದಾರೆ ಎಂದು ಹೇಳಿದರು. ಗುಂಪು ಸೇರುವಂತಿಲ್ಲ, ರ್‍ಯಾಲಿ ಮಾಡುವಂತಿಲ್ಲ ಎಂದು ಪೊಲೀಸರು ಸೂಚನೆ ನೀಡಿದ್ದರೂ ▶ 6ನೇ ಪುಟಕ್ಕೆ



ಒಕ್ಕಲಿಗರು ಸಂಸ್ಕೃತಿ ಹೀನರು, ಪಶುಗಳು...! ಇದು ನಾನೇಳಿದ್ದಲ್ಲ, ಕುವೆಂಪು...: ಪ್ರೊ.ಭಗವಾನ್

■ ಈ ಮಾತು ನಾನೇಳಿದ್ರೆ ಹೊಡೆಯುತ್ತಾರೆ, ಕೊಲ್ಲುತ್ತಾರೆ
■ ಹಿಂದೂ ಧರ್ಮ ಬಿಟ್ಟಿದ್ದೇನೆ ಎಂದಿದ್ದರು ಕುವೆಂಪು
■ ಬ್ರಾಹ್ಮಣರು ಗೊಡ್ಡು ಸಂಪ್ರದಾಯವಾದಿಗಳು
■ ಶೂದ್ರರು ತಮ್ಮ ಗುಲಾಮರೆಂದು ಅವರು ಪರಿಗಣಿಸಿದ್ದಾರೆ

ಮೈಸೂರು, ಅ.13(ಬಿಎಲ್‌ಯು)– ಒಕ್ಕಲಿಗರು ಸಂಸ್ಕೃತಿ ಹೀನರು, ಪಶುಗಳು. ಹೀಗೆಂದು ನಾನೇಳಿದ್ದಲ್ಲ ಕುವೆಂಪು ಎಂದು ವಿಚಾರವಾದಿ ಪ್ರೊ.ಕೆ.ಎಸ್. ಭಗವಾನ್ ಹೇಳಿದ್ದಾರೆ.

ಮಹಿಷ ದಸರಾ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಮಾತನ್ನು ನಾನು ಹೇಳಿಲ್ಲ. ಬದಲಿಗೆ ಸ್ವತಃ ರಾಷ್ಟ್ರಕವಿ ಕುವೆಂಪು ಅವರೇ ಹೇಳಿದ್ದರು. ಈ ಕಾರಣದಿಂದ ನಾನು ಹಿಂದೂ ಧರ್ಮ ಬಿಟ್ಟು ಎಷ್ಟೋ ದಿನವಾಗಿದೆ ಎಂದೇಳುತ್ತಿದ್ದರು ಎಂದು ಪ್ರೊ.ಭಗವಾನ್ ತಿಳಿಸಿದರು. ತಾವು ಬರೆದ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿಯಲ್ಲಿ ಹಳ್ಳಿಗಾಡಿನ ಹಲವು ಚಿತ್ರಣಗಳನ್ನು ಕಣ್ಣ ಮುಂದೆ ತರುವ ಕುವೆಂಪು ಅವರು ಜಾತಿ ವ್ಯವಸ್ಥೆ ಪ್ರಸ್ತಾಪಿಸಿ, ಇದನ್ನು ಹೋಗಲಾಡಿಸುವಂತೆ ಬರೆದಿದ್ದಾರೆ. ಅಂತಿಮವಾಗಿ ಕಥಾ ನಾಯಕ ಬುದ್ಧ ಜಯಂತಿಯಂದು ಬೌದ್ಧ ಧರ್ಮ ಸ್ವೀಕಾರ ಮಾಡುವ ಮೂಲಕ ಕಾದಂಬರಿ ಕೊನೆಗೊಳಿಸಿದ್ದಾರೆ ಎಂದರು.

ನಾನು ಹಿಂದೂ ಧರ್ಮ ಬಿಟ್ಟು ಎಷ್ಟೋ ದಿನವಾಯಿತು ಎಂದೇಳುತ್ತಿದ್ದ ಕುವೆಂಪು ಅವರು, ಒಕ್ಕಲಿಗರನ್ನು ಸಂಸ್ಕೃತಿ ಹೀನರು, ಪಶುಗಳು ಎನ್ನುತ್ತಿದ್ದರು. ಆದರೆ ಹಿಂದೂ ಧರ್ಮ ಬಿಟ್ಟ ಕುವೆಂಪು ಅವರ ಆ ಮಾತುಗಳು ಅವರ ಶಿಷ್ಯರಿಗೆ ಆಗಲೂ ಅರ್ಥವಾಗಲಿಲ್ಲ, ಇಂದೂ ಕೂಡ ಅರ್ಥವಾಗಿಲ್ಲ ▶ 7ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಬಾಡಿಗೆದಾರ : (ಮನೆಗೆ ದುಬಾರಿ ಬಾಡಿಗೆ ಹೇಳಿದಾಗ)
"ಬಾಡಿಗೆ ಸ್ವಲ್ಪ ಕಡಿಮೆ ಮಾಡ್ಕೊಳ್ಳೀ!"
ಮನೆ ಮಾಲೀಕ : "ಬಾಡಿಗೆ ಕಮ್ಮಿ ಮಾಡೋಕಾಗಲ್ಲ. ಮಳೆಗಾಲದಲ್ಲಿ ಒಂದೈದನೂರು ರೂಪಾಯಿ ಕಡಿಮೆ ಕೊಡಿ.
ಮನೆ ಸ್ವಲ್ಪ ಸೋರುತ್ತೆ!"

ಮೈಸೂರು ಮಿತ್ರ
ಶನಿವಾರ, 14 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮಗೇನು ಗೊತ್ತಿದೆ ಮತ್ತು ಏನು ಗೊತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ –ಕನ್‌ಫ್ಯೂಶಿಯಸ್

ವೇದ ಸುಳ್ಳಾದರೂ { ನಿಷ್ಠೆಯಿದ್ದವನಿಗೆ
ಗಾದೆ ಸುಳ್ಳಾಗದು { ನಷ್ಟವಿಲ್ಲ

ನಿಮ್ಮ ಪತ್ರಗಳು

ಸಂಸದ ಪ್ರತಾಪ್ ಸಿಂಹರಿಗೆ ಧನ್ಯವಾದಗಳು

ಮಾನ್ಯರೆ,

ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ್ ಸಿಂಹ ಪಕ್ಷದ ಸೂಚನೆಯ ಮೇರೆಗೋ ಅಥವಾ ಸ್ವಹಿತಾಶಕ್ತಿಗೂ, ಇನ್ನಾರ ಮೆಚ್ಚಿಗೆಗೋ ಅಥವಾ ಮತ್ತೊಬ್ಬರ ವಿರೋಧಕ್ಕೋ ಮಹಿಷಾ ದಸರ ಆಚರಣೆ ವಿರೋಧವಾಗಿ ಸಂಘರ್ಷದ ಮಾತುಗಳನ್ನಾಡುತ್ತಾ ಪ್ರಚೋದನಾತ್ಮಕವಾಗಿಯೇ ಪ್ರಚಾರ ಪಡೆಯುತ್ತಿರುವುದು ಸುಳ್ಳಲ್ಲ. ಇವರ ಹೇಳಿಕೆ ಯಾರಿಗೆ ಹುರುಳಾಗಿ ಪರಿಣಮಿಸುತ್ತದೆ ಗೊತ್ತಿಲ್ಲ. ಈ ಸ್ಥಿತ್ಯಂತರಕ್ಕೆ ಅವರೆ ನೇರ ಹೊಣೆಗಾರರು ಎಂಬುದನ್ನು ಪೊಲೀಸ್ ಇಲಾಖೆ ಮತ್ತು ಸರ್ಕಾರ ಗಮನಿಸಬೇಕು.

ಚಾಮುಂಡಿ ನಮ್ಮ ದೇವತೆ ಎಂದು ನಂಬಿ ಪೂಜಿಸಲು ಎಲ್ಲರಿಗೂ ಸ್ವತಂತ್ರವಿದೆ. ಅದೇ ರೀತಿ ಮಹಿಷರನ್ನು ನಮ್ಮ ದೇವರು ಎಂದು ಪೂಜಿಸುವವರಿಗೂ ಸಂವಿಧಾನ ಅಷ್ಟೇ ಧಾರ್ಮಿಕ ಸ್ವಾತಂತ್ರ ನೀಡಿದೆ. ಹೀಗಿರುವಾಗ ಮತ್ತೊಬ್ಬರ ಧಾರ್ಮಿಕ ಆಚರಣೆಗೆ ಅಡ್ಡಿ ಪಡಿಸುವುದು ಸರಿಯೇ? ಸಿಂಹರ ವಿರೋಧದಿಂದ ಮಹಿಷನ ಬಗ್ಗೆ ಅರಿವಿಲ್ಲದ ಅನೇಕರಿಗೆ ಆತನೊಬ್ಬ ಬೌದ್ಧ ದೊರೆ, ರಾಕ್ಷಸನಲ್ಲ ಎಂಬಿತ್ಯಾದಿ ಸತ್ಯಸಂಗತಿಗಳನ್ನು ತಿಳಿಯಲು ಸಾಧ್ಯವಾಯಿತು. ಆದ್ದರಿಂದ ಸಂಸದ ಪ್ರತಾಪ್ ಸಿಂಹರಿಗೆ ಧನ್ಯವಾದಗಳು.

–ದಡದಹಳ್ಳಿ ರಮೇಶ್, ಚಂದಕವಾಡಿ ಅಂಚೆ, ಚಾಮರಾಜನಗರ ಜಿಲ್ಲೆ.

ಸೌರಶಕ್ತಿ ಉತ್ಪಾದನೆಗೆ ಆದ್ಯತೆ ನೀಡಿ

ಮಾನ್ಯರೆ,

ರಾಜ್ಯದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಅಣೆಕಟ್ಟುಗಳಲ್ಲಿನ ನೀರಿನ ಸಂಗ್ರಹಣೆಯ ಪ್ರಮಾಣ ಕುಸಿತವಾಗಿದ್ದರ ಪರಿಣಾಮ ವಿದ್ಯುತ್ ಉತ್ಪಾದನೆಯಲ್ಲಿ ಗಣನೀಯ ಕುಂಠಿತಗೊಂಡಿದೆ. ಇದರಿಂದ ರಾಜ್ಯದಲ್ಲಿ ಅನಿಯಮಿತ ಲೋಡ್ ಶೆಡ್ಡಿಂಗ್ ಸಮಸ್ಯೆ ತಲೆದೋರಿದೆ.

ಕರ್ನಾಟಕ ರಾಜ್ಯಕ್ಕೆ ಪ್ರತಿ ನಿತ್ಯ 15000 ಮೆಗಾ ವ್ಯಾಟ್ ವಿದ್ಯುತ್‌ನ ಅವಶ್ಯಕತೆಯಿದೆ. ರಾಜ್ಯದಲ್ಲಿ ಪ್ರತಿನಿತ್ಯ 8852 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿತ್ತು. ಆದರೆ ಕೆಲವು ದಿನಗಳಿಂದ ತಾಂತ್ರಿಕ ಕಾರಣಗಳಿಂದ 3392 ಮೆಗಾವ್ಯಾಟ್‌ಗಳಿಗೆ ಇಳಿಕೆ ಕಂಡಿರುವುದು ರಾಜ್ಯದಲ್ಲಿ ಅನಿಯಮಿತ ಲೋಡ್ ಶೆಡ್ಡಿಂಗ್‌ಗೆ ಕಾರಣವಾಗಿದೆ.

ರಾಜ್ಯದಲ್ಲಿ 3 ರಿಂದ 4 ಸಾವಿರ ಮೆಗಾವ್ಯಾಟ್ ವಿದ್ಯುತ್ ಕಡಿಮೆ ಬಳಸಲು ಸರ್ಕಾರ ನಿರ್ಧಾರ ಮಾಡಿರುವುದು ಲೋಡ್ ಶೆಡ್ಡಿಂಗ್‌ಗೆ ಮತ್ತೊಂದು ಮುಖ್ಯ ಕಾರಣವಾಗಿದೆ. ಪ್ರಸ್ತುತ ಆಡಳಿತದಲ್ಲಿರುವ ಸರ್ಕಾರ ಗೃಹಜ್ಯೋತಿ ಎಂಬ ಮಹತ್ವಾಕಾಂಕ್ಷೆಯ ಯೋಜನೆಯನ್ನು ಜಾರಿಗೊಳಿಸಿದ್ದು ಇದರ ಪ್ರಕಾರ ರಾಜ್ಯದ ಪ್ರತಿ ಕುಟುಂಬಕ್ಕೆ 200 ಯೂನಿಟ್‌ನಷ್ಟು ಉಚಿತ ವಿದ್ಯುತ್ ನೀಡುವುದರಿಂದಾಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹೊರೆಯಾಗಿದ್ದು, ರಾಜ್ಯಕ್ಕೆ ಬೇಕಾದ ಹೆಚ್ಚುವರಿ ವಿದ್ಯುತ್ ಕೊಳ್ಳುವುದು ಕಷ್ಟವಾಗಬಹುದಾಗಿದೆ.

ರಾಜ್ಯ ಸರ್ಕಾರದ ಗೃಹಜ್ಯೋತಿ ಯೋಜನೆ ಬಡವರು ಮತ್ತು ಮಧ್ಯಮ ವರ್ಗದ ಜನಗಳಿಗೆ ಉತ್ತಮವಾಗಿದ್ದು, ಇದರಲ್ಲಿ ಉಳಿಯುವ ಹಣವನ್ನು ಬೇರೆ ವೆಚ್ಚಗಳನ್ನು ಭರಿಸಲು ಉಪಯೋಗಿಸಬಹುದಾಗಿದೆ. ಗೃಹಜ್ಯೋತಿ ಯೋಜನೆ ಸಮಾಜವಾದಿ ನೆಲೆಗಟ್ಟಿನ ಅತ್ಯಂತ ಉತ್ಕೃಷ್ಟ ಯೋಜನೆಯಾಗಿದ್ದರೂ ಆರ್ಥಿಕವಾಗಿ ಸದೃಢವಾಗಿರುವ ಜನಗಳನ್ನು ಈ ಯೋಜನೆಯಿಂದ ಕೈಬಿಟ್ಟು ಬಡವರಿಗೆ ಈ ಯೋಜನೆಯನ್ನು ವಿಸ್ತರಣೆ ಮಾಡಿದರೆ ಸರ್ಕಾರಕ್ಕೂ ಹೊರೆಯಾಗದೆ ಜನಗಳಿಗೆ ಈ ಯೋಜನೆ ತಲುಪುತ್ತದೆ.

ಗೃಹಜ್ಯೋತಿ ಯೋಜನೆಯನ್ನು ಬಡ ಜನತೆ ಮಾತ್ರ ಮೀಸಲಾಗುವಂತೆ ಈ ಯೋಜನೆಯನ್ನು ಪರಿಷ್ಕರಿಸಲು ಇದು ಸರ್ಕಾರಕ್ಕೆ ಉತ್ತಮ ಸಮಯವಾಗಿದೆ. ರಾಜ್ಯದಲ್ಲಿ ಪವನ ಶಕ್ತಿಯನ್ನು ಬಳಸಿ ಶಕ್ತಿ ಉತ್ಪಾದನೆ ಮಾಡಲಾಗುತ್ತಿದ್ದರೂ ಇದರ ಪ್ರಮಾಣ ಕಡಿಮೆಯಾಗಿದ್ದು, ಇದರ ಪ್ರಮಾಣವನ್ನು ಹೆಚ್ಚು ಮಾಡಬೇಕು. ಮತ್ತು ಸೌರ ಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಯನ್ನು ವ್ಯಾಪಕ ಪ್ರಮಾಣದಲ್ಲಿ ಜಾರಿಯಾಗುವಂತೆ ಮಾಡಬೇಕು.

ಪರಮಾಣು ಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳಿಗೆ ಸರ್ಕಾರ ಪ್ರೋತ್ಸಾಹ ನೀಡಿದರೆ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ. ರಾಜ್ಯ ಸರ್ಕಾರ ಪರ್ಯಾಯ ಮಾರ್ಗಗಳ ಮೂಲಕ ವಿದ್ಯುತ್ ಉತ್ಪಾದನೆ ಮಾಡವಲ್ಲಿ ಗಮನಹರಿಸಬೇಕೆಂದು ಅಗ್ರಹಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

ತಾಲೂಕು ಕಚೇರಿ ಅವ್ಯವಸ್ಥೆ ಸರಿಪಡಿಸಿ

ಮಾನ್ಯರೆ,

ನಂಜನಗೂಡು ತಾಲೂಕು ಕೇಂದ್ರವಾಗಿದ್ದು, ಕೈಗಾರಿಕೆಗಳು ಸುತ್ತ–ಮುತ್ತ ಬೆಳೆದಿರುವುದರಿಂದ ಸಹಜವಾಗಿ ತಾಲೂಕಿನ ಆಡಳಿತ ಕೇಂದ್ರ ಬಿಂದುವಾದ ತಾಲೂಕು ಕಚೇರಿಯೂ ಸದಾ ಜನ ಸಂದಣಿಯಿಂದ ಕೂಡಿರುತ್ತದೆ. ಆದರೆ ಇಲ್ಲಿ ಅವ್ಯವಸ್ಥೆಗಳು ತಾಂಡವವಾಡುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು. ಹಾಗೂ ಗಬ್ಬೆದ್ದು ನಾರುತ್ತಿರುವ ಶೌಚಾಲಯಗಳು ಹಾಗೂ ಕೆಟ್ಟು ನಿಂತಿರುವ ಲಿಫ್ಟ್‌ಗಳು.

ಕೋಟ್ಯಾಂತರ ರೂ. ಹಣ ವ್ಯವಹಾರ ನಡೆಸುವ ಇಲ್ಲಿನ ಉಪ ನೋಂದಣಾಧಿಕಾರಿಗಳ ಕಚೇರಿಗೆ ವಯಸ್ಸಾದವರು, ಅಂಗವಿಕಲರು, ಹೃದ್ರೋಗಿಗಳು ಬಂದರೆ ಅವರ ಕಷ್ಟ ದೇವರಿಗೆ ಪ್ರೀತಿ. ಜನಸ್ನೇಹಿ ಶಾಸಕರಾದ ದರ್ಶನ್ ಧ್ರುವನಾರಾಯಣ್ ಈ ಸಮಸ್ಯೆಗೆ ಕೂಡಲೇ ಇತ್ತ ಗಮನ ಹರಿಸುತ್ತಾರೆಂದು ಆಶೀಸೋಣವೇ.

–ಸುರೇಶ, ವಕೀಲರ ಸಂಘದ ಅಧ್ಯಕ್ಷರು, ನಂಜನಗೂಡು.

ಮನಸ್ಸಿದ್ದರೆ ಮಾರ್ಗ... ಒಳ್ಳೆಯ ಲೇಖನ

ಮಾನ್ಯರೆ,

ಶುಕ್ರವಾರ (ಅ.13) 'ಮೈಸೂರು ಮಿತ್ರ'ದಲ್ಲಿ ಪ್ರಕಟವಾದ ಸಿ.ಎಸ್.ರಾಘವೇಂದ್ರ ಅವರ 'ಮನಸ್ಸಿದ್ದರೆ ಮಾರ್ಗ' ಲೇಖನ ತುಂಬಾ ಚೆನ್ನಾಗಿತ್ತು. ಲೇಖಕರು ಬರೆದಂತೆ ಸಮಯವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ಸಾಧನೆ ಮಾಡಲು ಸಾಧ್ಯ. ಇತ್ತೀಚಿನ ದಿನಗಳಲ್ಲಿ ಅನೇಕರು ಮೊಬೈಲ್, ಸಾಮಾಜಿಕ ಜಾಲತಾಣಗಳಲ್ಲಿ ಸಮಯ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಕೆಲವರು ಇನ್ನೊಬ್ಬರ ಕಾಲು ಎಳೆಯುವುದರಲ್ಲಿ, ಇನ್ನೊಬ್ಬರ ಸುದ್ದಿ ಮಾತನಾಡುವುದರಲ್ಲಿ ಕಾಲಹರಣ ಮಾಡುತ್ತಿದ್ದಾರೆ. ಎಲ್ಲರಿಗೂ ಕಣ್ಣು ತೆರೆಸುವ ಲೇಖನ.


–ರಾಘವೇಂದ್ರ ಜೋಯಿಸ್, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಕಂಡದ್ದು... ಕೇಳಿದ್ದು... ಖರೀದಿಸುವ ಮುನ್ನ ಆಲೋಚಿಸಬೇಕು !!



> ಒಬ್ಬರು ಹೊಸದನ್ನು ತಂದಿದ್ದಾರೆ ಎಂದರೆ ಅಕ್ಕಪಕ್ಕದ ಮನೆಯವರೂ ಅಂತಹುದನ್ನು ಖರೀದಿಸಬೇಕು ಎಂಬ ಒತ್ತಡ ಆರಂಭವಾಗುತ್ತದೆ. ಅವರೂ ಅದರ ಉಪಯುಕ್ತತೆ ಬಗ್ಗೆ ಯೋಚಿಸದೇ ಅಂತಹುದನ್ನು ಸಾಲ ಮಾಡಿಯಾದರೂ ಖರೀದಿಸಿ ತರುತ್ತಾರೆ. ಇದು ಇಂದು ಮಧ್ಯಮ ವರ್ಗ ಹಾಗೂ ಶ್ರೀಮಂತ ವರ್ಗದ ಮನೋಭಾವವಾಗಿ ಕಂಡುಬರುತ್ತದೆ. ಹೊಸದನ್ನು ಖರೀದಿಸುವುದು ಸರಿ, ಆದರೆ ಹಳೆಯದನ್ನು ಏನು ಮಾಡುವುದು? ಎಂಬುದು ಹೊಸತನ್ನು ತಂದ ನಂತರ ಅರಂಭವಾಗುವ ಪ್ರಶ್ನೆ

ಪ್ರಪಂಚದಲ್ಲಿ ಅನೇಕ ಪ್ರಯೋಗಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಅನೇಕ ಕ್ಷೇತ್ರಗಳಲ್ಲಿ ವಿಜ್ಞಾನಿಗಳು ನಿರಂತರವಾಗಿ ಹೊಸದರ ಅನ್ವೇಷಣೆಯಲ್ಲಿ ತೊಡಗಿರುತ್ತಾರೆ. ಅವುಗಳ ಬಗ್ಗೆ ನಿರಂತರವಾದ ಸಂಶೋಧನೆಗಳು, ಪ್ರಯೋಗಗಳು ನಡೆಯುತ್ತಲೇ ಇರುತ್ತವೆ. ಅವುಗಳಲ್ಲಿ ಈಗಿರುವುದನ್ನು ಸುಧಾರಿಸುವುದಿರಬಹುದು ಅಥವಾ ಹೊಸದಾಗಿ ಕಂಡು ಹಿಡಿಯುವುದಿರಬಹುದು. ಅವುಗಳಿಂದ ಏನು ಪ್ರಯೋಜನವಾಗುತ್ತದೆ ಎಂಬುದು ಅವರಿಗೆ ಮುಂಚಿತವಾಗಿಯೇ ತಿಳಿದಿರಬೇಕು, ಆ ಬಗ್ಗೆ ಅವರಿಗೆ ಸ್ಪಷ್ಟ ಕಲ್ಪನೆಯೂ ಇರಬೇಕು. ಅಂತಹವರು ಆ ಒಂದು ವಿಷಯದ ಬಗ್ಗೆ ಹುಚ್ಚು ಹಿಡಿಸಿ ಕೊಂಡು ಅವುಗಳ ಅನ್ವೇಷಣೆಯಲ್ಲಿ ತೊಡಗುತ್ತಾರೆ. ಅವರಿಗೆ ತಾವು ಕಂಡು ಹಿಡಿಯುವ ವಸ್ತುವಿನಿಂದ ಮುಂದೆ ಜನರಿಗೆ ಹೇಗೆ ಅನುಕೂಲವಾಗುತ್ತದೆ ಎಂಬ ಅರಿವಿರುತ್ತದೆ. ಆರಂಭದ ಹಂತದಲ್ಲಿ ನಾನು ಇಂತಹ ವಸ್ತುವನ್ನು ಕಂಡುಹಿಡಿಯಲು ಹೊರಟಿದ್ದೇನೆ ಎಂದರೆ, ಅದು ಸಾಧ್ಯವೇ? ಎಂದು ಜನರು ಅಪಹಾಸ್ಯ ಮಾಡಿಬಿಡಬಹುದು. ಹಾಗಾಗಿ ಬಹುತೇಕರು ತಾವು ಏನು ಮಾಡಲು ಹೊರಟಿದ್ದೇವೆ ಎಂದು ಹೇಳುವುದೇ ಇಲ್ಲ. ತಾವಾಯಿತು, ತಮ್ಮ ಪ್ರಯೋಗವಾಯಿತು ಎಂಬಂತೆ ಕರ್ತವ್ಯದಲ್ಲಿ ನಿರತರಾಗಿರುತ್ತಾರೆ. ಅವರು ಹೊಸದನ್ನು ಕಂಡುಹಿಡಿದು, ಸಮಾಜದ ಮುಂದೆ ಬಹಿರಂಗಪಡಿಸಿದ ನಂತರವೂ ಅದನ್ನು ಕೆಲವರು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಅದರಲ್ಲಿರುವ ಹುಳುಕನ್ನು ಹುಡುಕಿ, ಅದನ್ನು ಬಹಿರಂಗಪಡಿಸಿ ಅದು ಇಂತಹ ಕಾರಣದಿಂದ ಉಪಯೋಗಕ್ಕೆ ಪೂರಕವಲ್ಲ ಎಂದು ಹೇಳುವ ಪ್ರಯತ್ನ ಮಾಡುತ್ತಾರೆ.

ಒಂದು ಕಾರಿನ ಕಂಪನಿ ಹೊಸದಾಗಿ ಒಂದು ಮಾಡೆಲನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮುನ್ನ ಅದರ ಬಗ್ಗೆ ತಾವೇ ಹಲವು ಪ್ರಶ್ನೆ ಹಾಕಿಕೊಂಡು, ಅವುಗಳ ಕೂಲಂಕಶ ಪರಿಶೀಲನೆ ನಂತರ ತೃಪ್ತಿಕರವಾಗಿದೆ ಎಂದ ನಂತರವೇ ಅದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾರೆ. ಮಾರುಕಟ್ಟೆಗೆ ಅದು ಬಂದ ನಂತರ ಅಂತಹುದೇ ಮತ್ತೊಂದು ಕಾರು ನಿರ್ಮಾಣ ಮಾಡುವ ಕಂಪನಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ತಾನು ಅದಕ್ಕಿಂತ ಉತ್ತಮವಾದ ಮಾಡೆಲ್ ತಯಾರಿಸಿ, ಮಾರುಕಟ್ಟೆಗೆ ಬಿಡುಗಡೆ ಮಾಡಲು ಹವಣಿಸುತ್ತದೆ. ಏಕೆಂದರೆ ಇದು ಆಧುನಿಕತೆಯ ಅವಿಷ್ಕಾರದ ಯುಗ. ಹೊಸಹೊಸದನ್ನು ಕಂಡು ಹಿಡಿದು ಮಾರುಕಟ್ಟೆಗೆ ಬಿಡುಗಡೆ ಮಾಡಿ ಹೆಸರು ಹಾಗೂ ಹಣ ಸಂಪಾದಿಸಬೇಕು ಎಂದು ಅವು ಬಯಸುತ್ತವೆ. ಇದು ಸಹಜವೂ ಹೌದು. ಹೊಸತು ಬರುತ್ತಲೇ ಇರಬೇಕು ಎಂಬ ಹಂಬಲ ಅವುಗಳಿಗಿರುವುದು ಸಹಜವೇ ಆಗಿರುತ್ತದೆ ಇಂದು ಒಂದು ಹೊಸ ಮಾಡೆಲನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿ, ಅದು ಮಾರುಕಟ್ಟೆಯಲ್ಲಿ ನಂಬರ್ 1 ಎಂದು ಅನಿಸಿಕೊಂಡರೂ ಆ ಕಂಪನಿ ಸುಮ್ಮನೆ ಕುಳಿತುಕೊಳ್ಳುವಂತಿಲ್ಲ. ಏಕೆಂದರೆ ಮತ್ತೊಂದು ಕಂಪನಿ ಉನ್ನತೀಕರಿಸಿದ ಮಾಡೆಲ್ ಬಿಡುಗಡೆಗೆ ಪ್ರಯತ್ನಿಸುತ್ತದೆ ಎಂಬುದು ಅವರಿಗೆ ಗೊತ್ತಿರುತ್ತದೆ. ಹಾಗಾಗಿ ತಾವು ಹೊಸದಾಗಿ ಒಂದು ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ ಕೂಡಲೇ ಅದಕ್ಕಿಂತ ಸುಧಾರಿಸಿದ ಮತ್ತೊಂದು ಮಾಡೆಲ್ ತಯಾರಿಕೆಗೆ ಅವು ಚಿಂತನೆ ಆರಂಭಿಸುತ್ತವೆ.

ಹೀಗೆ ಮಾರುಕಟ್ಟೆಯಲ್ಲಿ ಸ್ಪರ್ಧೆ ಹೆಚ್ಚಾದಂತೆ ಹೊಸತನ್ನು, ಸುಧಾರಿತ ಮಾಡಲ್ ಅನ್ನು ಬಿಡುಗಡೆ ಮಾಡಲು ಅವುಗಳು ಪ್ರಯತ್ನಿಸುತ್ತಲೇ ಇರುತ್ತವೆ. ಇದು ಅವುಗಳ ಅಸ್ತಿತ್ವದ ಪ್ರಶ್ನೆ. ಹಾಗಾಗಿ ಪ್ರತಿಯೊಂದು ಕಂಪನಿಯಲ್ಲೂ ಆರ್ ಅಂಡ್ ಡಿ (ರೀಸರ್ಚ್ ಅಂಡ್ ಡೆವಲಪ್‌ಮೆಂಟ್) ವಿಭಾಗ ಇದ್ದು, ಅವು ನಿರಂತರ ಹೊಸತಿನ ಕಡೆಗೆ ಗಮನ ಹರಿಸುತ್ತಿರುತ್ತವೆ.

ಹೀಗೆ ಕಂಪನಿಗಳೇನೋ ಹೊಸದನ್ನು ಅನ್ವೇಷಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತವೆ, ಆದರೆ ಜನರಿಗೆ ಅದರಿಂದ ಏನು ಅನುಕೂಲ? ಎಂಬುದು ಅವು ಮಾರುಕಟ್ಟೆಗೆ ಬಂದ ನಂತರವೇ ಗೊತ್ತಾಗುತ್ತದೆ. ಇಂದು ಜನರ ಸ್ವಭಾವ ಹೇಗಿದೆ ಎಂದರೆ ಏನೇ ಹೊಸತು ಬರಲಿ, ಅದು ನಮಗೆ ಉಪಯೋಗಕ್ಕೆ ಬರುವುದೋ ಇಲ್ಲವೋ ಎಂದು ಯೋಚಿಸದೇ, ಅದನ್ನು ಕೊಂಡುಕೊಂಡು ಬಿಡಬೇಕು. ತಾನು ಹೊಸದನ್ನು ಕೊಂಡುಕೊಂಡ ಮೊದಲಿಗನಾಗಬೇಕು ಎಂಬ ಹಂಬಲ ಬಹುತೇಕರಲ್ಲಿ ಕಂಡುಬರುತ್ತದೆ. ಹೀಗಾಗಿ ಮೊದಲು ಮನೆಗೆ ಒಂದು ಕಾರು ಎಂದಿದ್ದುದು ಇಂದು ಎರಡು–ಮೂರು ಎಂಬಂತೆ ಕಾರುಗಳನ್ನು ಖರೀದಿಸಿ ಮನೆಯ ಮುಂದೆ ನಿಲ್ಲಿಸಿಕೊಂಡು ಹೆಮ್ಮೆ ಪಡುತ್ತಾರೆ. ಅವುಗಳಿಂದ ತಮಗೆ ಏನು ಅನುಕೂಲ ಎಂಬುದನ್ನು ಅವರು ಯೋಚಿಸುವುದೇ ಇಲ್ಲ. ಕೇವಲ ತಮ್ಮ ವೈಭವವನ್ನು ಜನರ ಮುಂದೆ ತೋರ್ಪಡಿಸಬೇಕು ಎಂಬ ಹಂಬಲ. ಇಂತಹವರನ್ನು ಗಮನದಲ್ಲಿರಿಸಿಕೊಂಡೇ ಕಂಪನಿಗಳು ಹೊಸತುಗಳನ್ನು ಬಿಡುಗಡೆ ಮಾಡುತ್ತಲೇ ಇರುತ್ತವೆ. ಅದನ್ನು ಖರೀದಿಸುವುದರಿಂದ ತನಗೆ ಏನು ಅನುಕೂಲ ಎಂಬುದನ್ನು ಜನರು ಯೋಚಿಸುವುದಿಲ್ಲ. ಹಣ ಇದೆ ಎಂಬ ಒಂದೇ ಕಾರಣದಿಂದ ಖರೀದಿಗೆ ಮುಂದಾಗುತ್ತಾರೆ.

ಒಬ್ಬರು ಹೊಸದನ್ನು ತಂದಿದ್ದಾರೆ ಎಂದರೆ ಅಕ್ಕಪಕ್ಕದ ಮನೆಯವರೂ ಅಂತಹುದನ್ನು ಖರೀದಿಸಬೇಕು ಎಂಬ ಒತ್ತಡ ಆರಂಭವಾಗುತ್ತದೆ. ಅವರೂ ಅದರ ಉಪಯುಕ್ತತೆ ಬಗ್ಗೆ ಯೋಚಿಸದೇ ಅಂತಹುದನ್ನು ಸಾಲ ಮಾಡಿಯಾದರೂ ಖರೀದಿಸಿ ತರುತ್ತಾರೆ. ಇದು ಇಂದು ಮಧ್ಯಮ ವರ್ಗ ಹಾಗೂ ಶ್ರೀಮಂತ ವರ್ಗದ ಮನೋಭಾವವಾಗಿ ಕಂಡುಬರುತ್ತದೆ. ಹೊಸದನ್ನು ಖರೀದಿಸುವುದು ಸರಿ, ಆದರೆ ಹಳೆಯದನ್ನು ಏನು ಮಾಡುವುದು? ಎಂಬುದು ಹೊಸತನ್ನು ತಂದ ನಂತರ ಅರಂಭವಾಗುವ ಪ್ರಶ್ನೆ.

ಇತ್ತೀಚೆಗೆ ಪರಿಚಿತರೊಬ್ಬರು ಮಾರುಕಟ್ಟೆಯಲ್ಲಿ ಹೆಚ್ಚು ಪ್ರಚಾರದಲ್ಲಿರುವ ಒಂದು ಹೊಸ ಹಾಸಿಗೆಯನ್ನು ಖರೀದಿಸಿದರು. (ಪ್ರಚಾರಕ್ಕೆ ಮರುಳಾದವರು) ಹಿಂದಿನದನ್ನು ಖರೀದಿಸಿ ಬಹಳ ಸಮಯವೇನೂ ಆಗಿರಲಿಲ್ಲ, ಅದು ಚೆನ್ನಾಗಿಯೇ ಇತ್ತು, ಮಲಗಿದಾಗ ಸುಖ ನಿದ್ರೆಯೂ ಬರುತ್ತಿತ್ತು. ಆದರೆ ಮಾರುಕಟ್ಟೆ ಜಾಹಿರಾತು ಅವರಿಗೆ ಹೊಸದನ್ನು ಖರೀದಿಸುವ ಒತ್ತಡ ಉಂಟುಮಾಡಿತು. ಅಂತೆಯೇ ಖರೀದಿಸಿದರು. ಆಗ ಬಂದ ಪ್ರಶ್ನೆ: 'ಹಳೆಯದನ್ನು (ಅದೂ ಹೊಸತೇ!) ಏನು ಮಾಡುವುದು?' ಎಂದು. ಹೊಸ ಹಾಸಿಗೆ ಮಾರಿದ ಸಂಸ್ಥೆ ಹಳೆಯದನ್ನು ಪಡೆಯಲು (ಬೈ ಬ್ಯಾಕ್) ಒಪ್ಪಲಿಲ್ಲ. ನಾವು ಹೊಸದನ್ನು ಮಾತ್ರ ಮಾರುವುದು, ಹಳೆಯದನ್ನು ವಿನಿಮಯ ಮಾಡುವುದಿಲ್ಲ ಎಂದಿತು. ಹಾಗಾದರೆ ಹಳೆಯದನ್ನು ಏನು ಮಾಡುವುದು? ಎಂದರೆ ಆ ವ್ಯಾಪಾರಿಯೇ ಹೇಳುತ್ತಾರೆ, ಯಾರಿಗಾದರೂ ಕೊಟ್ಟುಬಿಡಿ ಅಥವಾ ಹಳೆಯದನ್ನು ಖರೀದಿಸುವವರಿಗೆ ನೀಡಿ ಎಂದು. ಆದರೆ ಹಳೆಯ ಹಾಸಿಗೆಯನ್ನು ಖರೀದಿಸುವವರು ಸಿಗುವುದಿಲ್ಲ. ಅದಕ್ಕೆ ಉಪಾಯ ಎಂದರೆ ಯಾರಿಗಾದರೂ ಹೇಳಿ, ಅವರು ಅದನ್ನು ತೆಗೆದುಕೊಂಡು ಹೋಗುತ್ತಾರೆ (ಹಣ ನೀಡದೇ), ಅವರಿಗೆ ವಾಹನದ ಬಾಡಿಗೆ ನೀವೇ ಕೊಡಬೇಕು ಎಂದು. ಹಾಗೆ ಪಡೆಯುವವರ ಹೆಸರನ್ನೂ ಅವರೇ ಹೇಳಿ, ಅಂತಹವರ ದೂರವಾಣಿ ಸಂಖ್ಯೆಯನ್ನೂ ಅವರೇ ನೀಡುತ್ತಾರೆ ಅಥವಾ ತಾವೇ ಕರೆ ಮಾಡಿ ಇವರಿಗೆ ಕೊಟ್ಟು ಮಾತನಾಡಿ ಎನ್ನುತ್ತಾರೆ. ಇವರು ಅವರಿಗೆ ವಿನಂತಿಸಿಕೊಂಡು ಹಳೆಯ ಹಾಸಿಗೆ ತೆಗೆದುಕೊಂಡು ಹೋಗಲು ಕೇಳಿಕೊಂಡರು. ಅದಕ್ಕೆ ಆತ ಇಷ್ಟು ವಾಹನ ಬಾಡಿಗೆ (ಸಾವಿರಾರು ರೂಪಾಯಿಗಳು) ಕೊಡಬೇಕಾಗುತ್ತದೆ ಎಂಬ ಬೇಡಿಕೆ ಮುಂದಿಡುತ್ತಾನೆ. ಇವರಿಗೆ ಬೇರೆ ದಾರಿಯಿಲ್ಲ, ಹಳೆ ಹಾಸಿಗೆ ಇದ್ದರೆ ಆದೇನೋ ಒಂದು ರೀತಿಯ ತೊಂದರೆ ಎಂಬ ಭಾವನೆ. ಹಾಗಾಗಿ ಒಪ್ಪಿ ಹಣ ನೀಡಿ, ಹಾಸಿಗೆಯನ್ನೂ ಸಾಗಿ ಹಾಕುತ್ತಾರೆ. ಇದು ನಮ್ಮ ಮಧ್ಯಮವರ್ಗದವರ ಮನೋಭಾವ. ಇಂತಹವರನ್ನು ಗಮನದಲ್ಲಿರಿಸಿಕೊಂಡೇ ಒಂದಷ್ಟು ಕಂಪನಿಗಳು ತಮ್ಮ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತವೆ. ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ಹಾಗೆ ಹೊಸ ಹಾಸಿಗೆ ಖರೀದಿಸಿದ ಮೇಲೆ ಹಳೆಯದನ್ನು ಯಾರಿಗಾದರೂ ಏಕೆ ಉಚಿತವಾಗಿ ನೀಡಬಾರದು? ಎಂಬುದು. ಯಾರೂ ಪಡೆಯಲು ಸಿಗದಿದ್ದಲ್ಲಿ ಯಾವುದಾದರೂ ಹಾಸ್ಟೆಲ್ಲಿಗೋ, ಮತ್ತೊಂದು ಅಗತ್ಯವಿರುವ ಸಂಸ್ಥೆಗೋ, ವ್ಯಕ್ತಿಗೋ ಏಕೆ ಕೊಡಬಾರದು? ಆದರೆ ವಾಸ್ತವ ಎಂದರೆ ಇಂತಹ ಅನೇಕ ಖರೀದಿದಾರರಿಗೆ ಅಂತಹ ಸಂಸ್ಥೆಗಳ ಪರಿಚಯವೇ ಇರುವುದಿಲ್ಲ. ಹಾಗಾಗಿ ಕಳೆಯದನ್ನು ಹೊರಹಾಕಲೂ(?) ದುಡ್ಡು ಖರ್ಚು ಮಾಡಬೇಕಾಗುತ್ತದೆ ಇಲ್ಲಿ ಹಾಸಿಗೆಯೂ ಹೋಯಿತು, ದುಡ್ಡೂ ಹೋಯಿತು ಎಂಬಂತಾಗುತ್ತದೆ.

ಇದು ಖರೀದಿಯ ಒಂದು ಭಾಗ. ಮತ್ತೊಂದು ನಮಗೆ ಅವಶ್ಯಕತೆ ಇದೆ ಎಂದು ಖರೀದಿಸುವ ರೀತಿ. ಅದು ಅವಶ್ಯಕ ಎಂದಾದ ಮೇಲೆ ಖರೀದಿಸಿದ್ದನ್ನು ಉಪಯೋಗಿಸಬೇಕು. ನಮ್ಮಲ್ಲಿ ಅನೇಕರಿಗೆ ಹಳೆಯದರ ಬಗ್ಗೆಯೇ ವ್ಯಾಮೋಹ. ಅದೂ ಸರಿಯೇ. ಆದರೆ ಅಗತ್ಯವಿದೆ ಎಂದೋ, ಮತ್ತಾವ ಕಾರಣಕ್ಕೋ ಹೊಸತನ್ನು ಖರೀದಿಸುತ್ತಾರೆ. ಹೊಸತನ್ನು ನಮ್ಮ ಮನೋಗುಣಕ್ಕೆ ಅನುಗುಣವಾಗಿ ಉಪಯೋಗಿಸಬೇಕಾಗುತ್ತದೆ. ನಮ್ಮ ಚಪ್ಪಲಿ ಹಳೆಯದಾಗಿದೆ ಎಂದು ಹೊಸತನ್ನು ಖರೀದಿಸುತ್ತೇವೆ. ಅನೇಕ ಸಲ ಹೊಸ ಚಪ್ಪಲಿ ಹಾಕಿದಾಗ ಅದು ಗಾಯಮಾಡುತ್ತದೆ (ಇದನ್ನು ಚಪ್ಪಲಿ ಕಚ್ಚುವುದು ಎಂದು ಹೇಳುತ್ತೇವೆ!). ಹಾಗಾದರೆ ಹೊಸದನ್ನು ಹಾಕಿಕೊಳ್ಳಬಾರದೇ? ಹಾಕಲೆಂದೇ ತಂದಿರುವುದರಿಂದ ಹಾಕಬೇಕು. ಆಗ ಅಂಗಡಿಯವನು ಹಾಗೂ ಅನುಭವದವರು ಹೇಳುತ್ತಾರೆ, ಹಾಕೊಂಡು ಓಡಾಡಿ, ಸ್ವಲ್ಪ ದಿನಗಳ ನಂತರ ಸರಿಹೋಗುತ್ತದೆ ಎಂದು. ಇಲ್ಲವೇ ಸ್ವಲ್ಪ ಎಣ್ಣೆ(?) ಹಚ್ಚಿಡಿ, ನಂತರ ಅದು ಮೃದುವಾಗುತ್ತದೆ, ಆಮೇಲೆ ಉಪಯೋಗಿಸಬಹುದು ಎಂದು. ಆಯ್ಕೆ ನಮಗೆ ಬಿಟ್ಟಿದ್ದು. ಹೊಸದು ಬೇಕು ಎಂದಾದಾಗ ಸ್ವಲ್ಪ ಕಚ್ಚಿಸಿಕೊಂಡು(!) ನಂತರ ಅದನ್ನು ಉಪಯೋಗಿಸಬೇಕು, ವಿಧಿ ಇಲ್ಲ. (ಇತ್ತೀಚೆಗೆ ಬರಿಗಾಲ ನಡಿಗೆ ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳುವುದನ್ನು ಕೇಳುತ್ತೇವೆ. ವೈದ್ಯರೇ ಹೀಗೆ ತಿಳುವಳಿಕೆ ನೀಡುತ್ತಿದ್ದಾರೆ. ಬರಿಗಾಲಲ್ಲಿ ನಡೆದರೆ ಅನೇಕ ಖಾಯಿಲೆಗಳು ಬರುವುದಿಲ್ಲ ಎಂದು ಹೇಳಲಾಗುತ್ತದೆ. ಅನೇಕ ವೈದ್ಯರು ನೀವು ವಾಯು ವಿಹಾರಕ್ಕೆ ಹೋಗುವಾಗ ಒಂದು ಕಿಲೋಮೀಟರಿ ನಷ್ಟಾದರೂ ಬರಿಗಾಲಲ್ಲಿ ನಡೆಯಿರಿ ಎಂದು ಹೇಳುತ್ತಾರೆ. ಆದರೆ ಮೊದಲಿನಿಂದಲೂ ಪಾದರಕ್ಷೆ ಹಾಕಿಕೊಂಡು ಅಭ್ಯಾಸವಾದ ನಮಗೆ ಬರಿಗಾಲಲ್ಲಿ ನಡೆಯುವುದು ಸಾಧ್ಯವೇ ಇಲ್ಲ ಎಂಬಂತಾಗಿದೆ. ಆರೋಗ್ಯ ಕೆಟ್ಟರೆ ಹೇಗೂ ಸರಿಪಡಿಸಿಕೊಳ್ಳಲು ಬೇಕಾದಷ್ಟು ಡಾಕ್ಟರ್ ಇದ್ದಾರೆ! ಮಾತ್ರೆಗಳಿವೆಯಲ್ಲ! ಎಂಬ ಮನೋಭಾವ)

ಇದೇ ರೀತಿ ಹಲವು ವಸ್ತುಗಳನ್ನು ಖರೀದಿಸಿದ ನಂತರ ನಾವು ಅದಕ್ಕೆ ಹೊಂದಿಕೊಳ್ಳಲು ಕಷ್ಟ ಪಡಬೇಕಾಗುತ್ತದೆ. ಆಗೆಲ್ಲಾ ಹಳೆಯದೇ ಸರಿಯಿತ್ತು, ಹೊಸದನ್ನು ಖರೀದಿಸಬಾರದಿತ್ತು ಎಂದೂ ಅನ್ನಿಸುವುದಿದೆ. ಆದರೆ ಬಳಸುತ್ತಾ ಅವು ನಮಗೆ ಹೊಂದಿಕೊಳ್ಳುತ್ತವೆ, ಇಲ್ಲವೇ ನಾವೇ ಅದಕ್ಕೆ ಹೊಂದಿಕೊಳ್ಳುತ್ತೇವೆ. ಖರೀದಿಸಿದ ಮೇಲೆ ಉಪಯೋಗಿಸುವುದು ಅನಿವಾರ್ಯ. ಹೊಸದಾದ್ದರಿಂದ ಬಿಸಾಡಲೂ ಆಗದ ಸ್ಥಿತಿ ನಮ್ಮದಾಗಿರುತ್ತದೆ. ಆದ್ದರಿಂದ ಖರೀದಿಗೆ ಮುನ್ನ ಯೋಚಿಸಬೇಕು. ಅದು ಅನಿವಾರ್ಯ ಎಂದಾದಾಗ ಮಾತ್ರ ಖರೀದಿಸಬೇಕು. ಸುಮ್ಮನೆ ಹಣ ಇದೆ ಎಂದು ಯಾವುದನ್ನೂ ಖರೀದಿಸಬಾರದು. ಅಗತ್ಯವಿಲ್ಲದ್ದು ಖರೀದಿಸಿದಾಗ ಕಸದಂತೆ ಕಂಡುಬರುತ್ತದೆ. ಆದರೆ ನಾವೇ ಖರೀದಿಸಿದ್ದು, ಆದ್ದರಿಂದ ನಾವೇ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಖರೀದಿಗೆ ವಿವೇಚನೆ ಬೇಕಾಗುತ್ತದೆ.

ಏನದ್ಭುತ ! ಒಂದೇ ತಿಂಗಳಲ್ಲಿ ಎರಡು ಗ್ರಹಣ...!

ಅಕ್ಟೋಬರ್ ತಿಂಗಳಲ್ಲಿ ಎರಡು ಗ್ರಹಣಗಳು ಸಂಭವಿಸಲಿವೆ. 14 ಅಕ್ಟೋಬರ್‌ಗೆ ಕಂಕಣಾಕಾರ ಸೂರ್ಯ ಗ್ರಹಣ ಹಾಗೂ 28 ಅಕ್ಟೋಬರ್‌ಗೆ ಖಂಡಗ್ರಾಸ ಚಂದ್ರಗ್ರಹಣ. 14 ಅಕ್ಟೋಬರ್‌ಗೆ ಸೂರ್ಯಗ್ರಹಣ ಭಾರತದಲ್ಲಿ ಗೋಚರಿಸುವುದಿಲ್ಲ. ಆದ್ದರಿಂದ ಗ್ರಹಣಾಚರಣೆ ಇರುವುದಿಲ್ಲ. ಸೂರ್ಯ ಗ್ರಹಣ ಯಾವಾಗಲೂ ಅಮಾವಾಸ್ಯೆಯ ದಿನ ಸಂಭವಿಸುತ್ತದೆ. ಅಲ್ಲದೇ ಈ ದಿನ ಮಹಾಲಯ ಅಮಾವಾಸ್ಯೆ ಎಂಬುದು ವಿಶೇಷ. ಈ ಸೂರ್ಯ ಗ್ರಹಣವು ಅಮೇರಿಕಾ, ಮೆಕ್ಸಿಕೋ, ಬ್ರೆಜಿಲ್, ಕೊಲಂಬಿಯಾ ದೇಶಗಳಲ್ಲಿ ಕಂಕಣಾಕೃತಿಯಿಂದ ಕಂಡು ಬರುತ್ತದೆ. ಇದು ಭಾರತ ದೇಶದಲ್ಲಿ ಕಂಡು ಬರುವುದಿಲ್ಲ.

28.10.2023 ರಂದು ಸಂಭವಿಸುವ ಚಂದ್ರಗ್ರಹಣವು ಭಾರತದಲ್ಲಿ ಸಂಭವಿಸುವ ಪಾರ್ಶ್ವ ಚಂದ್ರಗ್ರಹಣದ ಆಚರಣೆ ಉಂಟು. ಇದು ಆಂಶಿಕ ಚಂದ್ರಗ್ರಹಣವಾಗಿದ್ದು ಏಷಿಯಾ, ಆಸ್ಟ್ರೇಲಿಯಾ, ಆಫ್ರಿಕಾ, ಯೂರೋಪ್ ಹಾಗೂ ಅಮೇರಿಕಾಗಳಲ್ಲಿ ಖಂಡಗ್ರಾಸ ರೂಪದಿಂದ ದೃಷ್ಟಿ ಗೋಚರವಾಗಲಿದೆ. ಈ ಗ್ರಹಣವು ಅಶ್ವಿನಿ ನಕ್ಷತ್ರ, ಮೇಷ ರಾಶಿಯಲ್ಲಿ ರಾಹುಗ್ರಸ್ಥ ಚಂದ್ರ ಗ್ರಹಣವಾಗಲಿದೆ. ಗ್ರಹಣ ಸ್ಪರ್ಶ ಕಾಲ ರಾತ್ರಿ 1.04, ಗ್ರಹಣ ಮಧ್ಯ ಕಾಲ 1.44 ಹಾಗೂ ಗ್ರಹಣ ಮೋಕ್ಷ ಕಾಲ ರಾತ್ರಿ 2.24.

ಹಿಂದೂ ಧರ್ಮ ಪಾಲನೆ ಮಾಡುವವರು ಸನಾತನ ಧರ್ಮಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಈ ದಿನ ಹಗಲು 3.00 ಘಂಟೆಯವರೆಗೂ ಭೋಜನಕ್ಕೆ ಅವಕಾಶವಿದೆ. ವೃದ್ಧರು, ರೋಗಿಗಳು, ಅಶಕ್ತರು ಈ ದಿನ ಸೂರ್ಯಾಸ್ತದವರೆಗೂ ಆಹಾರ ಸೇವನೆ ಮಾಡಬಹುದು.



ಖಂಡಗ್ರಾಸ ಚಂದ್ರಗ್ರಹಣದ ಫಲ:

ಈ ಗ್ರಹಣವು ಅಶ್ವಿನಿ ನಕ್ಷತ್ರ, ಮೇಷ ರಾಶಿಯಲ್ಲಿ ಸಂಭವಿಸಲಿದ್ದು, ದ್ವಾದಶ ರಾಶಿಯವರಿಗೆ ಗ್ರಹಣ ಫಲ ಗ್ರಂಥೋಕ್ತ ಫಲ ಏನೆಂದು ತಿಳಿಯೋಣ.

ಮೇಷ: ಆರೋಗ್ಯ ಹಾಗೂ ಸ್ವಾಸ್ಥ್ಯ ವಿಚಾರಗಳಲ್ಲಿ ಅನಾನುಕೂಲ ಫಲವಿರುತ್ತದೆ. ಸಾಮಾಜಿಕ ಜೀವನದಲ್ಲಿ ಕಷ್ಟದಾಯಕ ಫಲಗಳು ಅನುಭವಕ್ಕೆ ಬರುತ್ತವೆ.

ವೃಷಭ: ಆರ್ಥಿಕ ಹಾನಿ, ವ್ಯಯಾಧಿಕ್ಯದಲ್ಲಿ ವೃದ್ಧಿ ಉಂಟಾಗುವುದು.

ಮಿಥುನ: ಇವರಿಗೆ ಕೆಲವು ಅನುಕೂಲಕರ ಪರಿಣಾಮದ ಆಶಾಭಾವನೆಯನ್ನು ಹೊಂದಬಹುದು. ಲಾಭ ವೃದ್ಧಿ ಸಂಭವ.

ಕಟಕ: ಈ ರಾಶಿಯವರಿಗೆ ಶುಭಫಲ ಹಾಗೂ ಸುಖ ವೃದ್ಧಿಗಳು ಉಂಟಾಗಲಿದೆ.

ಸಿಂಹ: ಈ ರಾಶಿಯವರಿಗೆ ಮಾನಾಪಮಾನ ಸಮಸ್ಯೆಗಳು ಉಂಟಾಗಿ ಅಶುಭಫಲದಾಯಕವಾಗಿದೆ.

ಕನ್ಯಾ : ಇವರಿಗೆ ಅಷ್ಟಮ ಭಾವದಲ್ಲಿ ಸಂಭವಿಸುವ ಫಲವಾಗಿ ಸ್ವಾಸ್ಥ್ಯದಲ್ಲಿ ಏರು–ಪೇರುಗಳು ಹಾಗೂ ಆರ್ಥಿಕ ಸಂಕಷ್ಟಗಳು ಪ್ರಾಪ್ತವಾಗಲಿದೆ.

ತುಲಾ : ಇವರಿಗೆ ಸಪ್ತಮ ಭಾವದಲ್ಲಿ ಸಂಭವಿಸುವ ಕಾರಣ ಜೀವನ ಸಾಥಿಯ ಸಂಬಂಧ ಅಶುಭ ಫಲ ಹಾಗೂ ಆರೋಗ್ಯದಲ್ಲಿ ವ್ಯತ್ಯಯ.

ವೃಶ್ಚಿಕ: ಈ ಚಂದ್ರಗ್ರಹಣವು ಇವರಿಗೆ ಸುಖ ವೃದ್ಧಿದಾಯಕವಾಗಿರುತ್ತದೆ.

ಧನುಸ್ಸು : ಇವರಿಗೆ ನಾನಾ ರೀತಿಯ ಚಿಂತೆಗಳು ಹೆಚ್ಚಾಗುವುದು. ಮಾನಸಿಕ ಖಿನ್ನತೆ ಕಾಡಿಸುತ್ತದೆ.

ಮಕರ : ಈ ರಾಶಿಯವರಿಗೆ ಕಷ್ಟದಾಯಕ ಫಲ. ಕಾರ್ಯಾನುಕೂಲವಿಲ್ಲ.

ಕುಂಭ : ಈ ರಾಶಿಯವರಿಗೆ ಶುಭ ಪರಿಣಾಮಗಳು ಅನುಭವಕ್ಕೆ ಬರುತ್ತವೆ.

ಮೀನ : ನಾನಾ ರೀತಿಯ ಹಾನಿಗಳು, ಹೂಡಿಕೆಗಳಲ್ಲಿ ನಷ್ಟವೆಂದು ಪ್ರತೀತವಾಗಿದೆ.

ಈ ಗ್ರಹಣವು ಮಧ್ಯರಾತ್ರಿಯಲ್ಲಿ ಸಂಭವಿಸುವುದರಿಂದ ನಿರಾಹಾರಿಗಳಾಗಿದ್ದು, ಬೆಳಗ್ಗೆ ಎದ್ದು ಸ್ನಾನ, ಸಂಧ್ಯಾವಂದನೆಗಳನ್ನು ಮಾಡುವುದು.

ಸರ್ವೇಷಾಂ ಮೇವ ವರ್ಣಾನಾಂ
ಸೂತಕಂ ರಾಹು ದರ್ಶನೇ !
ಸ್ನಾತ್ವಾ ಕರ್ಮಾಣಿ ಕರ್ವಾತ್
ಶೃತಮನ್ನಃ ವಿವರ್ಜಯೇತ್ !!

ಎಂಬ ಶೃತಿವಾಣಿಯಂತೆ ಸ್ನಾನ, ಜಪ, ಧ್ಯಾನ, ತಪ, ದಾನ, ಧರ್ಮ ಗಳನ್ನು ಮಾಡಿ ಗ್ರಹಣ ದೋಷವನ್ನು ಕಡಿಮೆ ಮಾಡಿಕೊಳ್ಳಬಹುದಾಗಿದೆ. ಒಂದೇ ಮಾಸದಲ್ಲಿ ಎರಡು ಗ್ರಹಣಗಳು ಸಂಭವಿಸುವುದು ದೇಶಕ್ಕೆ ಕ್ಷೋಭೆ ಉಂಟುಮಾಡುವ ವಿಚಾರವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಯುವ ಸಂಭ್ರಮಕ್ಕೆ ಹರ್ಷದಾಯಕ ತೆರೆ

ಕಡೆ ದಿನ ನವದುರ್ಗೆಯರ ದರ್ಶನ, ಕನ್ನಡ ನಾಡಿನ ಸಂಸ್ಕೃತಿ ಕುರಿತ ನೃತ್ಯ ವೈಭವ







ಮೈಸೂರು, ಅ.13(ಎಂಕೆ)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಮುನ್ನುಡಿಯಾದ 'ಯುವ ಸಂಭ್ರಮ' ಸಾಂಸ್ಕೃತಿಕ ಕಾರ್ಯಕ್ರಮವು ನವ ಶಕ್ತಿಯ ವೈಭವ... ಜೈಭೀಮ್ ಘೋಷಣೆ... ಕನ್ನಡ ನಾಡು–ನುಡಿ ಹಾಗೂ ಜಾನಪದ ಝಲಕ್‌ನೊಂದಿಗೆ ಅದ್ಧೂರಿಯಾಗಿ ತೆರೆ ಕಂಡಿತು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ 8 ದಿನಗಳ ಕಾಲ ಕಿಕ್ಕಿರಿದ ಯುವ ಸಮೂಹದ ನಡುವೆ ನೃತ್ಯ, ಸಂಗೀತ ರಸದೌತಣದೊಂದಿಗೆ ಯಶಸ್ವಿಯಾದ 'ಯುವ ಸಂಭ್ರಮ' ನವರಾತ್ರಿ ವೈಭವಕ್ಕೆ ಭವ್ಯ ಸ್ವಾಗತ ಕೋರಿತು.

ಯುವ ಸಂಭ್ರಮದ ಕಡೆಯ ದಿನ ನವ ದುರ್ಗೆಯರ ಅವತಾರ ದಿವ್ಯದರ್ಶನ, ಭಾರತ ಸಂವಿಧಾನದ ಮಹತ್ವ, ರಾಷ್ಟ್ರೀಯ ಭಾವೈಕ್ಯತೆ ಹಾಗೂ ಕನ್ನಡ ನಾಡಿನ ಸಂಸ್ಕೃತಿ ಕುರಿತು ಅಮೋಘ ನೃತ್ಯ ಪ್ರದರ್ಶನ ನೀಡಿದ ವಿವಿಧ ಕಾಲೇಜು ವಿದ್ಯಾರ್ಥಿಗಳು ಭರಪೂರ ಮನರಂಜನೆ ನೀಡಿದರಲ್ಲದೆ ಇಡೀ ಬಯಲು ರಂಗ ಮಂದಿರವೇ ಶಿಳ್ಳೆ–ಚಪ್ಪಾಳೆಯ ಝೇಂಕಾರದ ಕಡಲಲ್ಲಿ ತೇಲುವಂತೆ ಮಾಡಿದರು. ಬೆಂಗಳೂರಿನ ಕೆಎಲ್‌ಇ ಲಾ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಕಾಲೇಜು ತಂಡಗಳು 'ಐಗಿರಿ ನಂದಿನಿ' ಹಾಡಿಗೆ ನವ ಶಕ್ತಿಯ ವೈಭವ ದರ್ಶನ ಮಾಡಿಸಿದರೆ, ಮೈಸೂರು ವಿವಿ ಮೊಹಲ್ಲಾದ ಮಾತೃ ಮಂಡಳಿ ಬಾಲಕಿಯರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ದೇವ ಶ್ರೀ ಗಣೇಶ' ಆರಾಧನೆ ಮೂಲಕ ಭಕ್ತಿ ಸುಧೆ ಹರಿಸಿದರು.

ಹಾಗೆಯೇ 'ಹುಟ್ಟಿದರೆ ಕನ್ನಡ ನಾಡಲಿ' ಹುಟ್ಟಬೇಕು ಎಂಬ ಹಾಡಿನೊಂದಿಗೆ ಕನ್ನಡದ ಅಭಿಮಾನ ಮೆರೆದ ಬಿಡದಿಯ ಜ್ಞಾನವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಿಳಿಕೆರೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ಶ್ರೀ ಭೈರವೇಶ್ವರ ಗ್ರಾಮಾಂತರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ಕನ್ನಡದ ಮಾತು ಚೆನ್ನ.. ಕನ್ನಡದ ನುಡಿ ಚೆನ್ನ..' ಎನ್ನುವ ಮೂಲಕ ಯುವ ಸಂಭ್ರಮದಲ್ಲಿ ಸಂಭ್ರಮದ ಹೊಳೆ ಹರಿಸಿದರು. ಬಳಿಕ ಮೈಸೂರು ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಸಂಯುಕ್ತ ಪದವಿ ಪೂರ್ವ ಕಾಲೇಜು ವೀರ ವನಿತೆಯರಾದ ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮಿಬಾಯಿ ಹಾಗೂ ಒನಕೆ ಓಬವ್ವ ಅವರ ಶೌರ್ಯ–ಸಾಹಸ ತಿಳಿಸಿಕೊಟ್ಟರೆ, ಗೋಕುಲಂನಲ್ಲಿರುವ ವಿದ್ಯಾವರ್ಧಕ ಕೈಗಾರಿಕಾ ತರಬೇತಿ ಸಂಸ್ಥೆ ವಿದ್ಯಾರ್ಥಿಗಳು 'ರಾವಣ ನೃತ್ಯ' ಪ್ರದರ್ಶನ ನೀಡಿದರು.

ಮಹಾರಾಜ ಕಾಲೇಜು ವಿದ್ಯಾರ್ಥಿಗಳಿಂದ ಅಂಬೇಡ್ಕರ್ ಸ್ಮರಣೆ...

ಭಾರತ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜೀವನಾಧಾರಿತ ಅಮೋಘ ನೃತ್ಯ ಪ್ರದರ್ಶನ ನೀಡಿದ ಮೈಸೂರು ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ಜೈಭೀಮ್ ಘೋಷಣೆ ಮೊಳಗಿಸಿದರು. ವಿದ್ಯಾರ್ಥಿಗಳ ನೃತ್ಯಕ್ಕೆ ನೆರೆದಿದ್ದ ಸಮೂಹವೇ ಮೊಬೈಲ್ ಟಾರ್ಚ್ ಲೈಟ್ ಆನ್ ಮಾಡಿ, ಜೋರು ಶಿಳ್ಳೆ–ಚಪ್ಪಾಳೆ ಮೂಲಕ ಬಳುವಳಿ ನೀಡಿದರು. 'ನಾಯಕ ನೀನು ಭೀಮರಾವ್, ಮಹಾನಾಯಕ ನೀನು ಭೀಮರಾವ್' ಘೋಷಣೆ ಆವರಿಸಿತು. ಎರಡು ಬಾರಿ ನೃತ್ಯ ಪ್ರದರ್ಶನ ನೀಡಿದ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಅಪಾರ ಮೆಚ್ಚುಗೆಗೆ ಪಾತ್ರರಾದರು.

ಜಾನಪದ ಝಲಕ್: ಕನ್ನಡನಾಡಿನ ಹೆಮ್ಮೆಯಾಗಿರುವ ಜಾನಪದ ಕಲಾ ಪ್ರಕಾರಗಳ ನೃತ್ಯ ಪ್ರದರ್ಶನ ನೀಡಿದ ಬೆಂಗಳೂರಿನ ಆಂದ್ರಹಳ್ಳೀ ರಸ್ತೆಯಲ್ಲಿರುವ ಶ್ರೀ ದಕ್ಷ ಅಕಾಡೆಮಿ, ಬಳ್ಳಾರಿ ಗಾಂಧಿ ನಗರದ ಎಸ್‌ಜಿಟಿ ಕಾಲೇಜು, ಹೊಳೆ ನರಸೀಪುರದ ಹೊಸ ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಆಪಕರ್ಷಕ ನೃತ್ಯದೊಂದಿಗೆ ಜಾನಪದ ಝಲಕ್ ನೀಡಿದರೆ, ಮೈಸೂರು ನಜರ್‌ಬಾದ್‌ನಲ್ಲಿರುವ ಶ್ರೀ ವಾಣಿವಿಲಾಸ ಅರಸು ಪದವಿ ಪೂರ್ವ ಹಾಗೂ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳೂ ಜಾನಪದ ನೃತ್ಯದೊಂದಿಗೆ ಭಾರತೀಯ ನೃತ್ಯಕಲಾ ಸಂಸ್ಕೃತಿಯನ್ನು ಅನಾವರಣಗೊಳಿಸಿದರು.

ಜೈಹೋ: ಭಾರತೀಯ ಧೀರ ಯೋಧರಿಗೆ ನೃತ್ಯದ ಮೂಲಕ ನಮನ ಸಲ್ಲಿಸಿದ ಮಂಡ್ಯ ಕಲ್ಲುಕಟ್ಟಡದ ಬಾಲಕಿಯರ ಪದವಿ ಪೂರ್ವ ಕಾಲೇಜು, ಬೆಟ್ಟದಪುರದ ಎಸ್‌ಎಂಎಸ್ ಪದವಿ ಪೂರ್ವ ಕಾಲೇಜು ಹಾಗೂ ಮೈಸೂರಿನ ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆಯ ವಿದ್ಯಾರ್ಥಿಗಳು 'ಜೈಹೋ' ಘೋಷಣೆ ಮೊಳಗಿಸಿದರು. ಹಾಗೆಯೇ ಕೌಟಿಲ್ಯ ಪದವಿ ಕಾಲೇಜು ವಿದ್ಯಾರ್ಥಿಗಳು 'ವಿಜಯಿ ಭವ' ಪ್ರೇರಣಾ ಸಂದೇಶ ನೀಡಿದರು.

ಗರುವಿಗೆ ನಮನ: ಜಗತ್ತಿನಲ್ಲಿರುವ ಅತೀದೊಡ್ಡ ಆಯುಧವೇ ಜ್ಞಾನ. ಅದರ ಸಂಪಾದನೆಗೆ ಮೂಲ ಕಾರಣರಾದ ಗುರುಗಳಿಗೆ ವಿನೂತನ ನೃತ್ಯ ಸಂಯೋಜನೆ ಮೂಲಕ ನಮನ ಸಲ್ಲಿಸಿದ ಕೃಷ್ಣರಾಜಪೇಟೆ ಶೀಳನೆರೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಮೊಬೈಲ್‌ನಿಂದಾಗುತ್ತಿರುವ ಅನಾಹುತಗಳ ಬಗ್ಗೆ ಬೆಳಕು ಚೆಲ್ಲಿದರಲ್ಲದೆ ಪುಸ್ತಕ ಮಹತ್ವ ತಿಳಿಸಿದರು.

450ಕ್ಕೂ ಹೆಚ್ಚು ತಂಡ: 8 ದಿನಗಳ ಕಾಲ ನಡೆದ 'ಯುವ ಸಂಭ್ರಮ'ದಲ್ಲಿ ಸುಮಾರು 450ಕ್ಕೂ ಕಾಲೇಜು ತಂಡಗಳು ಕನ್ನಡ ನಾಡು–ನುಡಿ, ಕಲೆ, ಸಾಹಿತ್ಯ, ಸಂವಿಧಾನ, ಮಹಿಳಾ ಸಬಲೀಕರಣ, ರೈತರು ಹಾಗೂ ಸೈನಿಕರ ಸ್ಮರಣೆ ಕುರಿತು ನೃತ್ಯ ಪ್ರದರ್ಶನ ನೀಡುವ ಮೂಲಕ ಯುವ ಸಂಭ್ರಮದ ಮೆರಗನ್ನು ಇಮ್ಮಡಿಗೊಳಿಸಿದರು. ಕಲಾ ತಂಡಗಳಿಗೆ ಶಿಳ್ಳೆ–ಚಪ್ಪಾಳೆ, ಡ್ಯಾನ್ಸ್ ಮೂಲಕ ಪ್ರೋತ್ಸಾಹ ನೀಡಿದ ಯುವ ಸಮೂಹ ಯುವ ಸಂಭ್ರಮದ ಯಶಸ್ಸಿಗೆ ಕಾರಣರಾದರು. ಇದೇ ವೇಳೆ ಮೈಸೂರು ಸ್ವಚ್ಛತಾ ರಾಯಬಾರಿಯಾಗಿ ಆಯ್ಕೆಯಾಗಿರುವ ರಾಷ್ಟ್ರಮಟ್ಟದ ಕ್ರೀಡಾಪಟು ಫಾಲ್ಕಿಯಾ ಖಾನ್ ಅವರನ್ನು ಅಭಿನಂದಿಸಲಾಯಿತು. ಬಳಿಕ ವೇದಿಕೆಗೆ ಆಗಮಿಸಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮೇಯರ್ ಶಿವಕುಮಾರ್, ಶಾಸಕ ಶ್ರೀವತ್ಸ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್‌ಪಿ ಸೀಮಾ ಲಾಟ್ಕರ್ ಮತ್ತಿತರರು ಕಲಾತಂಡಗಳಿಗೆ ಸ್ಮರಣಿಗೆ ನೀಡಿ ಅಭಿನಂದಿಸಿದರು.

ಯುವ ಸಂಭ್ರಮ ನಿಮ್ಮದೇ ಹಾಗೂ ವಿಶ್ವವಿಖ್ಯಾತ ಮೈಸೂರು ದಸರಾ ಸಂಭ್ರಮ...!



ಮೈಸೂರು ದಸರಾ ಯುವ ಸಂಭ್ರಮ ನಿಮ್ಮದೇ ಸಂಭ್ರಮ, ನಿಮ್ಮ ಸಂಭ್ರಮ ಮೈಸೂರಿನ ಸಂಭ್ರಮ, ನಿಮ್ಮ ಸಂಭ್ರಮ ವಿಶ್ವವಿಖ್ಯಾತ ಮೈಸೂರು ದಸರಾ ಸಂಭ್ರಮ, ನಿಮ್ಮ ಸಂಭ್ರಮ ಭಾರತ ಮತ್ತು ಬಹುತ್ವದ ಸಂಭ್ರಮವೆಂದು ಹೇಳಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಯುವ ಸಮೂಹವನ್ನು ದಸರಾ ಮಹೋತ್ಸವಕ್ಕೆ ಸ್ವಾಗತಿಸಿದರು. ಯುವ ಸಂಭ್ರಮದ ಕಡೆಯ ದಿನ ವಿವಿಧ ಕಾಲೇಜು ತಲಾತುಡಾಗಳಿಗೆ ಸ್ಮರಣಿಕೆ ನೀಡಿ ಮಾತನಾಡಿದ ಅವರು, ಯುವ ಸಂಭ್ರಮಾಚರಣೆಯಲ್ಲಿ ನೃತ್ಯ, ಸಂಗೀತ, ಕಲೆಯ ಮನರಂಜನೆಯನ್ನು ಅನುಭವಿಸಿ ಕುಣಿದು ಕುಪ್ಪಳಿಸಿದ್ದೀರಿ. ನಿಮ್ಮ ಉತ್ಸಾಹ ಚಂದ್ರಯಾನದಂತೆ ಗಗನಕ್ಕೆ ಹಾರುವಂತಿರಲಿ. ಈ ನಿಮ್ಮ ಉತ್ಸಾಹವನ್ನು ಇನ್ನೂ ನೂರು ಪಟ್ಟು ಜಾಸ್ತಿ ಮಾಡುವ ಯುವ ದಸರಾ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದೇನೆ ಎಂದರಲ್ಲದೆ ಮಾನಸಿಕ ಒತ್ತಡಗಳನ್ನು ಬದಿಗಿಟ್ಟು, ಸ್ನೇಹ ಮತ್ತು ವಿಶ್ವಾಸ ಪೂರ್ವಕವಾಗಿ ನಿಮ್ಮ ನಡೆ–ನುಡಿಗಳ ಮುಖಾಂತರ ಸೌಹಾರ್ದ ಮಂತ್ರವನ್ನು ಬೆಸೆಯಲು ಮತ್ತು ಬೆಳೆಸಲು ಕರೆ ನೀಡಿದರು.





ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ನಜರ್‌ಬಾದ್‌ನ ಕಾರಂಜಿ ಕೆರೆ ಬಳಿ, ಮೃಗಾಲಯದ ಹಿಂಭಾಗದ ಮೈದಾನದಲ್ಲಿ ಆಯೋಜಿಸಿರುವ ಜಂಬೊ ಸರ್ಕಸ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶುಕ್ರವಾರ ಉದ್ಘಾಟಿಸಿದರು. ಈ ವೇಳೆ ಮೇಯರ್ ಶಿವಕುಮಾರ್, ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಉಪಮೇಯರ್ ಡಾ.ಜಿ.ರೂಪ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮತ್ತಿತರರು ಉಪಸ್ಥಿತರಿದ್ದರು. ಪ್ರತಿದಿನ ಮಧ್ಯಾಹ್ನ 1, ಸಂಜೆ 4 ಮತ್ತು 7 ಗಂಟೆಗೆ ಜಂಬೊ ಸರ್ಕಸ್ ಪ್ರದರ್ಶನವಿದ್ದು, ಆಫ್ರಿಕಾದ ಇಥಿಯೋಪಿಯನ್ ಹಾಗೂ ಟ್ಯಾನ್ಜೇನಿಯನ್ ಕಲಾವಿದರು ಹೊಸ ಸಾಹಸ ಪ್ರದರ್ಶಿಸಲಿದ್ದಾರೆ.



ಈ ಬಾರಿಯ ಮೈಸೂರು ದಸರಾಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 25 ಲಕ್ಷದ ಪ್ರಾಯೋಜಕತ್ವ ನೀಡಿದೆ. ಬ್ಯಾಂಕ್‌ನ ಮೈಸೂರು ಡಿಜಿಎಂ (ಬಿ ಅಂಡ್ ಓ) ರಾಜೇಶ್‌ಕುಮಾರ್ ಚೌಧರಿ ಅವರು ಪ್ರಾಯೋಜಕತ್ವದ ಚೆಕ್‌ಅನ್ನು ಮೈಸೂರು ಉಸ್ತುವಾರಿ ಸಚಿವ ಡ. ಹೆಚ್.ಸಿ. ಮಹದೇವಪ್ಪ ಅವರಿಗೆ ಶುಕ್ರವಾರ ಸಲ್ಲಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮೇಯರ್ ಶಿವಕುಮಾರ್, ಶಾಸಕ ಶ್ರೀವತ್ಸ ಉಪಸ್ಥಿತರಿದ್ದರು.

ಸುರಕ್ಷಿತ ದಸರಾಗೆ ಸರ್ವ ಸಿದ್ಧತೆ ಮಾಡಿಕೊಳ್ಳಿ

ಅಧಿಕಾರಿಗಳಿಗೆ ಡಿಸಿ ಡಾ. ಕೆ.ವಿ. ರಾಜೇಂದ್ರ ಸೂಚನೆ



ಮೈಸೂರು, ಅ. 13(ಆರ್‌ಕೆ)– ಸುರಕ್ಷಿತವಾಗಿ ದಸರಾ ಕಾರ್ಯಕ್ರಮಗಳು ನಡೆಯಲು ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರು ಅರಮನೆ ಮಂಡಳಿ ಕಚೇರಿಯಲ್ಲಿ ಇಂದು ಸಂಜೆ ಸಭೆ ನಡೆಸಿದ ಅವರು, ದಸರಾಗೆ ಪ್ರಾಯೋಜಕತ್ವ ನೀಡಿದ ಉದ್ಯಮಿಗಳು, ಸಂಘ–ಸಂಸ್ಥೆಗಳಿಗೆ ಧನ್ಯವಾದ ಹೇಳಿದರಲ್ಲದೇ, ಎಲ್ಲರ ಸಹಭಾಗಿತ್ವದಲ್ಲಿ ನಾಡಹಬ್ಬ ಆಚರಿಸಲು ಸುರಕ್ಷತೆಗೂ ಆದ್ಯತೆ ನೀಡುವುದೂ ನಮ್ಮ ಜವಾಬ್ದಾರಿ ಎಂದರು.

ವಿಪತ್ತು ನಿರ್ವಹಣೆಗೆ ಗಮನಹರಿಸಿ ಪಟಾಕಿ ಗೋದಾಮುಗಳು ಮೇಲೆ ನಿಗಾವಹಿಸಿ. ಎಲ್ಲಿಯೂ ವಿದ್ಯುತ್ ಅವಘಡವಾಗದಂತೆ ಕ್ರಮ ವಹಿಸಬೇಕು. ಸ್ವಚ್ಛತೆ, ಸುರಕ್ಷತೆಗಾಗಿ ಗಮನಹರಿಸಬೇಕು ಎಂದ ಅವರು, ದಸರಾ ಕಾಮಗಾರಿಗಳನ್ನು ತೀವ್ರಗೊಳಿಸಿ ಮೂಲ ಸೌಕರ್ಯ ಅಭಿವೃದ್ಧಿಗೊಳಿಸಿ ಎಂದು ಸೂಚಿಸಿದರು.

ದಸರಾ ದೀಪಾಲಂಕಾರದಲ್ಲಿ ಎಲ್ಲಿಯೂ ವಿದ್ಯುತ್ ಅವಘಡ ಸಂಭವಿಸದಂತೆ ನಿರಂತರವಾಗಿ ಪರಿಶೀಲನೆ ನಡೆಸಿ ಲೋಪಗಳಿದ್ದರೆ ಸರಿಪಡಿಸಿ. ಕುಸ್ತಿ, ಕ್ರೀಡೆ, ಆಹಾರ ದಸರಾ, ಚಲನಚಿತ್ರೋತ್ಸವ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳೂ ಸುಲಲಿತವಾಗಿ ನಡೆದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡಿ ಎಂದು ಅವರು ಇದೇ ವೇಳೆ ತಿಳಿಸಿದರು.

ದಸರಾ ಉತ್ಸವಕ್ಕೆ ಒಂದು ಕೋಟಿ ರೂ. ನೀಡಿ ಪ್ಲಾಟಿನಂ ಪ್ರಾಯೋಜಕತ್ವ ನೀಡಲು ಒಪ್ಪಿರುವ ಸೈಕಲ್ ಬ್ರಾಂಡ್ ಅಗರಬತ್ತಿ ಕಂಪನಿ ಮತ್ತು ಸಿಲ್ವರ್ ಪ್ರಾಯೋಜಕತ್ವ ನೀಡಲಿರುವ ಎಸ್‌ಬಿಐ ಅಧಿಕಾರಿಗಳ ಸಹಕಾರವನ್ನು ಸ್ಮರಿಸಿದ ಡಾ. ರಾಜೇಂದ್ರ, ಜಿಲ್ಲಾಡಳಿತದ ವತಿಯಿಂದ ಧನ್ಯವಾದ ಹೇಳಿದರು.

ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯ್ತಿ ಸಿಇಓ ಕೆ.ಎಂ. ಗಾಯತ್ರಿ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ದಸರಾ ; ಸ್ವಚ್ಛತಾ ಕಾರ್ಯಕ್ಕೆ ಚಾಲನೆ



ಮೈಸೂರು,ಅ.13(ಪಿಎಂ)– ನಾಡಹಬ್ಬ ದಸರಾ ಮಹೋತ್ಸವ ಪ್ರಯುಕ್ತ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ವತಿಯಿಂದ ಮೈಸೂರು ನಗರದ ಪ್ರಮುಖ ರಸ್ತೆಗಳು ಹಾಗೂ ದಸರಾ ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಣೆಗೆ ಶುಕ್ರವಾರ ಚಾಲನೆ ನೀಡಲಾಯಿತು.

ಮೈಸೂರು ಅರಮನೆಯ ಬಲರಾಮ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಶಾಸಕ ಟಿ.ಎಸ್. ಶ್ರೀವತ್ಸ ಹಸಿರು ನಿಶಾನೆ ತೋರುವ ಮೂಲಕ ದಸರಾ ಹಿನ್ನೆಲೆಯ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದರು.

ಪಾಲಿಕೆ ಪೌರಕಾರ್ಮಿಕರ ಹೊರತಾಗಿ ಹೆಚ್ಚುವರಿಯಾಗಿ ಗುತ್ತಿಗೆದಾರರ ಮೂಲಕ ನಿಯೋಜಿಸಿಕೊಂಡಿರುವ 385 ಮಂದಿ ಸ್ವಚ್ಛತಾ ಕಾರ್ಮಿಕರು ದಿನದ ಮೂರು ಪಾಳಿಯಲ್ಲಿ ಇಂದಿನಿಂದ ಅ.25ರವರೆಗೆ ಸ್ವಚ್ಛತಾ ಕಾರ್ಯನಿರ್ವಹಿಸಲಿದ್ದಾರೆ.

85 ಆಟೋರೀಕ್ಷಾ, 11 ಕಾಂಪ್ಯಾಕ್ಟರ್ ವಾಹನ ಮತ್ತು 4 ಸ್ವೀಪಿಂಗ್ ಮೆಷನ್ ವಾಹನಗಳೊಂದಿಗೆ ಸ್ವಚ್ಛತಾ ಕಾರ್ಯ ನಡೆಯಲಿದೆ. ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪಾ, ಮಾಜಿ ಮೇಯರ್ ಅಯೂಬ್ ಖಾನ್, ಪಾಲಿಕೆ ಸದಸ್ಯರಾದ ಛಾಯಾದೇವಿ, ರಮೇಶ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಉಪ ಆಯುಕ್ತ ಸೋಮಶೇಖರ್ ಮತ್ತಿತರರು ಹಾಜರಿದ್ದರು.



ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಎರಡನೇ ಬಾರಿ ಕುದುರೆ ಸವಾರಿಯಲ್ಲಿ ಸಾಗಲಿರುವ ಮೇಯರ್ ಶಿವಕುಮಾರ್ ಶುಕ್ರವಾರ ತಾಲೀಮು ನಡೆಸಿದರು.

ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಉಪಸ್ಥಿತಿಯಲ್ಲಿ

ಪತ್ರಕರ್ತರ ಜಿಲ್ಲಾ ಸಮ್ಮೇಳನದ ಪೂರ್ವಭಾವಿ ಸಭೆ



ಮೈಸೂರು, ಅ. 13(ಆರ್‌ಕೆ)– ಹುಣಸೂರು ತಾಲೂಕು, ಗಾವಡಗೆರೆಯ ಓಂ ಗುರುಲಿಂಗ ಜಂಗಮ ದೇವರ ಮಠದಲ್ಲಿ ನವೆಂಬರ್ ತಿಂಗಳಿನಲ್ಲಿ ನಡೆಸಲುದ್ದೇಶಿಸಿರುವ ಪತ್ರಕರ್ತರ ಜಿಲ್ಲಾ ಸಮ್ಮೇಳನಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಶಾಸಕ ಜಿ.ಡಿ. ಹರೀಶ್‌ಗೌಡ ಭರವಸೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಹುಣಸೂರು ತಾಲೂಕು ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿಸಲಿರುವ ಸಮ್ಮೇಳನ ಸಂಬಂಧ ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಅವರ ನಿವಾಸದಲ್ಲಿ ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಮಾಜದ ಒಳಿತಿಗಾಗಿ ದುಡಿಯುತ್ತಿರುವ ಪತ್ರಕರ್ತರ ಹಿತ ಕಾಪಾಡುವುದು ನಮ್ಮ ಜವಾಬ್ದಾರಿಯಾಗಿದ್ದು, ಜಿಲ್ಲಾ ಪತ್ರಕರ್ತರ ಸಂಘವೂ ಹಲವು ಕ್ಷೇಮಾಭಿವೃದ್ಧಿ ಕಾರ್ಯ ಮಾಡುತ್ತಿರುವುದರಿಂದ ನಮ್ಮ ಕ್ಷೇತ್ರದ ಗಾವಡಗೆರೆ ಶ್ರೀ ಮಠದಲ್ಲಿ ಆಯೋಜಿಸಲುದ್ದೇಶಿಸಿರುವ ಪತ್ರಕರ್ತರ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಗೊಳಿಸಲು ತಾವು ಮತ್ತು ತಂದೆಯವರಾದ ಜಿ.ಟಿ.ದೇವೇಗೌಡರೂ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದರು.

ಮಠಾಧೀಶರಾದ ಶ್ರೀ ನಟರಾಜ ಸ್ವಾಮಿಗಳೊಂದಿಗೆ ಸಮಾಲೋಚನೆ ನಡೆಸಿ, ಊಟ, ವಸತಿ ಇನ್ನಿತರ ಸೌಲಭ್ಯಕ್ಕಾಗಿ ಮನವಿ ಮಾಡಿ ಸಮ್ಮೇಳನಕ್ಕೆ ಆಗಮಿಸುವ ಪತ್ರಕರ್ತರಿಗೆ ಆತಿಥ್ಯ ನೀಡಲು ವ್ಯವಸ್ಥೆ ಕಲ್ಪಿಸಬೇಕು ಎಂದ ಹರೀಶ್‌ಗೌಡರು, ಕಾರ್ಯಕ್ರಮದ ರೂಪುರೇಷೆ, ಅತಿಥಿಗಳು, ಕಾರ್ಯಾಗಾರದ ಬಗ್ಗೆ ಪೂರ್ವ ತಯಾರಿ ಮಾಡಿಕೊಳ್ಳಿ ಎಂದರು.

ಈ ಸಂದರ್ಭ ಮಾತನಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಈ ಹಿಂದೆಯೇ ಗಾವಡಗೆರೆ ಮಠದಲ್ಲಿ ಜಿಲ್ಲಾ ಪತ್ರಕರ್ತರ ಸಮ್ಮೇಳನಕ್ಕೆ ಸಿದ್ಧತೆ ನಡೆಸಲಾಗಿತ್ತಾದರೂ, ಅನಿವಾರ್ಯ ಕಾರಣದಿಂದಾಗಿ ಮುಂದೂಡಲಾಗಿತ್ತು. ಇದೀಗ ಸಂಘವು ಹುಣಸೂರು ತಾಲೂಕು ಪತ್ರಕರ್ತರ ಸಂಘದ ಸಹಯೋಗ ದಲ್ಲಿ ಸಮ್ಮೇಳನ ನಡೆಸಲು ಮುಂದಾಗಿದೆ ಎಂದರು.

ಸಮ್ಮೇಳನ ಯಶಸ್ವಿಯಾಗಿ ನಡೆಯಲು ಕ್ಷೇತ್ರದ ಶಾಸಕರಾದ ನೀವು ಹಾಗೂ ತಂದೆ ಜಿ.ಟಿ.ದೇವೇಗೌಡರ ಸಹಕಾರ ಮುಖ್ಯವಾಗಿದ್ದು, ಈಗಾಗಲೇ ಮಠದ ಶ್ರೀಗಳಾದ ಶ್ರೀ ನಟರಾಜ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರೊಂದಿಗೂ ಸಮಾಲೋಚಿಸಲಾಗಿದೆ ಎಂದು ತಿಳಿಸಿದರು.

ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ, ರಾಜ್ಯ ಸಮಿತಿ ಸದಸ್ಯ ಬಿ. ರಾಘವೇಂದ್ರ, ವಾರ್ತಾ ಮತ್ತು ಸಾರ್ವಜನಿಕರ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್ ಉಪಸ್ಥಿತರಿದ್ದರು.

ಬಸ್‌ಗಳ ನಡುವೆ ಡಿಕ್ಕಿ; 15 ಮಂದಿಗೆ ಗಾಯ

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನ ದೀಪಾಲಂಕೃತ ಸ್ವಾಗತ ಕಮಾನು ನೆಲಸಮ

ಮೈಸೂರು, ಅ. 13(ಆರ್‌ಕೆ)– ಎರಡು ಬಸ್‌ಗಳ ನಡುವೆ ಡಿಕ್ಕಿಯಾಗಿ 15 ಮಂದಿ ಗಾಯಗೊಂಡಿದ್ದು, ದಸರಾ ದೀಪಾಲಂಕಾರ ಸ್ವಾಗತ ಕಮಾನು ನೆಲಕ್ಕುರುಳಿದ ಘಟನೆ ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಮೈಸೂರಿನಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್, ನಾರಾಯಣ ಹೃದಯಾಲಯ ಕಡೆಯಿಂದ ರಿಂಗ್ ರಸ್ತೆಯಲ್ಲಿ ಬರುತ್ತಿದ್ದ ಕೇರಳ ಖಾಸಗಿ ಬಸ್ಸಿಗೆ ಬೆಳಗ್ಗೆ 7.30ರ ಸುಮಾರಿನಲ್ಲಿ ಡಿಕ್ಕಿ ಹೊಡೆಯಿತು. ಇದರ ಪರಿಣಾಮ ಖಾಸಗಿ ಬಸ್ ತಿರುಗಿ ವಿರುದ್ಧಾಭಿಮುಖವಾಗಿ ಚಲಿಸಿ ಸ್ಥಳದಲ್ಲಿ ಸೆಸ್ಕ್‌ನಿಂದ ಅಳವಡಿಸಿದ್ದ ವಿದ್ಯುತ್ ದೀಪಾಲಂಕಾರದ ಸ್ವಾಗತ ಕಮಾನಿಗೆ ಡಿಕ್ಕಿ ಹೊಡೆದಿದ್ದರಿಂದ ಕಮಾನು ಉರುಳಿಬಿದ್ದಿತ್ತು.



ಅಪಘಾತದ ವೇಳೆ ಈ ರಸ್ತೆಯಲ್ಲಿ ಚಲಿಸುತ್ತಿದ್ದ ಎರಡು ಕಾರುಗಳೂ ಅಡ್ಡಾದಿಡ್ಡಿ ಚಲಿಸಿದವು. ಆದರೆ ಹೆಚ್ಚಿನ ಅಪಾಯ ಸಂಭವಿಸಲಿಲ್ಲ. ಈ ಸಂದರ್ಭ ಸಾರಿಗೆ ಬಸ್ಸಿನಲ್ಲಿದ್ದ 11 ಮಂದಿ ಹಾಗೂ ಕೇರಳ ಖಾಸಗಿ ಬಸ್ಸಿನ ನಾಲ್ವರು ಸೇರಿ 15 ಮಂದಿ ಪ್ರಯಾಣಿಕರು ಗಾಯಗೊಂಡರು.



ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿದ ಸಂಚಾರ ಉಪ ವಿಭಾಗದ ಎಸಿಪಿ ಪರಶುರಾಮಪ್ಪ ಹಾಗೂ ಎನ್.ಆರ್. ಸಂಚಾರ ಠಾಣೆ ಪೊಲೀಸರು, ಗಾಯಗೊಂಡವರಿಗೆ ಚಿಕಿತ್ಸೆ ಕೊಡಿಸಿದರು. ಸಣ್ಣಪುಟ್ಟ ಗಾಯಗಳಾಗಿದ್ದರಿಂದ ಅವರು ಹೊರರೋಗಿಗಳಾಗಿ ಚಿಕಿತ್ಸೆ ಪಡೆದು ಹಿಂದಿರುಗಿದರು.

ಘಟನೆಯಿಂದಾಗಿ ಸ್ಥಳದಲ್ಲಿ ಕೆಲ ಕಾಲ ಟ್ರಾಫಿಕ್ ಜಾಮ್ ಆಗಿ ವಾಹನ ಚಾಲಕರು, ಪ್ರಯಾಣಿಕರಿಗೆ ತೀವ್ರ ತೊಂದರೆ ಉಂಟಾಯಿತು. ಕಡೆಗೆ ಟೋಯಿಂಗ್ ವಾಹನ ಕರೆಸಿ ಎರಡೂ ಬಸ್ಸುಗಳನ್ನು ತೆರವುಗೊಳಿಸಿದ ಪೊಲೀಸರು ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಸೆಸ್ಕ್ ಅಧಿಕಾರಿಗಳು ಅಳವಡಿಸಿದ್ದ ದಸರಾ ದೀಪಾಲಂಕಾರದ ಸ್ವಾಗತ ಕಮಾನು ಸಂಪೂರ್ಣ ಮುರಿದು ಬಿದ್ದಿದ್ದರಿಂದ ಕೆಲ ವಾಹನಗಳೂ ಜಖಂಗೊಂಡವಾದರೂ ಅದೃಷ್ಟವಶಾತ್ ಯಾವ ಅಪಾಯಗಳೂ ಸಂಭವಿಸಲಿಲ್ಲ.

ಸ್ವಾಗತ ಕಮಾನು ದೀಪಾಲಂಕಾರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿರಲಿಲ್ಲವಾದ್ದರಿಂದ ಯಾವುದೇ ಅವಘಡ ಸಂಭವಿಸಲಿಲ್ಲ. ತಕ್ಷಣ ಸ್ಥಳಕ್ಕೆ ಧಾವಿಸಿದ ಸೆಸ್ಕ್ ಅಧಿಕಾರಿಗಳು ಮುರಿದು ಬಿದ್ದಿದ್ದ ಕಮಾನನ್ನು ತೆರವುಗೊಳಿಸಿ ಹೊಸದಾಗಿ ಮಧ್ಯಾಹ್ನದ ಬಳಿಕ ಮತ್ತೊಂದು ಕಮಾನು ಅಳವಡಿಸಿದರು.

ಐತಿಹಾಸಿಕ ಶ್ರೀರಂಗಪಟ್ಟಣ ದಸರಾಕ್ಕೆ ದಿನಗಣನೆ

3 ದಿನ ನಡೆಯುವ ಮಹೋತ್ಸವಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ





ಶ್ರೀರಂಗಪಟ್ಟಣ, ಅ.13– ಐತಿಹಾಸಿಕ ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಜಿಲ್ಲಾಡಳಿತ ಹಾಗೂ ಜಿಪಂ ವತಿಯಿಂದ ಅ.16 ರಿಂದ 18ರವರೆಗೆ ಮೂರು ದಿನಗಳ ಕಾಲ ನಡೆಯುವ ದಸರಾ ಉತ್ಸವಕ್ಕೆ ಸಿದ್ಧತೆ ಭರದಿಂದ ಸಾಗಿದೆ.

ಅಂಬಾರಿ ಮೆರವಣಿಗೆಗೆ ಚಾಲನೆ ದೊರೆಯುವ ಕಿರಂಗೂರು ಬನ್ನಿ ಮಂಟಪವನ್ನು ಸುಣ್ಣ, ಬಣ್ಣಗಳಿಂದ ಸಿಂಗರಿಸಲಾಗಿದ್ದು, ಆವರಣವನ್ನು ಸಮತಟ್ಟು ಮಾಡಿ ಅಂಬಾರಿ ವೀಕ್ಷಣೆಗೆ ಬರುವ ಸಾರ್ವಜನಿಕರಿಗೆ ವಿಶೇಷ ಆಸನಗಳ ವ್ಯವಸ್ಥೆ ಮಾಡಲಾಗುತ್ತಿದೆ.

ಮೆರವಣಿಗೆಗೆ ಚಾಲನೆ: ಶ್ರೀರಂಗಪಟ್ಟಣದ ಕಿರಂಗೂರು ಬನ್ನಿಮಂಟಪದಲ್ಲಿ ಅ.16ರಂದು ಮಧ್ಯಾಹ್ನ 12.30ಕ್ಕೆ ನಂದಿ ಧ್ವಜ ಪೂಜೆ ಮಧ್ಯಾಹ್ನ 2.30 ರಿಂದ 3.15 ರವರೆಗೆ ಸಲ್ಲುವ ಶುಭಮಕರ ಲಗ್ನದಲ್ಲಿ ನಾಡದೇವತೆ ಶ್ರೀಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ನಡೆಯಲಿದ್ದು, ಜಂಬೂ ಸವಾರಿಗೆ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ.

ಈ ಬಾರಿಯೂ ಮಹೇಂದ್ರ ಅಂಬಾರಿ ಹೊರಲಿದ್ದು, ವಿಜಯ, ವಿಜಯಲಕ್ಷ್ಮಿ ಆನೆಗಳು ಮಹೇಂದ್ರನಿಗೆ ಸಾಥ್ ನೀಡಲಿವೆ. ಬನ್ನಿಮಂಟಪದಿಂದ ಹೊರಡುವ ಅಂಬಾರಿ ಮೆರವಣಿಗೆ ಕಿರಂಗೂರು–ಬಾಬುರಾಯನಕೊಪ್ಪಲು ಗ್ರಾಮಗಳ ಮೂಲಕ ಬೆಂಗಳೂರು–ಮೈಸೂರು ರಸ್ತೆ ಮಾರ್ಗವಾಗಿ ಪಟ್ಟಣದ ಮುಖ್ಯರಸ್ತೆಯಲ್ಲಿ ಸಾಗಿ ಪಟ್ಟಣದ ಶ್ರೀರಂಗನಾಥಸ್ವಾಮಿ ದೇಗುಲದ ಆವರಣದಲ್ಲಿನ ಶ್ರೀರಂಗ ವೇದಿಕೆ ಬಳಿ ಅಂತ್ಯಗೊಳ್ಳಲಿದೆ. ಇದೇ ವೇಳೆ ವಿವಿಧ ಕಲಾ ತಂಡಗಳಾದ ಬ್ಯಾಂಡ್, ಪೂಜಾ ಕುಣಿತ, ವೀರಗಾಸೆ, ನಗಾರಿ, ಜಡೆ ಕೋಲಾಟ, ಗಾರುಡಿ ಗೊಂಬೆ, ತಮಟೆ, ದೊಣ್ಣೆವರಸೆ, ಡೊಳ್ಳು ಕುಣಿತ, ಕಂಸಾಳೆ, ಕೊಂಬು–ಕಹಳೆ ಹಾಗೂ ಸ್ತಬ್ದ ಚಿತ್ರಗಳ ಮೆರವಣಿಗೆ ನಡೆಯಲಿದೆ.

ಬಳಿಕ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ನಿರ್ಮಿಸಿರುವ ಶ್ರೀರಂಗ ವೇದಿಕೆಯಲ್ಲಿ ಸಂಜೆ 6 ಗಂಟೆಗೆ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಹೆಚ್.ಕೆ ಪಾಟೀಲ್, ದಿನೇಶ್ ಗುಂಡೂರಾವ್, ತಂಗಡಗಿ ಶಿವರಾಜ್ ಸಂಗಪ್ಪ, ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲ್, ಬಿ.ನಾಗೇಂದ್ರ, ಸಂಸದೆ ಸುಮಲತಾ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳೀಗೌಡ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಪಿ. ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ.ಉದಯ್ ಹಾಗೂ ಕಿರಂಗೂರು ಗ್ರಾಪಂ ಅಧ್ಯಕ್ಷೆ ಹೆಚ್.ಪಿ.ಶೃತಿ ಭಾಗವಹಿಸಲಿದ್ದಾರೆ.

ತ.ನಾಡಿಗೆ ನೀರು ಬಿಡುಗಡೆ ಆದೇಶ ವಿರೋಧಿಸಿ ಧರಣಿ



ಮಂಡ್ಯ, ಅ.13– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಆದೇಶಿಸಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿ ಮುಂದುವರೆಸಿದ ಮುಖಂಡರು ಬಳಿಕ ರಸ್ತೆ ತಡೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಭಾರತೀಯ ವೈದ್ಯಕೀಯ ಸಂಘದ ವೈದ್ಯರು, ರೈತರು, ದಲಿತ, ಕನ್ನಡಪರ ಹೋರಾಟಗಾರರು ಬೆಂಗಳೂರು– ಮೈಸೂರು ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿಯ ಸುನಂದಾ ಜಯರಾಂ ಮಾತನಾಡಿ, ನಿತ್ಯ 3 ಸಾವಿರ ಕ್ಯುಸೆಕ್‌ನಂತೆ 15 ದಿನ ನೀರು ಹರಿಸುವಂತೆ ಪ್ರಾಧಿಕಾರ ಆದೇಶ ಮಾಡಿರುವುದು ರೈತರ ಕತ್ತು ಕುಯ್ಯುವ ಕೆಲಸವಾಗಿದೆ. ಇಲ್ಲದ ನೀರನ್ನು ಬಿಡುವುದು ಹೇಗೆ? ತಮಿಳುನಾಡು ನೀರಿನ ಹಕ್ಕು ಸ್ಥಾಪಿಸಿ ಏಕಮುಖ ಧೋರಣೆ ಅನುಸರಿಸುತ್ತಿರುವುದು ಸರಿಯಲ್ಲ. ಅದೇ ರೀತಿ ರಾಜ್ಯ ಸರ್ಕಾರ ನಿರಂತರವಾಗಿ ನೀರು ಹರಿಸಿ ರೈತರನ್ನು ಸಂಕಷ್ಟಕ್ಕೆ ದೂಡುತ್ತಿದೆ. ಪ್ರಾಧಿಕಾರದ ಆದೇಶ ತಿರಸ್ಕರಿಸಿ ನೀರು ಸ್ಥಗಿತ ಮಾಡಬೇಕು ಎಂದು ಒತ್ತಾಯಿಸಿದರು.

ಕಳೆದ 40 ದಿನದಿಂದ ನಿತ್ಯ ಹೋರಾಟ ನಡೆಯುತ್ತಿದ್ದರೂ ಸರ್ಕಾರ ನಿರ್ಲಕ್ಷ್ಯ ತೋರಿದೆ. ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ಜನತೆಗೆ ಆ ಬಗ್ಗೆ ಮಾಹಿತಿ ನೀಡುತ್ತಿಲ್ಲ. ರಾಜಕೀಯ ಸ್ವಾರ್ಥತೆಯಿಂದ ಜಲಾಶಯಗಳಿಂದ ಮಾತ್ರ ತಮಿಳುನಾಡಿಗೆ ನಿರಂತರ ನೀರು ಹರಿಸುತ್ತಿದೆ. ಸ್ವಾರ್ಥ ರಾಜಕಾರಣ ನಿಲ್ಲಿಸಿ ರಾಜ್ಯದ ಜನತೆ ಮತ್ತು ರೈತರ ಹಿತ ಕಾಪಾಡಲು ಮುಂದಾಗಬೇಕೆಂದು ಆಗ್ರಹಿಸಿದರು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬೆಂಗಳೂರಿನಲ್ಲಿ ಕುಳಿತು ಏನು ಮಾಡುತ್ತಿದ್ದಾರೆ? ದೆಹಲಿಗೆ ಹೋಗಿ ಪ್ರಧಾನಿ ಮತ್ತು ರಾಷ್ಟ್ರಪತಿಯವರನ್ನು ಭೇಟಿಯಾಗಲಿ, ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲರ ಅಹವಾಲನ್ನು ಆಲಿಸಲೇಬೇಕು. ಸುಮ್ಮನೆ ಭೇಟಿಗೆ ಅವಕಾಶ ನೀಡಿಲ್ಲ ಎಂದು ಕಾಲಹರಣ ಮಾಡುವುದನ್ನು ಬಿಡಿ ಎಂದು ಸರ್ಕಾರದ ವಿರುದ್ಧ ಹರಿಹಾಯ್ದರು.

ಸಂಸದರು ಎಲ್ಲಿ ಹೋಗಿದ್ದಾರೆ. ಮಂಡ್ಯ ಸಂಸದರ ಸಾರಥ್ಯದಲ್ಲಿ ಪ್ರಧಾನಿಗಳನ್ನು ಭೇಟಿಯಾಗಿ, ಇಲ್ಲವೇ ರಾಷ್ಟ್ರಪತಿ ಬಳಿಯಾದರೂ ಹೋಗಿ ಕರ್ನಾಟಕಕ್ಕೆ ನ್ಯಾಯ ದೊರಕಿಸಿಕೊಡಲು ಮುಂದಾಗಿ ಎಂದು ಆಗ್ರಹಿಸಿದರು.

ಭಾರತೀಯ ವೈದ್ಯಕೀಯ ಸಂಘದ ಡಾ.ಜಗದೀಶ್ ಮಾತನಾಡಿ, ಕರ್ನಾಟಕದ ಜನತೆಗೆ ಕುಡಿಯುವ ನೀರು ಉಳಿಸಿಕೊಳ್ಳಲು ಹೋರಾಟ ನಡೆಯುತ್ತಿದೆ. ಆದರೆ ತಮಿಳುನಾಡಿಗೆ ಮೂರನೇ ಬೆಳೆ ಬೆಳೆಯಲು ನೀರು ಬಿಡಲಾಗುತ್ತಿದೆ. ಪ್ರಾಣಿ ಪಕ್ಷಿಗಳು, ಜನಜಾನುವಾರುಗಳಿಗೆ ಕುಡಿಯುವ ನೀರು ಉಳಿಸಲು ಪ್ರಾಧಿಕಾರದ ಆದೇಶ ಧಿಕ್ಕರಿಸಿ ಜಲಾಶಯಗಳಿಂದ ಹರಿಯುತ್ತಿರುವ ನೀರು ನಿಲ್ಲಿಸಿ ಎಂದು ಒತ್ತಾಯಿಸಿದರು.

ಹೋರಾಟ ಮುಂದುವರಿಸಲು ಸಮಿತಿ ತೀರ್ಮಾನ: ತಮಿಳುನಾಡಿಗೆ ನೀರು ಹರಿಸುತ್ತಿರುವ ಸರ್ಕಾರದ ವಿರುದ್ಧ ನಡೆಯುತ್ತಿರುವ ಹೋರಾಟ ಮುಂದುವರಿಸಲು ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ನಿರ್ಣಯಿಸಿದೆ.

ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನದಿ ನೀರು ಪ್ರಾಧಿಕಾರ ನೀರು ಬಿಡುಗಡೆಗೆ ಆದೇಶಿಸಿರುವುದನ್ನು ಹಿತರಕ್ಷಣಾ ಸಮಿತಿ ಸಭೆಯಲ್ಲಿ ಖಂಡಿಸಲಾಯಿತು. ಕಾವೇರಿ ವಿಚಾರವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿರ್ಲಕ್ಷ್ಯ ಧೋರಣೆ ಖಂಡಿಸುತ್ತಾ ಆಳುವ ಸರ್ಕಾರಗಳು ತಮ್ಮ ನಡೆ ಬದಲಾಯಿಸಿಕೊಂಡು ರೈತರ ಹಿತ ಕಾಪಾಡಲು ಮುಂದಾಗಬೇಕು. ರಾಜ್ಯ ಸರ್ಕಾರ ರೈತರು, ಹೋರಾಟಗಾರರು ಮತ್ತು ನೀರಾವರಿ ತಜ್ಞರ ಸಭೆ ಕರೆದು ಚರ್ಚಿಸಬೇಕು ಹಾಗೂ ವಿಧಾನ ಮಂಡಲದ ತುರ್ತು ಅಧಿವೇಶನ ಕರೆಯಬೇಕು. ಚುನಾಯಿತ ಜನಪ್ರತಿನಿಧಿಗಳು ಸಮಿತಿ ಕರೆಯುವ ಸಭೆಗೆ ಕಡ್ಡಾಯವಾಗಿ ಹಾಜರಾಗಿ ಸಲಹೆ ಸೂಚನೆ ಜೊತೆಗೆ ಸಮಿತಿ ನಿರ್ಧಾರಕ್ಕೆ ಬದ್ಧರಾಗಬೇಕು ಎಂದು ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಸಮಿತಿಯ ಕೆ.ಬೋರಯ್ಯ, ಜಿ.ಬಿ. ಶಿವಕುಮಾರ್, ಕೆ.ಟಿ.ಶ್ರೀಕಂಠೇಗೌಡ, ಗುರುಪ್ರಸಾದ್ ಕೆರಗೋಡು, ಅಂಬುಜಮ್ಮ, ರೈತ ಸಂಘದ ಇಂಡುವಾಳು ಚಂದ್ರಶೇಖರ್, ಮುದ್ದೇಗೌಡ, ಕನ್ನಡಸೇನೆ ಮಂಜುನಾಥ್, ಮಹಾಂತಪ್ಪ, ಕರ್ನಾಟಕ ದಲಿತ ಸಂಘರ್ಷ ಸಮಿತಿ ವೆಂಕಟಗಿರಿಯಯ್ಯ, ಮುಖಂಡರಾದ ಬಸವೇಗೌಡ, ಸುಜಾತಕೃಷ್ಣ, ಪ್ರಶಾಂತ್ ಬಾಬು, ಕೀಲಾರ ಸೋಮಶೇಖರ್, ನಾರಾಯಣ್, ಶಿವಶಂಕರ್, ಕೋಮಲ ಸೇರಿದಂತೆ ಹಲವರಿದ್ದರು.

ಹೆಜ್ಜೇನು ದಾಳಿ: 20ಕ್ಕೂ ಹೆಚ್ಚು ಮಂದಿಗೆ ಗಾಯ

ಪಾಂಡವಪುರ, ಅ.13– ಅಂತ್ಯಸಂಸ್ಕಾರ ವೇಳೆ ಹೆಜ್ಜೇನು ದಾಳಿ ನಡೆಸಿದ ಪರಿಣಾಮ 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಲಕ್ಷ್ಮೀಸಾಗರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಹೊರವಲಯದಲ್ಲಿ ವ್ಯಕ್ತಿಯೊಬ್ಬರ ಶವ ಸಂಸ್ಕಾರ ಮಾಡಲು ಹೋಗಿದ್ದ ವೇಳೆ ಗಂಧದ ಕಡ್ಡಿ, ಧೂಪದ ಹೊಗೆಗೆ ಮರದಲ್ಲಿ ಕಟ್ಟಿದ್ದ ಹೆಜ್ಜೇನು ಏಕಾಏಕಿ ದಾಳಿ ನಡೆಸಿದೆ ಈ ವೇಳೆ ಜೇನು ದಾಳಿಯಿಂದ ತಪ್ಪಿಸಿಕೊಳ್ಳಲು ಎಲ್ಲರೂ ಶವ ಬಿಟ್ಟು ಓಡಿ ಹೋಗಿದ್ದು, ಜೇನು ಹೋದ ಬಳಿಕ ಮರಳಿಬಂದು ಅಂತ್ಯ ಸಂಸ್ಕಾರ ನೆರವೇರಿಸಿದ್ದಾರೆ.

ಆದರೂ ಬನ್ನೂರಿನ ಪುಟ್ಟಸ್ವಾಮಿ, ಮೈಸೂರಿನ ಸರಸ್ವತಿ, ಸ್ಥಳೀಯ ನಿವಾಸಿಗಳಾದ ಅಭಿಷೇಕ್, ಶಿವರಾಜು, ದಿವ್ಯ, ಬೋರೇಗೌಡ, ಕಾರ್ತಿಕ್, ನಿತ್ಯಾನಂದ, ನಿತಿನ್ ಸೇರಿದಂತೆ 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಪಾಂಡವಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ತೀವ್ರ ಗಾಯಗೊಂಡ ಪುಟ್ಟಸ್ವಾಮಿ, ಸರಸ್ವತಿ ಅವರನ್ನು ಮೈಸೂರಿನ ಆಸ್ಪತ್ರೆಗೆ ರವಾನಿಸಲಾಗಿದೆ ಎನ್ನಲಾಗಿದೆ.

ಗ್ರಾಮೀಣ ಜನತೆ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ



ಕೆ.ಆರ್.ಪೇಟೆ, ಅ.13– ಗ್ರಾಮೀಣ ಜನತೆ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಮೈಸೂರು ಪ್ಯಾಲೇಸ್ ಸಿಟಿ ಲಯನ್ ಕ್ಲಬ್–317 ಸಂಸ್ಥೆ ಅಧ್ಯಕ್ಷ ಮತ್ತಿಘಟ್ಟ ಎಂ.ಆರ್.ವಾಸು ತಿಳಿಸಿದರು.

ತಾಲೂಕಿನ ಮಡವಿನಕೋಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಮೈಸೂರು ಲಯನ್ಸ್ ಕ್ಲಬ್ ಆಫ್ ಮೈಸೂರು ಪ್ಯಾಲೇಸ್ ಸಿಟಿ, ಚಿರಾಗ್ ಮೋಟಾರ್ಸ್ ಹಾಗೂ ಮಡುವಿನಕೋಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ನಡೆದ ವಾಕ್, ಶ್ರವಣ, ಕಣ್ಣು ಹಾಗೂ ದಂತ ದೋಷಗಳ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಮನುಷ್ಯ ಒತ್ತಡದ ಜೀವನ ದಿಂದಾಗಿ ಅಧಿಕ ರಕ್ತದೊತ್ತಡ, ಮಧುಮೇಹ ಸೇರಿದಂತೆ ಇನ್ನಿತರ ಕಾಯಿಲೆಗಳಿಗೆ ಒಳಗಾಗುತ್ತಿದ್ದಾನೆ. ಕಾಲ ಕಾಲಕ್ಕೆ ತಪಾಸಣೆಗೊಳಪಟ್ಟು, ಚಿಕಿತ್ಸೆ ಪಡೆದರೆ ಇವು ಗಳನ್ನು ಪ್ರಾಥಮಿಕ ಹಂತದಲ್ಲಿಯೇ ಗುಣಪಡಿಸಬ ಹುದು. ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಉಚಿತ ಆರೋಗ್ಯ ಶಿಬಿರ ಸಹಕಾರಿಯಾಗಿದೆ. ಹೀಗಾಗಿ ಗ್ರಾಮೀಣ ಜನತೆ ಇದರ ಸದುಪ ಯೋಗಪಡಿಸಿಕೊಳ್ಳಬೇಕು ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ಪಿ.ಲೋಕೇಶ್ ಮಾತನಾಡಿ, ಲಯನ್ಸ್ ಕ್ಲಬ್ ಸಾರ್ವಜನಿಕರಿಗಾಗಿ ಹಲವು ಕಾರ್ಯಕ್ರಮ ನಡೆಸುತ್ತಿದೆ. ಮನುಷ್ಯನಿಗೆ ಆರೋಗ್ಯವೇ ಮುಖ್ಯ. ನಮ್ಮ ಪೂರ್ವಜರ ಕಾಲದಲ್ಲಿ ವಾಂತಿ–ಭೇದಿ, ಟೈಫಾಯಿಡ್, ಕ್ಷಯ, ಕಾಲರದಂತಹ ಕಾಯಿಲೆಗಳು ಸಾಮಾನ್ಯವಾಗಿದ್ದವು. ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಬಿಪಿ, ಶುಗರ್, ಹೃದ್ರೋಗ ಹಾಗೂ ಕಿಡ್ನಿ ಕಾಯಿಲೆಗಳು ಸಾಮಾನ್ಯವಾಗಿವೆ ಹೀಗಾಗಿ ಗ್ರಾಮೀಣ ಜನತೆ ಆಗಾಗ್ಗೆ ತಪಾಸಣೆಗೆ ಒಳಗಾಗುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಡವಿನಕೋಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ.ವಿಶ್ವನಂದ್, ಮೈಸೂರು ಪ್ಯಾಲೇಸ್ ಸಿಟಿ ಲಯನ್ ಕ್ಲಬ್–317 ಸಂಸ್ಥೆ ಕಾರ್ಯದರ್ಶಿ ಪುಟ್ಟಸ್ವಾಮೀಗೌಡ, ಪದಾಧಿಕಾರಿಗಳಾದ ಜಯಕುಮಾರ್, ಡಿ.ಪಿ.ಪ್ರಕಾಶ್, ಕೆ.ಎಸ್.ಪ್ರಕಾಶ್, ಮಹದೇವ್, ಮೂರ್ತಿ, ಮಹದೇವಸ್ವಾಮಿ, ಕಾಳಯ್ಯ, ಶಿವಕುಮಾರ್, ಲಯನ್ ಡಾ.ರವಿಕಿರಣ್, ಲಯನ್ ಪುಟ್ಟಸ್ವಾಮಿ ಗೌಡ, ಲ. ಕಾಳಯ್ಯ, ಲಯನ್ ಮೇಲ್ವಿನ್, ಲ. ಶಿವಕುಮಾರ್, ಲ.ಡಿ.ಪಿ. ಪ್ರಕಾಶ್, ಕೆ.ಎಸ್. ಪ್ರಕಾಶ್ ಜೈಕುಮಾರ್, ಬೆಂಗಳೂರಿನ ಡಾ.ಎಸ್.ಆರ್. ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆ ವೈದ್ಯರಾದ ಡಾ.ಜನ್ನ, ಡಾ.ಜಿನ್ನಾ, ಡಾ.ಇಕ್ರಂ ಪಾಷಾ ಹಲವರಿದ್ದರು. ಇದೇ ವೇಳೆ 100 ಮಂದಿ ಕಣ್ಣು, 61 ಮಂದಿ ವಾಕ್ ಮತ್ತು ಶ್ರವಣ, 85 ಮಂದಿ ದಂತ ತಪಾಸಣೆ ಮಾಡಿಸಿಕೊಂಡರು.

ಬಸವಲಿಂಗೇಗೌಡ ನಿಧನ



ಮೈಸೂರು, ಅ. 13– ಮೈಸೂರು ಕುವೆಂಪುನಗರ ನಿವಾಸಿ ಹಾಗೂ ನಿವೃತ್ತ ಇಂಜಿನಿಯರ್ ಬಸವಲಿಂಗೇಗೌಡ(78) ಇವರು ಇಂದು ನಿಧನರಾದರು. ಕಳೆದ ಬುಧವಾರ ರಸ್ತೆ ಅಪಘಾತದಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದು ಅಪೋಲೋ ಆಸ್ಪತ್ರೆಗೆ ದಾಖಲಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇಂದು ಸಂಜೆ ಅವರ ಸ್ವಗ್ರಾಮ ಕೆಆರ್‌ಎಸ್ ಸಮೀಪದ ಹೊಸಹುಂಡಿ ಗ್ರಾಮದ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಸರೋಜಮ್ಮ



ಕೆ.ಆರ್.ಪೇಟೆ, ಅ.13– ತಾಲೂಕು ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹಾಗೂ ತಾಲೂಕು ಕುರುಬರ ಸಮಾಜದ ಹಿರಿಯ ಮುಖಂಡ ಲಕ್ಷ್ಮೀಪುರ ಎಲ್.ಪಿ.ನಂಜಪ್ಪ ಅವರ ಪತ್ನಿ ಸರೋಜಮ್ಮ(60) ಶುಕ್ರವಾರ ಸಂಜೆ ನಿಧನರಾದರು. ಮೃತರು ಪತಿ ಎಲ್.ನಂಜಪ್ಪ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅ.14ರಂದು ಬೆಳಗ್ಗೆ 11ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಮೈಸೂರಲ್ಲಿ ಅದ್ಧೂರಿಯಾಗಿ ನೆರವೇರಿದ 'ಮಹಿಷ ದಸರಾ'

ನೆರೆದಿದ್ದ ಸಾವಿರಾರು ಜನರಿಗೆ ದಮ್ಮ ದೀಕ್ಷೆ ಬೋಧಿಸಿದರು. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಿಂದ ನೂರಾರು ಜನರು ಭಾಗಿಯಾಗಿದ್ದರು. ಮಹಿಷ ಮಂಡಲದ ಆದಿ ದೊರೆ ಜೈ ಮಹಿಷಾಸುರ ಚಕ್ರವರ್ತಿ ಘೋಷಣಾ ಫಲಕ ಹಿಡಿದಿದ್ದ ಸಭಿಕರು ಭೀಮ ಘೋಷಣೆಗಳನ್ನು ಮೊಳಗಿಸಿದರು. ಮಹಿಷಾಸುರನ ವೇಷದಾರಿಗಳಿಬ್ಬರು ವೇದಿಕೆಯ ಅಕ್ಕ ಪಕ್ಕದಲ್ಲಿ ನಿಂತು ಗಮನ ಸೆಳೆದರು.

ಮೈಸೂರಿನ ಚಾಮುಂಡಿಬೆಟ್ಟದಲ್ಲಿರುವ ಮಹಿಷ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ತರುವಾಯ ಟೌನ್‌ಹಾಲ್‌ನಲ್ಲಿ ವೇದಿಕೆ ಕಾರ್ಯಕ್ರಮ ಮಾಡಲು ಈ ಹಿಂದೆ ತೀರ್ಮಾನಿಸಲಾಗಿತ್ತು. ಆದರೆ ಪೊಲೀಸರು ಮಹಿಷ ದಸರಾ ಹಾಗೂ ಚಲೋ ಚಾಮುಂಡಿಬೆಟ್ಟ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಿದ್ದರು. ನಗರದಲ್ಲಿ ಸೆಕ್ಷನ್ 144 ಪ್ರಕಾರ ನಿಷೇದಾಜ್ಞೆ ವಿಧಿಸಿದ್ದ ಕಾರಣ ಮಹಿಷ ದಸರಾ ಆಚರಣಾ ಸಮಿತಿಯವರು ಪುರಭವನಕ್ಕೆ ಸೀಮಿತವಾಗಿ ಇಂದು ವೇದಿಕೆ ಕಾರ್ಯಕ್ರಮ ನಡೆಸಿದರು.

ಈ ವೇಳೆ ಮಾತನಾಡಿದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, "ತನ್ನ ಮಾತಿನ ದಾಟಿಯ ಮೂಲಕ ಇಡೀ ಕರ್ನಾಟಕದ ಸ್ವಾಭಿಮಾನಿಗಳೆಲ್ಲಾ ಒಂದೆಡೆ ಸೇರಲು ಆತ ಕಾರಣಕರ್ತನಾಗಿದ್ದಾನೆ" ಎಂದು ಸಂಸದ ಪ್ರತಾಪ್ ಸಿಂಹ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು.

ನಮಗೆ ಮೈತ್ರಿ, ಪ್ರೀತಿ, ಶಾಂತಿ ಮುಖ್ಯ. ನಾವು ಎಂದೂ ಇತಿಹಾಸ ತಿರುಚುವುದಿಲ್ಲ. ನೀವು ಮನುವಾದಿಗಳು, ಗನ್ ವಾದಿಗಳು. ಆದರೆ ನಾವು ಅಂಬೇಡ್ಕರ್ ಅವರು ನಮಗೆ ನೀಡಿರುವ ಪೆನ್ ವಾದಿಗಳು. ನಮಗೆ ಎಂದೂ ಸಂಘರ್ಷ ಬೇಕಿಲ್ಲ, ನಾವು ಬೆಂಕಿ ಆರಿಸುವವರೆ ಹೊರತು, ಬೆಂಕಿ ಹೊತ್ತಿಸುವವರಲ್ಲ ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು. ಅವರು ನಮ್ಮನ್ನು ಕೊಂದು ಖುಷಿಯಲ್ಲಿದ್ದಾರೆ. ನಾವು ಅವರಿಂದ ಕೊಲ್ಲಿಸಿಕೊಂಡಿದ್ದೇವೆ. ಹೀಗಿರುವಾಗ ಕೊಲ್ಲಿಸಿಕೊಂಡಿರುವ ನಮ್ಮನ್ನು ಇವರು ಗೌರವದಿಂದ ಕಾಣಬೇಕು ಎಂದು ಆಗ್ರಹಿಸಿದ ಸ್ವಾಮೀಜಿ, ನಮಗೆ ಮನುವಾದ, ಮನುವಾದಿಗಳ ಹಬ್ಬ ಹಾಗೂ ಮನುವಾದಿಗಳ ದೇವರು ಬೇಕಿಲ್ಲ. ನಮಗೆ ಬೇಕಿರುವುದು ಪ್ರಜಾಪ್ರಭುತ್ವ ಎಂದು ತಿಳಿಸಿದರು.

ಶಾಸನಗಳಲ್ಲಿ ಉತ್ಪ್ರೇಕ್ಷೆ ಇಲ್ಲ: ಈ ಸಂದರ್ಭದಲ್ಲಿ ಮಾತನಾಡಿದ ಲೇಖಕ ತಲಕಾಡು ಚಿಕ್ಕರಂಗೇಗೌಡ, ಪುರಾಣದಲ್ಲಿ ಕಲ್ಪನೆಗಳಿರುತ್ತವೆ, ಉತ್ಪ್ರೇಕ್ಷೆಗಳಿರುತ್ತವೆ. ಒಂದಕ್ಕೊಂದು ಸೇರ್ಪಡೆಯಾಗುತ್ತಾ ಹೋಗುತ್ತದೆ. ಆದರೆ ಶಾಸನ ಹಾಗಲ್ಲ. ಕರಾರುವಕ್ಕಾದ ವಿಚಾರಗಳನ್ನು ತಿಳಿಸುತ್ತವೆ. ಈ ಮೂಲಕ 3ನೇ ಶತಮಾನದಲ್ಲಿ ಮಹಿಷನ ಆಳ್ವಿಕೆಯಲ್ಲಿ ದಾನ, ಧರ್ಮ ನಡೆಯುತ್ತಿತ್ತು, ರಾಮ ರಾಜ್ಯವಾಗಿತ್ತು, ಶ್ರೀಮಂತ ರಾಜ್ಯವಾಗಿತ್ತು. ಮಹಿಷ ಎಂದೂ ಮಹಿಳಾ ಪೀಡಕನಾಗಿರಲಿಲ್ಲ, ಬದಲಿಗೆ ರಾಜ್ಯದ ಉದ್ಧಾರಕನಾಗಿದ್ದನು ಎಂದು ಶಾಸನ ಸಾರಿ ಹೇಳುತ್ತದೆ ಎಂದರು. ಗಂಗ, ಚೋಳರ ಕಾಲದ ತನಕ ಇದು ಮಹಿಷ ನಾಡಾಗಿತ್ತು. ಆದರೆ ಹೊಯ್ಸಳರು ಬಂದ ಮೇಲೆ ಇದನ್ನು ಹೊಯ್ಸಳನಾಡು ಎಂದು ಕರೆಯುತ್ತಿದ್ದರು. ಈಗಿರುವಂತೆ ಆಗಲೂ ಮಹಿಷ ವಿರೋಧಿಗಳಿದ್ದ ಕಾರಣ ಮಹಿಷ ನಾಡಿನ ಹೆಸರು ಮರೆಯಾಯಿತು. ಚಾಮುಂಡೇಶ್ವರಿ ಇಲ್ಲಿಗೆ ವಲಸೆ ಬಂದಿರುವವಳು. ಅದಕ್ಕೂ ಮೊದಲು ಇಲ್ಲಿ ಮಹಿಷನಿದ್ದನು. ಆದರೆ ಇಲ್ಲಿ ಚಾಮುಂಡೇಶ್ವರಿ ವಿಗ್ರಹ ಪ್ರತಿಷ್ಠಾಪಿಸಿ ದೇವಸ್ಥಾನ ನಿರ್ಮಿಸಿದರು. ಚಾಮುಂಡೇಶ್ವರಿಗೆ ಅಂದು ನರ ಬಲಿ ಕೊಡಲಾಗುತ್ತಿತ್ತು. ಆದರೆ ಹೈದರಾಲಿ ಬಂದು ನರ ಬಲಿ ಕೊಡುವುದನ್ನು ನಿಲ್ಲಿಸಿದನು ಎಂದು ಚಿಕ್ಕರಂಗೇಗೌಡ ಪುರಾಣದ ಹಲವು ವಿಚಾರಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಅಂಬೇಡ್ಕರ್ ಅವರದು ಗಣಿತವಾದ, ಎಲ್ಲೆ ಹೋದರೂ ಬದಲಾಗದೆ ಒಂದೇ ರೀತಿಯ ಲೆಕ್ಕವಿರುತ್ತದೆ. ಆದರೆ ಮನುವಾದಿಗಳದು ರಾಸಾಯನಿಕ ವಾದ, ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿಯಲ್ಲಿ ಬದಲಾವಣೆಗಳಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಮುಂದೆ ಧೈರ್ಯವಾಗಿ ಕುಳಿತು ಮಾತನಾಡುವ ವ್ಯಕ್ತಿ ಅವಶ್ಯಕತೆ ಇದೆ. ಆದರೆ ನರೇಂದ್ರ ಮೋದಿ ಮುಂದೆ ಇಲಿ ತರಹ ಹೆದರಿ ನಿಲ್ಲುವವರು ನಮಗೆ ಬೇಕಿಲ್ಲ. ಈ ನಿಟ್ಟಿನಲ್ಲಿ ನರೇಂದ್ರ ಮೋದಿ ಮುಂದೆ ಧೈರ್ಯವಾಗಿ ಕುಳಿತು ಮಾತನಾಡುವ ನಾಯಕನನ್ನು ನಾವು ತಯಾರು ಮಾಡಬೇಕು ಎಂದು ಚಿಕ್ಕರಂಗೇಗೌಡರು ಕರೆ ನೀಡಿದರು.

ಮಹಿಷ ದಸರಾ ಆಚರಣೆಯನ್ನು ತಡೆಯುತ್ತೇವೆ, ತುಳಿಯುತ್ತೇವೆ ಎಂದು ಹೇಳುತ್ತಿದ್ದವರು ಇಂದು ಅಡ್ರೆಸ್‌ಗೆ ಇಲ್ಲದೆ ನಾಪತ್ತೆಯಾಗಿದ್ದಾರೆ ಎಂದು ಹೋರಾಟಗಾರ ಶಂಕರ್ ಗೇಲಿ ಮಾಡಿದರು.

ಮಹಿಷ ದಸರಾ ಆಚರಣೆ ಸಮಾರಂಭದಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಪ್ರತಿ ವರ್ಷ ಅಕ್ಟೋಬರ್ 14 ರಂದು ಪೂರ್ವಿಕರನ್ನು ನೆನೆಯುತ್ತಾ ದಮ್ಮ ದೀಕ್ಷೋತ್ಸವ ಮಾಡಬೇಕು. ಬೌದ್ಧ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ನಿರ್ಣಯ ಮಂಡಿಸಿದಾಗ ಎಲ್ಲರೂ ಕೈ ಎತ್ತಿ ಸರ್ವಾನುಮತದಿಂದ ಅಂಗೀಕರಿಸಿದರು.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಾವಿರಾರು ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಟೌನ್‌ಹಾಲ್ ಸುತ್ತ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಮೆಟಲ್ ಡಿಟೆಕ್ಟರ್ ಮೂಲಕ ಶೋಧಿಸಿ ಕಾರ್ಯಕ್ರಮಕ್ಕೆ ಪ್ರವೇಶ ನೀಡಲಾಗಿತ್ತು.

ಕಾರ್ಯಕ್ರಮ ಆರಂಭದಿಂದ ಕೊನೆ ತನಕ ಸ್ಥಳದಲ್ಲೇ ಇದ್ದ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರು ಭದ್ರತೆಯ ಉಸ್ತುವಾರಿ ವಹಿಸಿದ್ದರು.

ನಾವು ಯಶಸ್ವಿಯಾಗಿದ್ದೇವೆ...

ಅದನ್ನು ಉಲ್ಲಂಘನೆ ಮಾಡಿದ್ದಾರೆ. ಈ ಸಂಬಂಧ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು. ಅದೂ ಅಲ್ಲದೆ ಸರ್ಕಾರದ ಸ್ಥಳವಾದ ಪುರಭವನದಲ್ಲಿ ಮಹಿಷ ಉತ್ಸವಕ್ಕೆ ಜಿಲ್ಲಾಡಳಿತ ಅನುಮತಿ ನೀಡಬಾರದಿತ್ತು ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು. ಒಕ್ಕಲಿಗರನ್ನು ಸಂಸ್ಕೃತಿ ಹೀನರು ಎಂದು ಕರೆದಿದ್ದಾರೆ. ಈ ಮೂಲಕ ಮಹಿಷ ಉತ್ಸವದ ಆಚರಣೆಯ ವೇದಿಕೆಯನ್ನು, ಒಂದು ಜಾತಿಯನ್ನು ಗುರಿ ಮಾಡಿಕೊಂಡು ನಿಂದನೆ ಮಾಡಲು ಬಳಸಿಕೊಂಡಿದ್ದಾರೆ ಎಂದು ಕಿಡಿಕಾರಿದರು. ಇವರು ಹೇಳುವಂತಹ ಮಹಿಷನ ಅಸ್ತಿತ್ವಕ್ಕೆ ಯಾವುದೇ ಆಧಾರವಿಲ್ಲ. ತಾಳೆ ಇಲ್ಲದ ವಿಚಾರಗಳನ್ನು ಹೇಳುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ದೂರಿದರು.

ದಸರಾಗೆ 25 ಲಕ್ಷ ರೂ.ಗಳ ಪ್ರಾಯೋಜಕತ್ವ ಪತ್ರ ವಿತರಣೆ



ಮೈಸೂರು ಅರಮನೆ ಮಂಡಳಿ ಕಚೇರಿಯಲ್ಲಿ ಶುಕ್ರವಾರ ಸಂಜೆ ಕೆನರಾ ಬ್ಯಾಂಕ್ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಎಸ್.ರಾಜಶೇಖರ್ ಅವರು ದಸರಾಗೆ 25 ಲಕ್ಷ ರೂ.ಗಳ ಪ್ರಾಯೋಜಕತ್ವ ಪತ್ರವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಿಗೆ ನೀಡಿದರು. ಮೇಯರ್ ಶಿವಕುಮಾರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಡಾ. ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ಹಾಗೂ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.10.2023 ಶನಿವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಹಸ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪೈಲ್ಸ್, ಮೂಲವ್ಯಾಧಿ, ಫಿಸ್ತುಲ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ, ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ 85, ತಿಂಗಳ ಸಾಧಕರು ಶುಶ್ರೂಷೆಯಲ್ಲಿಯೇ ಸಾರ್ಥಕ್ಯ ಕಾಣುತ್ತಿರುವ ಸಿಸ್ಟರ್ ಕ್ರಿಸ್ಟೀನ್ ವಿನ್ಸೆಂಟ್ ಆಫ್ ಮೇರಿ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಸ್ನೇಹ ಬಿಂದು ಚಾರಿಟೆಬಲ್ ಟ್ರಸ್ಟ್‌ನ ಮೇರಿ ಲೋಬೋ, ಎಡ್ವಿನ್ ಗೆರಾಲ್ಡ್, ಸಾಹಿತಿ ಶ್ರೀಮತಿ ಎ. ವಿಜಯಶಂಕರ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ
- **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 67ನೇ ಧಮ್ಮದೀಕ್ಷಾ ದಿನಾಚರಣೆ, ಉದ್ಘಾಟನೆ : ಹಿರಿಯ ಉಪಾಸಕ ಎಸ್. ಮರಿಸ್ವಾಮಿ, ವಿಶೇಷ ಉಪನ್ಯಾಸ ತೆಂಜಿನ್ ಸಿಲೋನ್ ಅವರಿಂದ, ಉಪಸ್ಥಿತರು : ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಆರ್. ಇಂದಿರಾ, ಗಾಂಧಿ ಭವನ ನಿರ್ದೇಶಕ ಪ್ರೊ. ಎಸ್. ನರೇಂದ್ರಕುಮಾರ್, ಅಧ್ಯಕ್ಷತೆ : ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ. ಜೆ. ಸೋಮಶೇಖರ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಜನನಿ ಸೇವಾ ಟ್ರಸ್ಟ್ :** ದಸರಾ ಮಹೋತ್ಸವದ ಅಂಗವಾಗಿ ದೇಶ–ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಗುಲಾಬಿ ಹೂ ನೀಡಿ, ಮೈಸೂರು ಪೇಟಾ ತೊಡಿಸಿ, ನಂಜನಗೂಡು ರಸಬಾಳೆ, ಮೈಸೂರು ವೀಳ್ಯದೆಲೆ, ಮೈಸೂರು ಪಾಕ್, ಮೈಸೂರು ಮಲ್ಲಿಗೆ ನೀಡಿ, ಮಹಿಳೆಯರಿಗೆ ಬಳೆ ತೊಡಿಸಿ ಆಹ್ವಾನಿಸುವ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಶಾಸಕ ಕೆ. ಹರೀಶ್‌ಗೌಡ, ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಪೊಲೀಸ್ ಆಯುಕ್ತ ಬಿ. ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಸೀಮಾ ಲಾಟ್ಕರ್, ಪ್ರವಾಸಿಗರನ್ನು ಸತ್ಕರಿಸುವವರು : ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಅರಮನೆ ಆಡಳಿತ ಮಂಡಳಿ ಟಿ.ಎಸ್. ಸುಬ್ರಹ್ಮಣ್ಯ, ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀಮತಿ ಎಂ.ಕೆ. ಸವಿತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಕಲಾವಿದರಿಗೆ ಪ್ರಶಸ್ತಿ ಪತ್ರ ವಿತರಣೆ : ರಂಗಾಯಣ ನಿರ್ದೇಶಕರಾದ ಶ್ರೀಮತಿ ನಿರ್ಮಲ ಮಠಪತಿ, ಕೋರ್ ಕಮ್ಯುನಿಟಿ ಸರ್ವೀಸ್ ರೋಟರಿ ಕ್ಲಬ್ ನಿರ್ದೇಶಕ ಆರ್. ಗೌತಮ್ ಸಲೇಚ, ಅಧ್ಯಕ್ಷತೆ : ಜನನಿ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ಕೆ. ಅಶೋಕ, ಸ್ಥಳ: ಅರಮನೆ ಆಡಳಿತ ಮಂಡಳಿ ಕಚೇರಿ ಮುಂಭಾಗ, ಮೈಸೂರು ಅರಮನೆ, ಬೆಳಗ್ಗೆ 11.30ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ರಂಗ ಶಿಕ್ಷಕರಾದ ಅಮಿತ್ ಜೆ. ರೆಡ್ಡಿ ಅವರ ನಿರ್ದೇಶನದಲ್ಲಿ ಶೇಕ್ಸ್‌ಪಿಯರ್ ಮಹಾಕವಿಯ 'ವೆನಿಸ್ಸಿನ ವ್ಯಾಪಾರ' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ ರಂಗ ಮಂದಿರ, ರಂಗಾಯಣ, ಸಂಜೆ 6.30ಕ್ಕೆ.
- **ನಿರಂತರ ಫೌಂಡೇಷನ್ :** ಸಹಜ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ನಾಟಕ ಪ್ರದರ್ಶನ, ಉಪಸ್ಥಿತರು : ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಪರಿಸರ ತಜ್ಞ ಮನು, ನೃಪತುಂಗ ಕನ್ನಡ ಶಾಲೆ ಕಾರ್ಯದರ್ಶಿ ಸವಿತಾ ಮಲ್ಲೇಶ್, ಸಾದತ್ ಹಸನ್ ಮಾಂಟೋರವರ ಕಥೆಗಳ ಆಧಾರಿತ ಜಸ್ಟ್ ಎ ಮಿಸ್ಟೇಕ್ ನಾಟಕ ಪ್ರದರ್ಶನ, ನಿರ್ದೇಶನ : ಜೀವನ್ ಕುಮಾರ್ ಬಿ. ಹೆಗ್ಗೋಡು, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಡಾ. ವಿ.ಬಿ. ಕುಡಚಿರ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರ್ ಉಮೇಶ್, 7.15ಸರಸ್ವತಿ ಹಲಸಗಿ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 10.00 ಟಿ.ಎನ್.ಎಸ್. ಕೃಷ್ಣಾ –ಹಾಡುಗಾರಿಕೆ, 11.00 "ಸ್ವರಾಜ್"– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರಗಾಥೆ

ಮಧ್ಯಾಹ್ನ: 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ–ಸ್ವಾಮಿಗೌಡ ಮತ್ತು ಸಂಗಡಿಗರು, 1.20 ಭಾವಗೀತೆ–ಎಸ್.ಜಿ. ರಘುರಾಮ್, 1.30ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ, 4.00 ನಾಟಕ " ಇಂಥವರೂ ಇದ್ದಾರೆ", ರಚನೆ–ಬಿ.ಎಸ್. ಕೇಶವರಾವ್, ನಿರ್ಮಾಣ– ಉಮೇಶ್ ಎಸ್.ಎಸ್., 4.30 ನೆನಪಿನಂಗಳ–ಬಿಳಿಗಿರಿ ರಂಗನ ಬೆಟ್ಟದ ಶ್ರೀ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ರಜತ ಮಹೋತ್ಸವದಲ್ಲಿ ಭಾರತದ ಸನ್ಮಾನ್ಯ ಮಾಜಿ ರಾಷ್ಟ್ರಪತಿಗಳಾದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಮಾಡಿದ ಭಾಷಣದ ಆಯ್ದ ಭಾಗಗಳು, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಪರಾಗ– ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ರೂಪಕ್ ಕುಲಕರ್ಣಿ – ವೇಣುವಾದನ

ಮೂರನೇ ಪುಟದಿಂದ

ನಾನೇಳಿದ್ದಲ್ಲ, ಕುವೆಂಪು...: ಪ್ರೊ.ಭಗವಾನ್

ಎಂದು ಪ್ರೊ.ಭಗವಾನ್ ಹೇಳಿದರು. ಒಕ್ಕಲಿಗರು ಸಂಸ್ಕೃತಿ ಹೀನರು, ಪಶುಗಳು ಎಂದು ನಾನು ಹೇಳಿಲ್ಲ ಎಂದು ಪುನರ್ ಸ್ಪಷ್ಟಪಡಿಸಿದ ಪ್ರೊ.ಭಗವಾನ್, ನಾನು ಹೇಳಿದೆ ಅಂದರೆ ಹೊಡೆದು ಹಾಕಿ ಬಿಡುತ್ತಾರೆ, ಕೊಂದು ಬಿಡುತ್ತಾರೆ ಎಂದು ತಿಳಿಸಿದರು.

ಬ್ರಾಹ್ಮಣರು ರಾಜನಿಗೆ ಸಲಹೆ ನೀಡಿ, ಹೋಮ ಹವನದ ಮೂಲಕ ಅಗ್ನಿ ಪೂಜೆ ಮಾಡಿಸುತ್ತಿದ್ದರು. ಆದರೆ ಹೋಮದ ಬೆಂಕಿಯ ಮಹತ್ವವೇನು ಎಂದು ಬುದ್ಧನು ವಿವರಿಸಿದನು. ಬುದ್ಧನ ಆ ಮಾತುಗಳಿಗೆ ಪ್ರಭಾವಿತರಾಗಿ ಸಾವಿರಾರು ಜನರು ಅವನ ಶಿಷ್ಯರಾದರು. ಇದರಿಂದ ರಾಜರೂ ಕೂಡ ಹೋಮ ಪೂಜೆ ನಿಲ್ಲಿಸಿದರು. ಈ ಕಾರಣಕ್ಕಾಗಿ ಬುದ್ಧನನ್ನು ಕಂಡರೆ ಬ್ರಾಹ್ಮಣರಿಗೆ ಕೋಪವಿತ್ತು. ಬುದ್ಧನಿಗೆ ಅರಳಿ ಮರದ ಕೆಳಗೆ ಜ್ಞಾನೋದಯವಾಯಿತು ಎಂಬ ಕಾರಣಕ್ಕೆ ಅದರ ಮೇಲಿದ್ದ ಕೋಪಕ್ಕೆ ಅರಳಿ ಮರದ ಚೆಕ್ಕೆಯನ್ನು ಹೋಮಕ್ಕೆ ಹಾಕಿ ಬೆಂಕಿಯಲ್ಲಿ ಸುಡುತ್ತಾರೆ. ಇಂತಹ ಗೊಡ್ಡು ಸಂಪ್ರದಾಯವಾದಿಗಳಾಗಿರುವ ಬ್ರಾಹ್ಮಣರ ಸಂಪ್ರದಾಯಕ್ಕೆ ಅರ್ಥವಿಲ್ಲ ಎಂದು ಟೀಕಿಸಿದರು. ಬುದ್ಧ ಜ್ಞಾನ ಕೊಟ್ಟರೆ, ವೈದಿಕರು ಸಮಾಜಕ್ಕೆ ಅಜ್ಞಾನ ಕೊಟ್ಟರು. ಈ ಕಾರಣದಿಂದ ಗೌತಮ ಬುದ್ಧ ಮನ ಶಾಸ್ತ್ರದ ವಿಶ್ವದ ಮೊಟ್ಟ ಮೊದಲ ವಿಜ್ಞಾನಿ. ಜನಿವಾರದಿಂದ ಜಾತಿ ಗುರುತಿಸುವ ವೈದಿಕರು ಒಂದೊಂದು ರೀತಿಯ ಜಾತಿ ಹೆಸರಿಸಿದ್ದಾರೆ. ಸತತ ಎರಡು ಸಾವಿರ ವರ್ಷಗಳಿಂದ ಬ್ರಾಹ್ಮಣರು ಯಾರಿಗೂ ಸಂಸ್ಕೃತ ಕಲಿಸಲಿಲ್ಲ. ಶೂದ್ರರೆಂದರೆ ಅವರು ಬ್ರಾಹ್ಮಣರ ಗುಲಾಮರೆಂದು ಪರಿಗಣಿಸಿದ್ದರು. ನಮ್ಮ ಜೀತ ಮಾಡಲೆಂದೇ ಶೂದ್ರರನ್ನು ದೇವರು ಸೃಷ್ಟಿಸಿದ್ದಾನೆ ಎಂದು ಹೇಳುತ್ತಿದ್ದರು. ಇದರಿಂದ ಇಂತಹ ಧರ್ಮ ನಮಗೆ ಬೇಕಿಲ್ಲ ಎಂದು ಪ್ರೊ.ಭಗವಾನ್ ಗುಡುಗಿದರು.

ದೇವರೇಕೆ ಕೊರೊನಾ ತಡೆಯಲಿಲ್ಲ! ತನ್ನೆದುರು ಆಗುವ ಕಳ್ಳತನ ತಡೆಯಲ್ಲ!!

ದೇವರು ಎಲ್ಲರನ್ನು ರಕ್ಷಿಸುತ್ತಾನೆ ಎನ್ನುತ್ತಾರೆ. ಹಾಗಾದರೆ ದೇವರೇಕೆ ಕೊರೊನಾ ತಡೆಯಲಿಲ್ಲ, ತನ್ನೆದುರಿಗೆ ದೇವಸ್ಥಾನದಲ್ಲಿ ಈಗಲೂ ಕಳ್ಳತನವಾಗುವುದನ್ನು ಏಕೆ ತಡೆಯುತ್ತಿಲ್ಲ ಎಂದು ಪ್ರಶ್ನಿಸಿದ ಪ್ರೊ.ಭಗವಾನ್, ಹಾಗಾದರೆ ದೇವರೇ ಕಳ್ಳನಾಗಿದ್ದಾನೆ ಎಂದು ಟೀಕಿಸಿದರು. ದೇವಸ್ಥಾನದ ಗರ್ಭಗುಡಿಯೊಳಗೆ ಕತ್ತಲೆ ಇರುತ್ತದೆ. ಅಂದರೆ ದೇವರು ಕತ್ತಲಲ್ಲಿ ಇರುತ್ತಾನೆ ಎಂದರ್ಥ. ಆದರೆ ನಿಜವಾದ ಬೆಳಕು ತೋರಿದವನು ಬುದ್ಧ ಎಂದು ಹೇಳಿದರು. ಶ್ರೀರಾಮ ತುಂಬು ಗರ್ಭಿಣಿಯನ್ನು ಕಾಡಿಗೆ ಓಡಿಸಿದನು. ತರುವಾಯ ಆಕೆ ಏನಾದಳೆಂದು ಕೇಳಲಿಲ್ಲ. ಅಶ್ವಮೇಧ ಯಾಗದ ವೇಳೆ ಶ್ರೀರಾಮನಿಗೆ ಹೆಂಡತಿ ಮಕ್ಕಳ ಬಗ್ಗೆ ತಿಳಿಯಿತು. ಅಲ್ಲಾ ರೀ, 15 ವರ್ಷ ಹೆಂಡತಿ ಮಕ್ಕಳನ್ನು ಕೇಳದೆ ಇರುವ ಆ ರಾಮ ಎಂತವನು. ಇಂತಹ ರಾಮ ನಿಮಗೆ ಬೇಕಾ? ರಾಮರಾಜ್ಯವೆಂದರೆ ಶೂದ್ರರನ್ನು ಕೊಲ್ಲುವ ರಾಜ್ಯ.. ಇಂತಹ ರಾಮರಾಜ್ಯ ನಿಮಗೆ ಬೇಕೇ? ಎಂದು ಮರು ಪ್ರಶ್ನಿಸಿದರು.

ಮಂಚದಡಿ ಸಿಕ್ತು 42 ಕೋಟಿ ನಗದು

ಹೈದರಾಬಾದ್, ಗೋವಾ ಹಾಗೂ ಕರ್ನಾಟಕದ 40 ಹಿರಿಯ ಅಧಿಕಾರಿಗಳ ತಂಡ ಇಲ್ಲಿಯೇ ಬಿಡಾರ ಹೂಡಿದ್ದು, ಗುತ್ತಿಗೆದಾರರು, ರಿಯಲ್ ಎಸ್ಟೇಟ್ ಉದ್ಯಮಿಗಳು, ಕೈಗಾರಿಕೋದ್ಯಮಿಗಳು ಹಾಗೂ ಆಯ್ದ ಚಿನ್ನದ ವ್ಯಾಪಾರಿಗಳ ಚಲನ ವಲನದ ಮೇಲೆ ಕಣ್ಣಿಟ್ಟಿದ್ದು, ನಿನ್ನೆಯಿಂದ ಅವರ ಮನೆ, ಕಚೇರಿ ಹಾಗೂ ಅನಾಮಧೇಯ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. ಕೋಟ್ಯಾಂತರ ರೂ. ಜತೆಗೆ ಕೆಲವು ಮಹತ್ವದ ಆಸ್ತಿ–ಪಾಸ್ತಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಆದಾಯ ಇಲಾಖೆ ತೆರಿಗೆ ಅಧಿಕಾರಿಗಳು ಗಣೇಶ್ ಬ್ಲಾಕ್ ವಾರ್ಡ್ ನಂ. 95ರ ಮಾಜಿ ಕಾರ್ಪೊರೇಟರ್ ಅಶ್ವಥಮ್ಮ ಹಾಗೂ ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಆರ್. ಅಂಬಿಕಾಪತಿ ದಂಪತಿ ನಿವಾಸದ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದು, ಕೊಠಡಿಯಲ್ಲಿದ್ದ ಮಂಚದಡಿ 23 ಬಾಕ್ಸ್‌ಗಳಲ್ಲಿ 500 ರೂ. ಮುಖಬೆಲೆಯ ಕಂತೆ ಕಂತೆ ನೋಟುಗಳು ಪತ್ತೆಯಾಗಿವೆ. ಇವನ್ನು ಕಾರಿನಲ್ಲಿ ಸಾಗಿಸಲು ತಯಾರಿ ನಡೆಸಲಾಗಿತ್ತು ಎಂದು ಹೇಳಲಾಗಿದೆ. ಅಲ್ಲಿ ಪತ್ತೆಯಾದ 42 ಕೋಟಿ ರೂ. ಯಾರಿಗೆ ಸೇರಿದ್ದು ಎಂಬುದರ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಬೆಂಗಳೂರಿನ ಬಿಲ್ಡರ್‌ಗಳು, ಚಿನ್ನದ ವ್ಯಾಪಾರಿಗಳು ಹಾಗೂ ಗುತ್ತಿಗೆದಾರರಿಂದ ಈ ಸಂಗ್ರಹಿಸಿದ್ದು, ಈ ಹಣವನ್ನು ಚೆನ್ನೈನ ಹೊರ ವಲಯಕ್ಕೆ ಸಾಗಾಣಿಕೆ ಮಾಡಲು ಪ್ರಭಾವಿ ನಾಯಕರು ಮುಂದಾಗಿದ್ದರು ಎನ್ನಲಾಗಿದೆ. ಅವರನ್ನು ಕಳೆದ ಎರಡು ದಿನಗಳಿಂದ ಐಟಿ ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರಭಾವಿ ನಾಯಕ ನೀಡಿದ ಮಾಹಿತಿ ಆದರಿಸಿ ಕ್ಲಬ್‌ವೊಂದರಲ್ಲಿ ಸ್ನೇಹಿತರ ಜತೆ ಕುಳಿತಿದ್ದ ರಾಜ್ಯದ ಪ್ರಮುಖ ನಾಯಕರ ಪುತ್ರನನ್ನು ವಶಕ್ಕೆ ಪಡೆದು, ವಿಚಾರಣೆಗೊಳಪಡಿಸಿದ್ದಾರೆ.

5 ಗಂಟೆ ವಿದ್ಯುತ್ ಪೂರೈಕೆ

ಖರೀದಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ರಾಜ್ಯದಲ್ಲಿನ ವಿದ್ಯುತ್ ಉತ್ಪಾದಕರಿಂದ ವಿದ್ಯುತ್ ಪಡೆಯಲು ರಾಷ್ಟ್ರೀಯ ವಿಪತ್ತಿನಡಿಯಲ್ಲಿ ವಿದ್ಯುತ್ ಕಾಯ್ದೆಯ ಸೆಕ್ಷನ್ 11ನ್ನು ಜಾರಿಗೊಳಿಸಲಾಗಿದೆ. ಆ ಮೂಲಕ ವಿದ್ಯುತ್ ಕೊರತೆಯನ್ನು ನಿವಾರಿಸಲಾಗುವುದು ಎಂದು ಅಧಿಕಾರಿಗಳು ವಿವರಿಸಿದರು.

ದಕ್ಷಿಣದ ಎಲ್ಲ ರಾಜ್ಯಗಳಲ್ಲಿ ವಿದ್ಯುತ್ ಕೊರತೆ ತೀವ್ರವಾಗಿದೆ. ಪ್ರತಿ ವರ್ಷ ನೀವು contingency plan ಹೊಂದಿರಬೇಕು. ಯುದ್ಧ ಕಾಲೇ ಶಸ್ತ್ರಾಭ್ಯಾಸ ಎಂಬಂತೆ ಕಾರ್ಯಪ್ರವೃತ್ತರಾದರೆ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಎಚ್ಚರಿಸಿದರು.

ಶೇ.13 ರಷ್ಟು ವಿದ್ಯುತ್ ವಿತರಣಾ ನಷ್ಟವಾಗುತ್ತಿದೆ. ವಿದ್ಯುತ್ ಕಳವು ಗೃಹ ಜ್ಯೋತಿಯಿಂದ ಕಡಿಮೆಯಾಗಿದೆ. ಕೈಗಾರಿಕಾ ವಿದ್ಯುತ್ ಕಳವು ಅತೀ ಕಡಿಮೆ ಎನ್ನುವುದು ಅಧಿಕಾರಿಗಳ ಅಭಿಪ್ರಾಯ. ಕಬ್ಬಿನ ಬೆಳೆಗೆ ನೀರು ಹಾಯಿಸಲು ಕೆಲವು ಜಿಲ್ಲೆಗಳಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಕಬ್ಬಿನ ಕಟಾವು, ಅರೆಯುವಿಕೆ ಪ್ರಾರಂಭವಾದ ಕೂಡಲೇ ಬೇಡಿಕೆ ಇಳಿಕೆಯಾಗಲಿದ್ದು, ಕಬ್ಬು ಅರೆಯುವಿಕೆಯೊಂದಿಗೆ ಸಹ ಉತ್ಪಾದನೆಯಾಗಿ ವಿದ್ಯುತ್ ಲಭ್ಯವಾಗುತ್ತದೆ ಎಂದು ಸಭೆಗೆ ವಿವರಿಸಲಾಯಿತು.

216 ಬರಪೀಡಿತ ತಾಲೂಕು

ನಡೆಸಿ ಜಿಲ್ಲಾಧಿಕಾರಿಗಳು ನೀಡಿರುವ ವರದಿಯನ್ವಯ 11 ತಾಲೂಕುಗಳನ್ನು ತೀವ್ರ ಬರಪೀಡಿತ ತಾಲೂಕು ಹಾಗೂ 11 ಸಾಧಾರಣ ಬರಪೀಡಿತ ತಾಲೂಕುಗಳೆಂದು ನಿರ್ಧರಿಸಲಾಗಿದೆ. ಒಟ್ಟಾರೆ ಕೇಂದ್ರ ಸರ್ಕಾರದ ಬರ ನಿರ್ವಹಣೆ 2020ರ ಮಾರ್ಗಸೂಚಿಯಂತೆ 189 ತೀವ್ರ ಬರಪೀಡಿತ ತಾಲೂಕು ಹಾಗೂ 27 ಸಾಧಾರಣ ಬರಪೀಡಿತ ತಾಲೂಕುಗಳು ಒಳಗೊಂಡಂತೆ ಒಟ್ಟು 216 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿ ಆದೇಶಿಸಲಾಗಿದೆ.

ಚುನಾವಣೆಗಾಗಿ ಕರ್ನಾಟಕದಲ್ಲಿ ಹಣ ಸಂಗ್ರಹ

ಹೊರ ಬಿದ್ದಿದ್ದು, ಪಂಚ ರಾಜ್ಯಗಳ ಚುನಾವಣೆಗೆ ಫಂಡಿಗ್ ಆಗಿರುವ ಶಂಕೆ ವ್ಯಕ್ತವಾಗಿದೆ. ದಾಳಿ ವೇಳೆ 42 ಕೋಟಿ ರುಪಾಯಿ ನಗದು ಪತ್ತೆಯಾಗಿದೆ ಎಂದು ವರದಿಗಳು ತಿಳಿಸಿವೆ. ಈ ಬೆಳವಣಿಗೆ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ತೆಲಂಗಾಣ ರಾಜ್ಯ ಹಣಕಾಸು ಸಚಿವ ಟಿ.ಹರೀಶ್ ರಾವ್ ಅವರು, ಚುನಾವಣೆ ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಬಿಲ್ಡರ್‌ಗಳು ಹಾಗೂ ಚಿನ್ನಾಭರಣ ವ್ಯಾಪಾರಿಗಳಿಂದ ಕಮಿಷನ್ ಪಡೆದು, ಕಾಂಗ್ರೆಸ್ ಹಣ ಸಂಗ್ರಹಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಕರ್ನಾಟಕದಿಂದ ಬಂದಿರುವ ಅಕ್ರಮ ಹಣದಿಂದ ತೆಲಂಗಾಣದ ಮತದಾರರ ಮೇಲೆ ಪ್ರಭಾವ ಬೀರಲು ಕಾಂಗ್ರೆಸ್ ಬಯಸುತ್ತಿದೆ. ಈ ಹಿಂದೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಗುತ್ತಿಗೆದಾರರಿಂದ ಶೇ.40ರಷ್ಟು ಕಮಿಷನ್ ಪಡೆಯುತ್ತಿತ್ತು ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಕಮಿಷನ್ ಶೇ.50ಕ್ಕೆ ಏರಿದೆ ಎಂದು ಆರೋಪಿಸಿದ್ದಾರೆ.

8,000 ಪೊಲೀಸರ ನಿಯೋಜನೆ

ಉಳಿದ 3,000 ಮಂದಿ ಅಕ್ಟೋಬರ್ 22ರವರೆಗೆ ಹಂತ ಹಂತವಾಗಿ ಆಗಮಿಸುವರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ಇತ್ತೀಚೆಗಷ್ಟೇ ಮೈಸೂರಿನಲ್ಲಿ ದಸರಾ ಬಂದೋಬಸ್ತ್ ಸಂಬಂಧ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ದಿನಪೂರ್ತಿ ಸಭೆ ನಡೆಸಿ ಹೆಚ್ಚುವರಿ ಭದ್ರತಾ ತುಕಡಿಗಳನ್ನು ಮಂಜೂರು ಮಾಡುವುದಾಗಿ ತಿಳಿಸಿದ್ದ ಬೆನ್ನಲ್ಲೇ ಇಂದು ಸಂಜೆ ವೇಳೆಗೆ 500 ಹೋಂಗಾರ್ಡ್‌ಗಳು ಸೇರಿದಂತೆ 3,000 ಮಂದಿ ಮೈಸೂರಿಗೆ ಆಗಮಿಸಿದ್ದಾರೆ. ಹೊರಗಿನಿಂದ ಬರುವ ದಸರಾ ಬಂದೋಬಸ್ತ್ ಸಿಬ್ಬಂದಿಗೆ ಮೈಸೂರಿನ ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ವಿವಿ ಮೊಹಲ್ಲಾ, ಕೆಆರ್ ಮೊಹಲ್ಲಾ ಸೇರಿದಂತೆ ಮೈಸೂರು ನಗರದಾದ್ಯಂತ ಕಲ್ಯಾಣ ಮಂಟಪ, ವಿದ್ಯಾರ್ಥಿನಿಲಯ, ಸಮುದಾಯ ಭವನ, ಸರ್ಕಾರಿ ಹಾಗೂ ಖಾಸಗಿ ವಿದ್ಯಾಸಂಸ್ಥೆ ಸಭಾಂಗಣಗಳಲ್ಲಿ ವಸತಿ, ಊಟ–ತಿಂಡಿಗೆ ವ್ಯವಸ್ಥೆ ಮಾಡಲಾಗಿದ್ದು, ಸೆನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್ ಅದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ. ವಿಜಯದಶಮಿ ಮೆರವಣಿಗೆ ವೇಳೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಎಸ್ಪಿ, ಎಎಸ್ಪಿ, ಡಿವೈಎಸ್ಪಿ, ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳೂ ಸೇರಿದಂತೆ ಇನ್ನೂ 3,000 ಹೆಚ್ಚುವರಿ ಪೊಲೀಸರು ಆಗಮಿಸಲಿದ್ದು, ಮೈಸೂರು ನಗರದ ಸಿವಿಲ್, ಸಿಎಆರ್, ಕೆಎಸ್‌ಆರ್‌ಪಿ, ಹೋಂಗಾಡ್‌ಗಳೂ ಸೇರಿ 2,000 ಸಿಬ್ಬಂದಿಯನ್ನು ದಸರಾ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜನೆ ಮಾಡಲಾಗುತ್ತಿದೆ.

ಹೆಚ್ಚಿನ ಸಂಖ್ಯೆಯ ಮಹಿಳೆಯರು ದಸರಾ ಜಂಬೂ ಸವಾರಿ ನೋಡಲು ಆಗಮಿಸುವ ನಿರೀಕ್ಷೆ ಇರುವ ಕಾರಣ ಈ ಬಾರಿ ಕಳೆದ ವರ್ಷಕ್ಕಿಂತ ಅಧಿಕ ಸಂಖ್ಯೆಯ ಮಹಿಳಾ ಪೊಲೀಸರನ್ನು ಭದ್ರತಾ ಕರ್ತವ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇಂದು ಮೈಸೂರು ತಲುಪಿರುವ ಮೊದಲ ಹಂತದ ಪೊಲೀಸರಿಗೆ ನಾಳೆ (ಅ. 14)ಗೆ ಪೊಲೀಸ್ ಆಯುಕ್ತ ಹಾಗೂ ಡಿಸಿಪಿಗಳು ದಸರಾ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಬಗ್ಗೆ ವಿವರಿಸಿದ ನಂತರ ಅಕ್ಟೋಬರ್ 15ರಿಂದ ಆರಂಭವಾಗುವ ದಸರಾ ಕಾರ್ಯಕ್ರಮಗಳು ನಡೆಯುವ ಸ್ಥಳಗಳಿಗೆ ನಿಯೋಜನೆ ಮಾಡುವರು.

ನಿಷೇಧಾಜ್ಞೆ ಎಫೆಕ್ಟ್: ಚಾಮುಂಡಿಬೆಟ್ಟದಲ್ಲಿ ನೀರವ ಮೌನ; ಭಕ್ತರಿಲ್ಲದೆ ಭಣಗುಟ್ಟಿದ ದೇಗುಲ

● ಅಂಗಡಿ ಮುಚ್ಚಿ ಮನೆಯಲ್ಲೇ ದಿನದೂಡಿದ ವ್ಯಾಪಾರಿಗಳು ● ಬೆಟ್ಟದ ನಾಲ್ಕು ಸಂಪರ್ಕ ರಸ್ತೆಗಳಲ್ಲೂ ಪೊಲೀಸ್ ಸರ್ಪಗಾವಲು ● ಮಹಿಷ ಪ್ರತಿಮೆ ಸುತ್ತಲೂ ಬ್ಯಾರಿಕೇಡ್ ಭದ್ರತೆ





ಮೈಸೂರು,ಅ.13(ಎಂಟಿವೈ)– ಮಹಿಷ ದಸರಾ ಹಾಗೂ ಚಾಮುಂಡಿಬೆಟ್ಟ ಚಲೋ ವಿವಾದದ ಹಿನ್ನೆಲೆಯಲ್ಲಿ ನಿಷೇಧಾಜ್ಞೆ ವಿಧಿಸಿದ್ದರಿಂದ ಸದಾ ಭಕ್ತರು ಹಾಗೂ ಪ್ರವಾಸಿಗರಿಂದ ತುಂಬಿ ರುತ್ತಿದ್ದ ಚಾಮುಂಡಿಬೆಟ್ಟದಲ್ಲಿ ಶುಕ್ರವಾರ ನೀರವ ಮೌನ ಆವರಿಸಿತ್ತು. ನಾಡ ದೇವಿಯ ದೇವಾಲಯ ತೆರೆದಿತ್ತಾದರೂ, ಭಕ್ತರಿಲ್ಲದೆ ಭಣಗುಡುವಂತಾಗಿತ್ತು.

ದಲಿತ ಪರ ಹಾಗೂ ಪ್ರಗತಿಪರ ಸಂಘಟನೆಗಳಿಂದ ಮಹಿಷ ದಸರಾ ಆಚರಣೆ ವಿರೋಧಿಸಿ, ಸಂಸದ ಪ್ರತಾಪ ಸಿಂಹ ನೇತೃತ್ವದಲ್ಲಿ ಚಾಮುಂಡಿಬೆಟ್ಟ ಚಲೋ ನಡೆಸಲು ನಿರ್ಧರಿಸಿದ್ದರಿಂದ ಉದ್ದೇಶಿಸಿದ್ದರಿಂದ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್ ಇಲಾಖೆ ನಿಷೇಧಾಜ್ಞೆ ಜಾರಿಗೊಳಿಸಿತ್ತು. ಜೊತೆಗೆ ಚಾಮುಂಡಿ ಬೆಟ್ಟಕ್ಕೆ ಪೊಲೀಸರ ಸರ್ಪಗಾವಲು ಹಾಕಲಾಗಿತ್ತು. ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ನಾಲ್ಕು ರಸ್ತೆಗಳಲ್ಲೂ ನಾಕಾಬಂದಿ ಹಾಕಿದ್ದ ಪೊಲೀಸರು ಬೆಟ್ಟದ ನಿವಾಸಿಗಳನ್ನು ಹೊರತುಪಡಿಸಿ ಹೊರಗಿನವರು ಬೆಟ್ಟ ಪ್ರವೇಶಿಸಲು ಅವಕಾಶ ನೀಡಲಿಲ್ಲ. ಇದರಿಂದ ಬೆಟ್ಟದಲ್ಲಿ ಬಂದ್ ವಾತಾವರಣ ನಿರ್ಮಾಣವಾಗಿತ್ತು.

ಜನರಿಲ್ಲದೆ ಬಿಕೋ ಎಂದ ಬೆಟ್ಟ: ಶುಕ್ರವಾರ ಶಕ್ತಿ ದೇವತೆಯ ಆರಾಧನೆಯ ವಾರವಾದ ಶುಕ್ರವಾರ ನಾಡದೇವಿಯ ದರ್ಶನ ಪಡೆಯಲು ನಾಡಿನ ವಿವಿಧೆಡೆಯಿಂದ ಭಕ್ತರು ಆಗಮಿಸುವರು. ಇಂದು ಬೆಟ್ಟಕ್ಕೆ ಭಕ್ತರು ಹಾಗೂ ಪ್ರವಾಸಿಗರು ಬಂದರೂ ಪೊಲೀಸರು ಅವಕಾಶ ನೀಡದೆ, ಬೆಟ್ಟದ ತಪ್ಪಲಿನಲ್ಲಿಯೇ ತಡೆದು ವಾಪಸ್ಸು ಕಳುಹಿಸಿದರು. ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತುವವರಿಗೂ ನಿರ್ಬಂಧ ಹೇರಲಾಗಿತ್ತು. ಇದರಿಂದ ಚಾಮುಂಡಿಬೆಟ್ಟ ಬಿಕೋ ಎನ್ನುತ್ತಿತ್ತು.

ಅಂಗಡಿಗಳು ಬಂದ್: ಬೆಟ್ಟದ ಬಸ್ ನಿಲ್ದಾಣ ಹಾಗೂ ಪಾರ್ಕಿಂಗ್ ಕಟ್ಟಡದಿಂದ ದೇವಾಲಯದ ರಸ್ತೆ ಬದಿಯಲ್ಲಿರುವ ಪೂಜಾ ಸಾಮಗ್ರಿ, ವಿವಿಧ ವಸ್ತುಗಳ ಮಾರಾಟ ಮಳಿಗೆಗಳಲ್ಲಿ ಕೆಲವನ್ನು ಹೊರತುಪಡಿಸಿ ಬಹುತೇಕ ಮಳಿಗೆಗಳು ಬಂದ್ ಆಗಿದ್ದವು. ಭಕ್ತರು, ಪ್ರವಾಸಿಗರಿಲ್ಲದೆ ಮಳಿಗೆ ಮುಚ್ಚಿದ್ದ ವ್ಯಾಪಾರಿಗಳು ತಮ್ಮ ಮನೆಯಲ್ಲಿ ವಿಶ್ರಾಂತಿಗೆ ಜಾರಿದರು.

ಮಹಿಷ ಪ್ರತಿಮೆಗೆ ಭದ್ರತೆ: ದಸರಾ ಮಹೋತ್ಸವ ಆರಂಭಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಬೆಟ್ಟದಲ್ಲಿರುವ ಮಹಿಷನ ಪ್ರತಿಮೆಗೆ ಬಣ್ಣ ಬಳಿಯುವ ಕಾರ್ಯ ಸಾಗಿದೆ. ಮಹಿಷನ ಪ್ರತಿಮೆಗೆ ಟಾರ್ಪಾಲ್ ಸುತ್ತಿ ಬಣ್ಣ ಬಳಿಯುತ್ತಿದ್ದರೆ, ಯಾರಾದರೂ ಮಾಲಾರ್ಪಣೆ ಮಾಡಲು ಬರಬಹುದೆಂಬ ಮುನ್ನೆಚ್ಚರಿಕಾ ಕ್ರಮವಾಗಿ ಪ್ರತಿಮೆ ಸುತ್ತಲೂ ಬ್ಯಾರಿಕೇಡ್ ಹಾಕಿ ಪೊಲೀಸರ ಕಣ್ಗಾವಲಿನ ಭದ್ರತೆ ನಿಯೋಜಿಸಲಾಗಿತ್ತು

ಸಾರಿಗೆ ಸಂಸ್ಥೆ ಬಸ್ ಸಂಚಾರ ವಿರಳ: ನಿಷೇಧಾಜ್ಞೆ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟಕ್ಕೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಬೆಟ್ಟದ ನಿವಾಸಿಗಳನ್ನು ಹೊರತುಪಡಿಸಿ ಹೊರಗಿನವರಿಗೆ ಪ್ರಯಾಣಿಸಲು ಅವಕಾಶ ನೀಡಿರಲಿಲ್ಲ. ಪ್ರಯಾಣಿಕರ ಕೊರತೆಯಿಂದಾಗಿ ಸಾರಿಗೆ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್ ಓಡಿಸಲು ಕ್ರಮ ಕೈಗೊಳ್ಳಲಾಗಿತ್ತು

ಪ್ರವಾಸಿಗರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ

ಕಾವೇರಿ ಕ್ರಿಯಾ ಸಮಿತಿ ಹೋರಾಟ ತಾತ್ಕಾಲಿಕ ಸ್ಥಗಿತ



ಮೈಸೂರು, ಅ.13(ಜಿಎ)– ತಮಿಳು ನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ, ಕಳೆದ 12 ದಿನಗಳಿಂದ ನಗರದ ಟೌನ್‌ಹಾಲ್ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಡೆಸುತ್ತಿದ್ದ ಧರಣಿಯನ್ನು ದಸರಾ ಕಾರ್ಯಕ್ರಮ ಮತ್ತು ಪ್ರವಾಸಿಗರಿಗೆ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದೆ ಎಂದು ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ದೇವಿ ಮತ್ತು ಕಾವೇರಿ ನೀರು ನಮಗೆ ಎರಡು ಕಣ್ಣುಗಳಂತೆ. ಆದ್ದರಿಂದ ದಸರಾ ಮಹೋತ್ಸವಕ್ಕೆ ಯಾವುದೇ ಸಮಸ್ಯೆ ಆಗಬಾರದು ಎಂಬ ಕಾರಣಕ್ಕೆ ಧರಣಿಯನ್ನು ಸ್ಥಗಿತ ಮಾಡುತ್ತಿದ್ದೇವೆ. ಆದರೆ, ದಸರಾ ಮಹೋತ್ಸವ ಮುಕ್ತಾಯವಾದ ಮರುದಿನ ಸಮಿತಿಯ ಎಲ್ಲಾ ಪದಾಧಿಕಾರಿಗಳು ಸಭೆ ಸೇರಿ ಧರಣಿಯ ಮುಂದಿನ ರೂಪುರೇಷೆ ಸಿದ್ಧಪಡಿಸುತ್ತೇವೆ ಎಂದರು.

ಕಾವೇರಿ ಕ್ರಿಯಾ ಸಮಿತಿಗೆ ದೊಡ್ಡ ಇತಿಹಾಸವಿದ್ದು, ನಾವು ಧರಣಿ ಆರಂಭಿಸಿದ ದಿನದಂದು ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರು ಚಾಲನೆ ನೀಡಿದ್ದರು. ಹಾಗೇ ಕಳೆದ 12 ದಿನಗಳಿಂದ ನಡೆದ ಧರಣಿಗೆ ರಾಜ್ಯದ ವಿವಿಧ ಭಾಗಗಳಿಂದ 25ಕ್ಕೂ ಅಧಿಕ ಸಂಘಟನೆಗಳು, ಪೊಲೀಸ್ ಇಲಾಖೆ ಸಾಕಷ್ಟು ಸಹಕಾರ ನೀಡಿದೆ ಅವರಿಗೆ ಧನ್ಯವಾದ ಎಂದು ತಿಳಿಸಿದರು.

ಕಾವೇರಿ ನೀರಿನ ವಿಚಾರವಾಗಿ ಸಮಿತಿ ವತಿಯಿಂದ ಪ್ರಧಾನಮಂತ್ರಿಗಳ ಭೇಟಿಗಾಗಿ ಪತ್ರ ಬರೆಯಲಾಗಿದೆ. ರಾಜ್ಯದ ಸಂಸದರು ಕಾವೇರಿ ವಿಚಾರವಾಗಿ ಧ್ವನಿ ಎತ್ತುತ್ತಿಲ್ಲ. ಇದನ್ನು ನೋಡಿದರೆ, ಇವರಿಗೆ ರಾಜ್ಯದ ಬಗ್ಗೆ ಎಷ್ಟರ ಮಟ್ಟಿನ ಇಚ್ಛಾಶಕ್ತಿ ಇದೆ ಎಂದು ತಿಳಿಯುತ್ತದೆ. ಸದ್ಯದ 12 ದಿನಗಳ ಹೋರಾಟ ಪರಿಣಾಮ ಬೀರಿದ್ದು, ಇಷ್ಟು ದಿನ ಶಾಂತಿಯುತವಾಗಿ ಪ್ರತಿಭಟನೆ ಮಾಡಿದ್ದೇವೆ. ಆದರೆ, ಕಾವೇರಿ ವಿಚಾರದಲ್ಲಿ ಅಸಡ್ಡೆ ಮುಂದುವರೆದರೆ ದಸರಾ ಬಳಿಕ ಹೋರಾಟ ತೀವ್ರ ರೂಪದಲ್ಲಿ ಮುಂದುವರೆಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗೌರವ ಕಾರ್ಯದರ್ಶಿ ಮೆಲ್ಲಳ್ಳಿ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಮೋಹನ್ ಕುಮಾರ್ ಗೌಡ, ಸಾ.ರಾ.ಸುದರ್ಶನ್, ಮಹಾದೇವಸ್ವಾಮಿ, ಬಾಲಕೃಷ್ಣ, ತೇಜಸ್ ಲೋಕೇಶ್ ಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ರಾಜ್ಯ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿ



ಮೈಸೂರು, ಅ.13(ಜಿಎ)– ಮೈಸೂರು ದಸರಾ ಪ್ರಯುಕ್ತ ಅ.15ರಂದು ವಿನಾಯಕ ನಗರದಲ್ಲಿರುವ ಮಲೈ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ರಾಜ್ಯ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಕರಾಟೆ ಸಂಘದ ಅಧ್ಯಕ್ಷ ರ್‍ಯಾಂಬೋ ಕಿರಣ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ಕ್ಕೆ ಆರಂಭವಾಗುವ ಪಂದ್ಯಾವಳಿಯನ್ನು ಪೊಲೀಸ್ ಕಮಾಡೆಂಟ್ ವಿ.ಶೈಲೇಂದ್ರ, ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಉದ್ಘಾಟಿಸಲಿದ್ದಾರೆ. ಪಂದ್ಯಾವಳಿಯೂ ಕಥಾ ಮತ್ತು ಕುಮಿತೆ ವಿಭಾಗದಲ್ಲಿ ನಡೆಯಲಿದ್ದು, 6 ವರ್ಷ ಮೇಲ್ಪಟ್ಟ 25 ವರ್ಷ ಒಳಗಿನ ಬಾಲಕ– ಬಾಲಕಿಯರು, ಪುರುಷ– ಮಹಿಳೆಯರ ವಿಭಾಗದಲ್ಲಿ ಪಂದ್ಯಾವಳಿ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎಂ.ಬಿ.ಚಿದಾನಂದ, ಬಿ.ಎಸ್.ಗುರುಪ್ರಸಾದ್, ಲೋಕೇಶ್, ಮಾದೇಶ, ಸುಧಾಕರ.ಜಿ, ನಾಗಾಭರಣ ಉಪಸ್ಥಿತರಿದ್ದರು.

ನ.4ರಿಂದ ಮೈಸೂರಲ್ಲಿ ಡಿಪಿಎಸ್–ಜಾಲ್ಸಾ ಕಾರ್ಯಕ್ರಮ



ಮೈಸೂರು, ಅ.13(ಜಿಎ)–ವಿದ್ಯಾರ್ಥಿಗಳ ಕೌಶಲ್ಯ ಪ್ರದರ್ಶನಕ್ಕಾಗಿ ದೆಹಲಿ ಪಬ್ಲಿಕ್ ಸ್ಕೂಲ್ ವತಿಯಿಂದ ನ.4 ಮತ್ತು 5ರಂದು 'ಡಿಪಿಎಸ್ –ಜಾಲ್ಸಾ' ಕಾರ್ಯಕ್ರಮವನ್ನು ಬುಗತಗಳ್ಳಿಯಲ್ಲಿರುವ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಪ್ರಾಂಶುಪಾಲೆ ಮಂಜು ಶರ್ಮ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಆಹಾರ ಮಳಿಗೆ, ಆಟ, ಫ್ಯಾಶನ್ ಶೋ, ಲಕ್ಕಿ ಡ್ರಾ, ಸಾಂಸ್ಕೃತಿಕ ಕಾರ್ಯಕ್ರಮ, ಮನರಂಜನಾ ಚಟುವಟಿಕೆಗಳು ಆಯೋಜಿಸಲಾಗಿದೆ. ಇಲ್ಲಿ ಮಕ್ಕಳು ಹಾಗೂ ಪೋಷಕರಿಗೆ ಒಂದಾಗಿ ಭಾಗವಹಿಸಲು ಅವಕಾಶ ನೀಡಿಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಉಪನ್ಯಾಸಕರಾದ ನಂದಿತಾ ಫಿಲಿಪ್, ವೀಣಾ, ಮಮತಾ ಪ್ರಸಾದ್, ವಿದ್ಯಾರ್ಥಿ ಮುಖಂಡರಾದ ಅದ್ವೈತ್ ನಂಬಿಯಾರ್, ಸ್ತುತಿ ಭಾರ್ಗವಿ, ಗೌರವ್ ನಾಯಕ್ ಇದ್ದರು.

ದಸರಾ ಆರಂಭಕ್ಕೆ ಇನ್ನೊಂದೇ ದಿನ ಬಾಕಿ

ಹೋಟೆಲ್‌ಗಳಲ್ಲಿ ಶೇ.20ರಷ್ಟು ಕೊಠಡಿ ಮಾತ್ರವೇ ಭರ್ತಿ



ಮೈಸೂರು, ಅ.13(ಜಿಎ)– ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆಗೆ ಇನ್ನೊಂದೇ ದಿನ ಬಾಕಿ ಇರುವಂತೆ ಹೋಟೆಲ್‌ಗಳಲ್ಲಿ ಕೇವಲ ಶೇ.20ರಷ್ಟು ಕೊಠಡಿಗಳು ಮಾತ್ರವೇ ಬುಕ್ ಆಗಿವೆ. ಕಾವೇರಿ ವಿವಾದ ಮತ್ತು ಬರದ ಹಿನ್ನೆಲೆಯಲ್ಲಿ ಪ್ರವಾಸಿಗರು ಕೊಠಡಿ ಕಾಯ್ದಿರಿಸಲು ಕೊಂಚ ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗುತ್ತಿದೆ.

ಪ್ರತಿ ವರ್ಷ ದಸರಾ ಮಹೋತ್ಸವಕ್ಕೆ ತಿಂಗಳಿಗೂ ಮುಂಚಿತವಾಗಿ ಪ್ರವಾಸಿಗರು ಮೈಸೂರು ನಗರಕ್ಕೆ ಆಗಮಿಸುವುದು ಹೋಟೆಲ್‌ಗಳಲ್ಲಿ ರೂಂ ಬುಕ್ಕಿಂಗ್ ಮಾಡಿಕೊಳ್ಳುವುದು ಸಾಮಾನ್ಯವಾಗಿತ್ತು. ಅದರಂತೆ ಕಳೆದ ಬಾರಿ ಶೇ.50ರಷ್ಟು ಹೋಟೆಲ್‌ಗಳಲ್ಲಿ ರೂಂಗಳು ಬುಕ್ಕಿಂಗ್ ಆಗಿದ್ದವು. ಆದರೆ, ಈ ಬಾರಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಿದ್ದಾರೆ.

ಒಂಭತ್ತು ದಿನಗಳ ಕಾಲ ಜಗಮಗಿಸುವ ಮೈಸೂರಿನ ವೈಭವ ಮತ್ತು ವಿವಿಧ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ದೇಶ–ವಿದೇಶಗಳ ಲಕ್ಷಾಂತರ ಪ್ರವಾಸಿಗರು ಬರುತ್ತಾರೆ. ಈ ಸಂದರ್ಭ ನಡೆಯುವ ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕುಸ್ತಿ, ಕ್ರೀಡಾಕೂಟ, ಚಲನಚಿತ್ರೋತ್ಸವ, ಕವಿಗೋಷ್ಠಿ, ಪುಸ್ತಕ ಪ್ರದರ್ಶನ ಎಲ್ಲವೂ ಜನಾಕರ್ಷಣೆಯ ಕಾರ್ಯಕ್ರಮಗಳಾಗಿವೆ. ಅದರಲ್ಲೂ ಜಂಬೂಸವಾರಿಯ ದಿನ ನಗರದ ರಾಜಬೀದಿಗಳಲ್ಲಿ ಕಾಲಿಡಲು ಜಾಗವಿಲ್ಲದಂತಹ ಪರಿಸ್ಥಿತಿ ಇರುತ್ತದೆ. ಈ ಸಂದರ್ಭ ಮೈಸೂರಿನಲ್ಲೇ ತಂಗಲು ಪ್ರವಾಸಿಗರು ಹೋಟೆಲ್‌ಗಳಲ್ಲಿ ಸಾಕಷ್ಟು ಮುಂಚೆಯೇ ಕೊಠಡಿ ಕಾಯ್ದಿರಿಸುತ್ತಾರೆ. ಹಿಂದೆ ದಸರಾ ವೇಳೆ ಪ್ರವಾಸಿಗರಿಗೆ ಕೊಠಡಿಗಳು ಸಿಗದಂತಹ ಪರಿಸ್ಥಿತಿ ಇರುತ್ತಿತ್ತು. ಕೆಲ ಪ್ರವಾಸಿಗರು ಮೈಸೂರು ನಗರದಿಂದ ಹೊರ ವಲಯದಲ್ಲಿರುವ ಹೋಟೆಲ್‌ಗಳಲ್ಲಿಯೂ ತಂಗುತ್ತಿದ್ದರು.

ಮೈಸೂರಿನಲ್ಲಿ ವಸತಿಗೃಹಗಳು, ಹೋಟೆಲ್, ರೆಸ್ಟೋರೆಂಟ್ ಸೇರಿ 1500ಕ್ಕೂ ಹೆಚ್ಚು ಅತಿಥ್ಯ ಗೃಹಗಳಿವೆ. ಇವರಿಗೆ ದಸರಾ ಉತ್ತಮ ವಹಿವಾಟು, ಆದಾಯದ ದಾರಿಯಾಗಿದ್ದು, ಈ ವರ್ಷ ಸ್ಟಾರ್ ಮಟ್ಟದ ಹೋಟೆಲ್‌ಗಳಲ್ಲಿ ತಂಗಲು ಗ್ರಾಹಕರು ತಕ್ಕ ಮಟ್ಟಿಗೆ ಆಸಕ್ತಿ ತೋರಿದ್ದರೂ, ಮಧ್ಯಮ ಹಾಗೂ ಸಾಮಾನ್ಯ ದರ್ಜೆಯ ವಸತಿಗೃಹಗಳಲ್ಲಿ ತಂಗಲು ಪ್ರವಾಸಿಗರು ಆಸಕ್ತಿ ತೋರಿಲ್ಲ ಎಂದು ಕೆಲ ಹೋಟೆಲ್ ಉದ್ಯಮಿಗಳು ತಿಳಿಸಿದ್ದಾರೆ.

ಮೈಸೂರು ನಗರದಲ್ಲಿ 400ಕ್ಕೂ ಹೆಚ್ಚು ವಸತಿಗೃಹಗಳಿವೆ. ಅದರಲ್ಲಿ 10 ಸಾವಿರಕ್ಕೂ ಹೆಚ್ಚು ಕೊಠಡಿಗಳು ಲಭ್ಯವಿದೆ. ಈವರೆಗೆ ಇವುಗಳಲ್ಲಿ ಶೇ.20ರಷ್ಟು ಕೊಠಡಿಗಳನ್ನು ಮಾತ್ರವೇ ಪ್ರವಾಸಿಗರು ಮುಂಗಡವಾಗಿ ಕಾಯ್ದಿರಿಸಿದ್ದಾರೆ ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ವರ್ಷ ಸಹ ಉತ್ತಮ ವಹಿವಾಟು ನಡೆಯುವ ನಿರೀಕ್ಷೆ ಇತ್ತು. ಆದರೆ ಕಾವೇರಿ ವಿವಾದ, ಬರದ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಂದ ಹೆಚ್ಚು ಬುಕ್ಕಿಂಗ್ ಆಗಿಲ್ಲ ಅ.15ರ ನಂತರ ಪ್ರವಾಸಿಗರು ಮೈಸೂರಿಗೆ ಬರಲು ಆರಂಭಿಸುತ್ತಾರೆ ಎಂದರು.



ಮೈಸೂರಿನ ವಾರ್ಡ್ ನಂ.6 ಗೋಕುಲಂಗೆ ಸೇರಿದ ಬೃಂದಾವನ ಬಡಾವಣೆಯಲ್ಲಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು ನಿಷ್ಕ್ರಿಯಗೊಂಡಿರುವ ಬೋರ್‌ವೆಲ್‌ಗಳನ್ನು ಪರಿಶೀಲಿಸಿದರು. ಇಲ್ಲಿನ ಎಲ್ಲಾ ಬೋರ್‌ವೆಲ್‌ಗಳಲ್ಲಿ ಸಮರ್ಪಕವಾಗಿ ನೀರು ದೊರೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ವಾಟರ್ ಇನ್ಸ್‌ಪೆಕ್ಟರ್ ಮಹದೇವ, ವಾಟರ್‌ಮೆನ್‌ಗಳಾದ ಮೋಹನ್, ಮಂಜು ಇನ್ನಿತರರಿದ್ದರು.

ಮಹರ್ಷಿ ವಾಲ್ಮೀಕಿ ಜಯಂತಿ ಅರ್ಥಪೂರ್ಣ ಆಚರಣೆಗೆ ಡಿಸಿ ಸೂಚನೆ



ಮೈಸೂರು, ಅ.13(ಎಂಟಿವೈ)– ಈ ಬಾರಿ ಎಲ್ಲಾ ಸಮುದಾಯಗಳನ್ನು ಒಳಗೊಂಡಂತೆ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಅದ್ಧೂರಿಯಾಗಿ ಆಚರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿರಾಜೇಂದ್ರ ತಿಳಿಸಿದ್ದಾರೆ.

ಮೈಸೂರಿನ ಬಾಬು ಜಗಜೀವನ್ ರಾಮ್ ಭವನದ ಸಭಾಂಗಣದಲ್ಲಿ ಶುಕ್ರವಾರ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹನೀಯರ ಜಯಂತಿಗಳು ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಬಾರದು. ಎಲ್ಲಾ ಸಮುದಾಯಗಳು ಸೇರಿ ಆಚರಣೆ ಮಾಡಬೇಕು. ಅ.28ರಂದು ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಗುತ್ತದೆ. ಅಂದು ಬೆಳಗ್ಗೆ 10ಕ್ಕೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಆವರಣದಿಂದ ಕಲಾಮಂದಿರದ ವರೆಗೆ ಮಹರ್ಷಿ ವಾಲ್ಮೀಕಿ ಜಯಂತಿ ಭಾವಚಿತ್ರ, ಪುತ್ಥಳಿಯನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಗುತ್ತದೆ.

ಕಲಾ ಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಆದಿವಾಸಿ ಹಾಗೂ ಗಿರಿಜನ ಸಮುದಾಯದ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಹಾಡಿಗಳಿಂದ ಬುಡಕಟ್ಟು ಸಮುದಾಯದ ಮಕ್ಕಳನ್ನು ಕರೆತಂದು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸ್ವಚ್ಛತೆಯ ಜವಾಬ್ದಾರಿಯನ್ನು ಮೈಸೂರು ಮಹಾನಗರ ಪಾಲಿಕೆಯ ನಿಭಾಯಿಸಲಿದೆ. ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆ ಗಳ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿ ಸಲಿದ್ದಾರೆ. ವಾಲ್ಮೀಕಿ ಭವನದ ನಿರ್ಮಾಣವನ್ನು ಸಂಪೂರ್ಣ ಮಾಡಿಸಿ ಮುಂದಿನ ವರ್ಷದ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯನ್ನು ಅಲ್ಲಿಯೇ ಮಾಡಲಾಗುವುದು ಎಂದು ಭರವಸೆ ನೀಡಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರು ಮಾತನಾಡಿ, ಮಹರ್ಷಿ ವಾಲ್ಮೀಕಿಗೆ ಜಿಲ್ಲಾಡಳಿತ ವತಿಯಿಂದ ಸ್ತಬ್ಧಚಿತ್ರ ಮೆರವಣಿಗೆ ಮಾಡಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಯುವ ಸಂಭ್ರಮದಲ್ಲಿ ಉತ್ತಮ ಪ್ರದರ್ಶನ ನೀಡಿದ ವಿಶ್ವವಿದ್ಯಾನಿಲಯದ ಕನಿಷ್ಟ 5 ಕಲಾ ತಂಡಗಳನ್ನು ನೀಡಬೇಕು. ಮೆರವಣಿಗೆಯಲ್ಲಿ ವೀರಗಾಸೆ ಹಾಗೂ ಡೊಳ್ಳು ಕುಣಿತವನ್ನು, ಕಲಾ ತಂಡಗಳನ್ನು ಕರೆಸಬೇಕು. ಮೆರವಣಿಗೆಗೆ ಪೊಲೀಸ್ ಬ್ಯಾಂಡ್ ವ್ಯವಸ್ಥೆ ಮಾಡಬೇಕು. ಮುಖ್ಯ ಭಾಷಣಕಾರರಾಗಿ ಪ್ರೊ. ಪ್ರಶಾಂತ್ ನಾಯಕ್ ಅವರನ್ನು ಕರೆಯಬೇಕು. ಆದಿವಾಸಿಗಳ ಕಲಾ ತಂಡಗಳಿಗೆ ಆಹ್ವಾನ ನೀಡಬೇಕು. ಮೈಸೂರಿನ ಕಸಬಾ ಹೋಬಳಿಯಲ್ಲಿ ನಮ್ಮ ಸಮುದಾಯಕ್ಕೆ ಒಂದು ಸಮುದಾಯ ಭವನ ನಿರ್ಮಿಸುವಂತೆ ಮನವಿ ಮಾಡಿದರು. ಸಭೆಯಲ್ಲಿ ಸಮುದಾಯದ ಮುಖಂಡರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

'ಕೊಡಗರು' ಬದಲಾಗಿ 'ಕೊಡವ'; ಸರ್ಕಾರಿ ಆದೇಶ

ಮಡಿಕೇರಿ,ಅ.13– ಹಿಂದುಳಿದ ವರ್ಗಗಳ ಜಾತಿ ಪಟ್ಟಿಯ ಪ್ರವರ್ಗ 3ಎ ಕ.ಸಂ.2ರಲ್ಲಿ ನಮೂದಾಗಿರುವ ಕೊಡಗರು' (Kodagaru) ಎಂಬುದರ ಬದಲಾಗಿ ಕನ್ನಡ ಆವೃತ್ತಿಯಲ್ಲಿ 'ಕೊಡವ' ಎಂದು ಮತ್ತು ಆಂಗ್ಲ ಆವೃತ್ತಿಯಲ್ಲಿ 'Kodava' ಎಂದು ಬದಲಾಯಿಸಿ ಸರಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿ ಹೇಮಲತ ಎಂ. ಆದೇಶ ಹೊರಡಿಸಿದ್ದಾರೆ.

ನಾಳೆ ಕರಗ ಉತ್ಸವಕ್ಕೆ ಚಾಲನೆ

ಮಡಿಕೇರಿ, ಅ.13– ನಗರದ ಇತಿಹಾಸ ಪ್ರಸಿದ್ಧ 4 ಶಕ್ತಿ ದೇವತೆಗಳ ಕರಗ ಉತ್ಸವವು ಅ.15 ರಂದು ಸಂಜೆ 5 ಗಂಟೆಗೆ ಮಹದೇವಪೇಟೆಯ ಪಂಪಿನಕೆರೆ ಬಳಿ ನಗರ ದಸರಾ ಸಮಿತಿ ವತಿಯಿಂದ ಸಾಂಪ್ರದಾಯಿಕ ಪೂಜೆಯನ್ನು ಸಲ್ಲಿಸಿ ನಗರ ಪ್ರದಕ್ಷಿಣೆಗೆ ಕರಗಗಳನ್ನು ಬರಮಾಡಿಕೊಳ್ಳುವ ಮೂಲಕ 'ಮಡಿಕೇರಿ ದಸರಾಗೆ ಚಾಲನೆ' ದೊರೆಯಲಿದೆ ಎಂದು ನಗರ ದಸರಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ದೂರು ಬಾರದಂತೆ ಕಾರ್ಯ ನಿರ್ವಹಿಸಿ

ಅಧಿಕಾರಿಗಳಿಗೆ ಲೋಕಾಯುಕ್ತ ಎಸ್‌ಪಿ ಸಲಹೆ



ಮಡಿಕೇರಿ, ಅ.13– ಲೋಕಾಯುಕ್ತಕ್ಕೆ ದೂರು ಬರದಂತೆ ಅಧಿಕಾರಿಗಳು ಎಚ್ಚರದಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ಸಲಹೆ ಮಾಡಿದ್ದಾರೆ.

ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸಾರ್ವಜನಿಕರಿಂದ ದೂರು ಅರ್ಜಿ ಸ್ವೀಕರಿಸಿ ಅವರ ಸಮಸ್ಯೆಗಳನ್ನು ಆಲಿಸಿ ಬಳಿಕ ಅವರು ಮಾತನಾಡಿದರು. ಲೋಕಾಯುಕ್ತಕ್ಕೆ ದೂರು ಬಂದು ವಿಚಾರಣೆ ಆರಂಭಿಸಿದರೆ ಅಲೆಯಬೇಕಾಗುತ್ತದೆ. ಆದ್ದರಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತುಂಬಾ ಎಚ್ಚರವಹಿಸಬೇಕು. ಆದ್ದರಿಂದ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಾರ್ವಜನಿಕ ಸೇವೆಯನ್ನು ಸರ್ಕಾರದ ಸೇವೆ ಎಂದು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.

ಸಾರ್ವಜನಿಕರು ಕಚೇರಿಗೆ ಆಗಮಿಸಿದಾಗ ಅವರ ಕುಂದುಕೊರತೆಯನ್ನು ಸಮಾಧಾನದಿಂದ ಆಲಿಸಬೇಕು. ಕಚೇರಿಗೆ ಬಂದವರನ್ನು ಕೂರಿಸಿ ಮಾತನಾಡಬೇಕು ಎಂದು ಸುರೇಶ್ ಬಾಬು ಸಲಹೆ ಮಾಡಿದರು.

ಸರ್ಕಾರಿ ಸೇವೆಗೆ ಸೇರಿದವರು ಸಾರ್ವಜನಿಕರ ಕರ್ತವ್ಯ ನಿರ್ವಹಿಸಲು ಬಂದಿರುವುದು ಎಂಬುದನ್ನು ಅರಿತುಕೊಳ್ಳಬೇಕು. ಸಾರ್ವಜನಿಕರ ಮನವಿಗೆ ಸ್ಪಂದಿಸಬೇಕು. ತಮ್ಮ ವ್ಯಾಪ್ತಿಯಲ್ಲಿ ಕೆಲಸ ಆಗದಿದ್ದಲ್ಲಿ ಹಿಂಬರಹವನ್ನಾದರೂ ನೀಡಬೇಕು ಎಂದು ಹೇಳಿದರು. ಜನರ ನಿರೀಕ್ಷೆಯನ್ನು ಅಲ್ಪಸ್ವಲ್ಪವನ್ನಾದರೂ ಈಡೇರಿಸಿದರೆ ಆತ್ಮತೃಪ್ತಿ ಉಂಟಾಗುತ್ತದೆ. ಆ ನಿಟ್ಟಿನಲ್ಲಿ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯ ನಿರ್ವಹಿಸುವಂತೆ ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ಅವರು ವಿವರಿಸಿದರು.

ಕೊಡಗು ಜಿಲ್ಲೆಯಲ್ಲಿ ಸೈನಿಕರ ಸಂಖ್ಯೆ ಹೆಚ್ಚಿದ್ದಾರೆ. ಸೈನಿಕರ ಕೆಲಸವನ್ನು ಆದ್ಯತೆ ಮೇಲೆ ನಿರ್ವಹಿಸಬೇಕು ಎಂದು ಲೋಕಾಯುಕ್ತ ಎಸ್‌ಪಿ ಅವರು ಸಲಹೆ ನೀಡಿದರು. ಲೋಕಾಯುಕ್ತ ಡಿವೈಎಸ್‌ಪಿ ಪವನ್ ಕುಮಾರ್ ಅವರು ಮಾತನಾಡಿ ಲೋಕಾಯುಕ್ತ ಸಭೆಗೆ ಎಲ್ಲಾ ಹಂತದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು. ತಳ ಮಟ್ಟದ ಸಿಬ್ಬಂದಿಗಳನ್ನು ಕಳುಹಿಸಿಕೊಟ್ಟು ಸುಮ್ಮನಿರಬಾರದು ಎಂದು ತಾಕೀತು ಮಾಡಿದರು.

ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಲೋಕೇಶ್ ಅವರು ಮಾತನಾಡಿ ಕಚೇರಿಗೆ ಯಾರೇ ಬಂದರು ಸಹ ಸಂದರ್ಶಕರ ಹೆಸರು, ಮಾಹಿತಿಯನ್ನು ಬರೆಸಿಕೊಳ್ಳಬೇಕು. ಕಚೇರಿ ಕಾರ್ಯನಿರ್ವಹಣೆಯನ್ನು ಸರಿಯಾಗಿ ಜತನ ಮಾಡಬೇಕು ಎಂದು ಅವರು ತಿಳಿಸಿದರು. ಶುಕ್ರವಾರ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಸಾರ್ವಜನಿಕರ ದೂರು ಅರ್ಜಿ ಸ್ವೀಕಾರ ಸಂದರ್ಭದಲ್ಲಿ ಖಾತೆ ಬದಲಾವಣೆ, ಸರ್ವೆ ಮಾಡುವುದು, ಮತ್ತಿತರ ಅರ್ಜಿಗಳು ಸಲ್ಲಿಕೆಯಾದವು. ಈ ಸಂದರ್ಭದಲ್ಲಿ ಎಂ.ಬಿ.ದೇವಯ್ಯ ಅವರು ಗೋಮಾಳ ಸರ್ವೆ ಮಾಡಿಸಬೇಕು ಎಂದು ಲೋಕಾಯುಕ್ತ ಎಸ್‌ಪಿ ಅವರಿಗೆ ಮನವಿ ಮಾಡಿದರು. ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಸಾರ್ವಜನಿಕರಿಂದ 12 ಅರ್ಜಿಗಳು ಸ್ವೀಕೃತವಾಗಿದ್ದು, ಅರ್ಜಿಗಳನ್ನು ಪರಿಶೀಲಿಸಿ 2 ಅರ್ಜಿದಾರರಿಗೆ ಲೋಕಾಯುಕ್ತ ಸಂಸ್ಥೆಯ ನಮೂನೆ 1 ಮತ್ತು 2 ನ್ನು ನೀಡಲಾಯಿತು. ಉಳಿದಂತೆ 10 ಅರ್ಜಿಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ತಹಶೀಲ್ದಾರ್, ಸರ್ವೆ ಇಲಾಖೆ, ತಾಲೂಕು ಪಂಚಾಯಿತಿ, ಅರಣ್ಯ ಇಲಾಖೆ, ಪಿಡಬ್ಲ್ಯೂಡಿ ಇಲಾಖೆ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಕೇಂದ್ರ ಗ್ರಂಥಾಲಯ, ಅಗ್ನಿಶಾಮಕ ಇಲಾಖೆ ಗ್ರಾಮಾಂತರ ಪೊಲೀಸ್ ಇಲಾಖೆಯ ಸಮ್ಮುಖದಲ್ಲಿ ಅರ್ಜಿಯನ್ನು ವಿಚಾರಣೆ ಮಾಡಲಾಯಿತು.

ರಾತ್ರಿ ಗಸ್ತಿನಲ್ಲಿದ್ದ ಅರಣ್ಯ ಸಿಬ್ಬಂದಿ ಮೇಲೆ ಬೇಟೆಗಾರರಿಂದ ಗುಂಡಿನ ದಾಳಿ

ಸುಮಾರು 6 ಕಿ.ಮೀ ಬೆನ್ನಟ್ಟಿ ಇಬ್ಬರು ಬೇಟೆಗಾರರ ಬಂಧನ

ಮಡಿಕೇರಿ, ಅ.13– ಗಸ್ತಿನಲ್ಲಿದ್ದ ಅರಣ್ಯ ಸಿಬ್ಬಂದಿಗಳಿಬ್ಬರ ಮೇಲೆ ಬೇಟೆಗಾರರು ಗುಂಡಿನ ದಾಳಿ ನಡೆಸಿದ ಘಟನೆ ಶನಿವಾರಸಂತೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದೆ. ಶನಿವಾರಸಂತೆ ವ್ಯಾಪ್ತಿಯ ಕಣಗಾಲು–ಮಾಲಂಬಿ ರಸ್ತೆಯ ಬಾಣಾವರ ಮೀಸಲು ಅರಣ್ಯ ವ್ಯಾಪ್ತಿಯ ಭುವಂಗಾಲ ಬಳಿ ಈ ಘಟನೆ ನಡೆದಿದೆ. ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಘಟನೆ ಹಿನ್ನೆಲೆ: ಸೋಮವಾರಪೇಟೆ ಅರಣ್ಯ ವಲಯದ ಅರಣ್ಯ ಇಲಾಖೆ ಸಿಬ್ಬಂದಿ ಎಂದಿನಂತೆ ವಾಹನದಲ್ಲಿ ರಾತ್ರಿ ಗಸ್ತಿನಲ್ಲಿ ತೆರಳುತ್ತಿದ್ದ ಸಂದರ್ಭ ಶನಿವಾರಸಂತೆ–ಕುಶಾಲನಗರ ಮುಖ್ಯ ರಸ್ತೆಯಲ್ಲಿರುವ ಬಾಣಾವರ ಮೀಸಲು ಅರಣ್ಯ ವ್ಯಾಪ್ತಿಯ ಭುವಂಗಾಲ ಬಳಿ 4 ಮಂದಿ ಜೀಪು ನಿಲ್ಲಿಸಿಕೊಂಡಿರುವುದು ಕಂಡು ಬಂದಿತು. ಈ ಸಂದರ್ಭದಲ್ಲಿ ಅರಣ್ಯ ಸಿಬ್ಬಂದಿ ವಾಹನದಿಂದ ಇಳಿದು ಅತ್ತ ಕಡೆ ತೆರಳುತ್ತಿದ್ದ ಸಂದರ್ಭ ಜೀಪಿನಲ್ಲಿದ್ದ ಆರೋಪಿಗಳು ಅರಣ್ಯ ಸಿಬ್ಬಂದಿಗಳ ಮೇಲೆ ಗುಂಡು ಹಾರಿಸಿ, ಜೀಪಿನಲ್ಲಿ ಶನಿವಾರಸಂತೆ ರಸ್ತೆ ಕಡೆಗೆ ಪರಾರಿಯಾಗಲು ಯತ್ನಿಸಿದ್ದಾರೆ.

ಅರಣ್ಯ ಸಿಬ್ಬಂದಿಗಳು ಸುಮಾರು 6 ಕಿ.ಮೀ ದೂರ ಜೀಪನ್ನು ಬೆನ್ನಟ್ಟಿದ್ದಾರೆ. ಈ ವೇಳೆ ಮುಳ್ಳೂರು ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿ ಆರೋಪಿಗಳಿದ್ದ ವಾಹನ ಮಗುಚಿ ಕೊಂಡಿದೆ. ತಕ್ಷಣವೇ ಕಾರ್ಯ ಪ್ರವೃತ್ತ ರಾದ ಅರಣ್ಯ ಸಿಬ್ಬಂದಿಗಳು ಚೌಡ್ಲು ಗ್ರಾಮದ ರಾಜಶೇಖರ್ ಮತ್ತು ಕೆಂಚಮ್ಮನ ಬಾಣೆಯ ನಿವಾಸಿ ಧನು ಎಂಬವರನ್ನು ಬಂಧಿಸಿದ್ದಾರೆ ಜೀಪಿನಲ್ಲಿದ್ದ ಇನ್ನಿಬ್ಬರು ಆರೋಪಿಗಳು ಪರಾರಿಯಾಗಿದ್ದು ಅವರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಆರೋಪಿಗಳಿದ್ದ ಜೀಪನ್ನು ಅರಣ್ಯ ಇಲಾಖೆ ವಶಪಡಿಸಿಕೊಂಡಿದೆ. ಈ ಘಟನೆ ಕುರಿತು ಶನಿವಾರ ಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

'ಎಂಡಿಎಂಎ' ಮಾದಕ ವಸ್ತು ಮಾರುತ್ತಿದ್ದವನ ಬಂಧನ



ಮಡಿಕೇರಿ, ಅ.13– ನಿಷೇಧಿತ ಮಾದಕ ವಸ್ತು 'ಎಂಡಿಎಂಎ' ಅನ್ನು ಮಾರಾಟ ಮಾಡುತ್ತಿದ್ದ ಪಿರಿಯಾಪಟ್ಟಣ ಮೂಲದ ಆರೋಪಿಯನ್ನು ಮಡಿಕೇರಿಯ ಸೆನ್ ಪೊಲೀಸರು ಮಾಲು ಸಹಿತ ಬಂಧಿಸಿದ್ದಾರೆ. ಪಿರಿಯಾಪಟ್ಟಣ ನಿವಾಸಿ ಮಹಮದ್ ಆಲಿಶಾ(29) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಆತನ ಬಳಿಯಿದ್ದ 3.20 ಗ್ರಾಂ ಎಂಡಿಎಂಎ ಅನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮಡಿಕೇರಿಯ ಸಂಪಿಗೆಕಟ್ಟೆ ಬಳಿ ವ್ಯಕ್ತಿಯೋರ್ವ ನಿಷೇಧಿತ ಮಾದಕ ವಸ್ತು ಮಾರಾಟ ಮಾಡಲು ಪ್ರಯತ್ನಿಸುತ್ತಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಗೆ ಖಚಿತ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದ ಸಂದರ್ಭ ಆರೋಪಿ ಮಾಲು ಸಹಿತ ಸೆರೆಯಾಗಿದ್ದಾನೆ ಆರೋಪಿಯ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್ ಮಾರ್ಗದರ್ಶನದಲ್ಲಿ ಸೆನ್ ಪೊಲೀಸ್ ಠಾಣಾ ವೃತ್ತನಿರೀಕ್ಷಕ ಸಿ.ಕೆ. ರಾಘವೇಂದ್ರ ನೇತೃತ್ವದಲ್ಲಿ ಸೆನ್ ಠಾಣೆಯ ಕ್ರೈಂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಕರಡಿಗೋಡು ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ

ಕಾರ್ಮಿಕರು, ಸಾರ್ವಜನಿಕರಲ್ಲಿ ಆತಂಕ



ಸಿದ್ದಾಪುರ, ಅ.13– ಹುಲಿಯೊಂದು ಗ್ರಾಮದ ಕಾಫಿ ತೋಟಗಳಲ್ಲಿ ಪ್ರತ್ಯಕ್ಷಗೊಂಡಿದ್ದು, ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳು ಮನೆಯಿಂದ ಹೊರಬರಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಕಾಡು ಪ್ರಾಣಿಗಳ ಹಾವಳಿಯಿಂದ ಆತಂಕದ ಜೀವನ ನಡೆಸುವಂತಾಗಿದೆ.

ಕರಡಿಗೋಡು ಗ್ರಾಮ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಕಾಫಿ ತೋಟದಲ್ಲಿ ಹುಲಿ ಹೆಜ್ಜೆ ಗುರುತುಗಳು ಪತ್ತೆಯಾಗಿದೆ. ಬೆಳಗ್ಗೆ ಕಾಫಿ ತೋಟಕ್ಕೆ ತೆರಳಿದ ಕಾರ್ಮಿಕರಿಗೆ ಹುಲಿಯ ಹೆಜ್ಜೆ ಗುರುತು ಕಂಡುಬಂದಿದ್ದು ಕಾರ್ಮಿಕರು ಭಯಭೀತರಾಗಿ ಹಿಂತಿರುಗಿದ್ದಾರೆ.

ವಿಷಯ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭ ಕರಡಿಗೋಡು ಗ್ರಾಮದ ಮೂವರು ಬೆಳೆಗಾರರ ಕಾಫಿ ತೋಟದಲ್ಲಿ ಹುಲಿ ಹೆಜ್ಜೆ ಗುರುತು ಕಂಡುಬಂದಿದ್ದು ಸಮೀಪದ ಕಾಫಿ ತೋಟಗಳಲ್ಲಿರುವ ಬಗ್ಗೆ ಕೆಲ ಕಾರ್ಮಿಕರು ಮಾಹಿತಿ ನೀಡಿದ ಹಿನ್ನೆಲೆ ದಿನವಿಡಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದರು. ಹುಲಿ ಪ್ರತ್ಯಕ್ಷ ಗೊಂಡಿಲ್ಲ. ಹೆಜ್ಜೆ ಗುರುತು ಜಾಡು ಹಿಡಿದು ತೆರಳಿದ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಸಮೀಪದ ದುಬಾರೆ ಅರಣ್ಯದಂಚಿನವರೆಗೂ ಹೆಜ್ಜೆ ಗುರುತು ಕಂಡು ಬಂದಿದೆ.

ಕಾಡು ದನಗಳ ಬೇಟೆಯಾಡಲು ಬಂದ ಹುಲಿ ಸಮೀಪದ ಕಾಫಿ ತೋಟಗಳಲ್ಲಿ ಸಂಚರಿಸಿ ನಂತರ ಅರಣ್ಯಕ್ಕೆ ತೆರಳಿದೆ ಎಂದು ವಲಯ ಅರಣ್ಯಾಧಿಕಾರಿ ಕಳ್ಳಿರ ಎಂ ದೇವಯ್ಯ ತಿಳಿಸಿದ್ದಾರೆ.

ಎಸಿಎಫ್ ನೆಹರು ಅವರ ಮಾರ್ಗದರ್ಶನದಲ್ಲಿ ಡಿಆರ್‌ಎಫ್‌ಒ ಸಂಜೀತ್ ಸೋಮಯ್ಯ, ಮೋನಿಷಾ, ಅರಣ್ಯ ರಕ್ಷಕ ಅರುಣ, ಆರ್ ಆರ್ ಟಿ ಸಿಬ್ಬಂದಿಗಳಾದ ವಿನೋದ್, ಸಚಿನ್, ವಿನೋತ್, ಮುರುಗ, ಮಂಜು, ಅಚ್ಚಯ್ಯ ಸೇರಿದಂತೆ ಸಿಬ್ಬಂದಿಗಳು ಹಾಜರಿದ್ದರು.

ಕರಡಿಗೋಡು ಗ್ರಾಮದಲ್ಲಿ ಪ್ರತ್ಯಕ್ಷಗೊಂಡ ಹುಲಿಯ ಚಲನವಲನ ಪತ್ತೆ ಹಚ್ಚಲು ಕ್ಯಾಮೆರಾ ಅಳವಡಿಸಲಾಗುತ್ತಿದ್ದು, ಮುನ್ನೆಚ್ಚರಿಕೆ ಕ್ರಮ ವಹಿಸಲು ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಕ್ಯಾಮೆರಾದಲ್ಲಿ ಸೆರೆಯಾದ ನಂತರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಎಚ್ಚರ ವಹಿಸಬೇಕು.

– ಶರಣಬಸಪ್ಪ, ವಿರಾಜಪೇಟೆ ಡಿಎಫ್‌ಓ

ಕಾರಿಗೆ ಡಿಕ್ಕಿ ಹೊಡೆದು ಕೆಳಗೆ ಬಿದ್ದ ಬೈಕ್ ಸವಾರನ ಮೇಲೆ ಕ್ಯಾಂಟರ್ ಹರಿದು ಸಾವು

ಮಡಿಕೇರಿ, ಅ.13– ಕಾರೊಂದರ ಹಿಂಬದಿಗೆ ಡಿಕ್ಕಿ ಹೊಡೆದು ಕೆಳಗೆ ಬಿದ್ದ ಬೈಕ್ ಸವಾರನ ಮೇಲೆ ಎದುರಿನಿಂದ ಬರುತ್ತಿದ್ದ ಕ್ಯಾಂಟರ್ ಹರಿದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಮಡಿಕೇರಿ–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಇಬ್ಬನಿ ರೆಸಾರ್ಟ್ ಮುಂಭಾಗ ನಡೆದಿದೆ.

ಮೂಲತಃ ಕೆ.ಆರ್. ನಗರದ ಬೇರ್ಯ ನಿವಾಸಿ ಬೈರವ(28) ಎಂಬವರೇ ಮೃತ ದುರ್ದೈವಿ. ಬೈರವ ತಮ್ಮ ಬೈಕ್‌ನಲ್ಲಿ ತೆರಳುತ್ತಿದ್ದ ಸಂದರ್ಭ ಮಡಿಕೇರಿ ಹೊರವಲಯದ ರಾಷ್ಟ್ರೀಯ ಹೆದ್ದಾರಿಯ ಇಬ್ಬನಿ ರೆಸಾರ್ಟ್ ಮುಂಭಾಗ ಮುಂದೆ ಹೋಗುತ್ತಿದ್ದ ಕಾರೊಂದರ ಹಿಂಭಾಗಕ್ಕೆ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿದೆ. ಈ ವೇಳೆ ಬೈಕ್ ಸವಾರ ರಸ್ತೆಗೆ ಬಿದ್ದಿದ್ದಾನೆ. ಆಗ ಎದುರು ಬರುತ್ತಿದ್ದ ಕ್ಯಾಂಟರ್ ಚಕ್ರ ಬೈಕ್ ಸವಾರನ ತಲೆಯ ಮೇಲೆ ಹರಿದಿದೆ. ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಘಟನಾ ಸ್ಥಳಕ್ಕೆ ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸರು ತೆರಳಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಅ.17, ಶ್ರೀ ಕ್ಷೇತ್ರ ತಲಕಾವೇರಿಯಲ್ಲಿ ಪವಿತ್ರ ತೀರ್ಥೋದ್ಭವ

ಮಡಿಕೇರಿ, ಅ.13– ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ವತಿಯಿಂದ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಅ.17 ರಂದು ರಾತ್ರಿ 1 ಗಂಟೆ 27 ನಿಮಿಷಕ್ಕೆ ಸಲ್ಲುವ ಕರ್ಕಾಟಕ ಲಗ್ನದಲ್ಲಿ ಶ್ರೀ ಮೂಲ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವದ ಪುಣ್ಯ ಕಾಲ ನೆರವೇರಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾ ರೆಡ್ಡಿ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಶಾಸಕ ಡಾ.ಮಂಥರ್ ಗೌಡ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಭಾಗಮಂಡಲ ಗ್ರಾ.ಪಂ. ಅಧ್ಯಕ್ಷ ಎ.ಕಾಳನ ರವಿ ಇತರರು ಪಾಲ್ಗೊಳ್ಳಲಿದ್ದಾರೆ.

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಯ ಆಯುಕ್ತ ಎಚ್.ಬಸವರಾಜು, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ. ಪ್ರಸಾದ್, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿ.ಪಂ.ಸಿಇಒ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್, ತಹಶೀಲ್ದಾರ್ ಪಿ.ಸಿ. ಪ್ರವೀಣ್ ಕುಮಾರ್, ಶ್ರೀಭಗಂಡೇಶ್ವರ–ತಲಕಾವೇರಿ ದೇವಾಲಯದ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಎನ್.ಜಿ.ಚಂದ್ರಶೇಖರ್, ತಕ್ಕ ಮುಖ್ಯಸ್ಥರಾದ ಬಳ್ಳಡ್ಕ ಸಿ.ಅಪ್ಪಾಜಿ, ಕೋಡಿ.ಯು. ಮೋಟಯ್ಯ, ಸಿಬ್ಬಂದಿ ವರ್ಗದವರು ಇತರರು ಪಾಲ್ಗೊಳ್ಳಲಿದ್ದಾರೆ.

ಕರೆಂಟ್‌ಗಾಗಿ ಚಾ.ನಗರದಲ್ಲಿ ರೈತರ ಬೃಹತ್ ಪ್ರತಿಭಟನೆ

ರೈತರಿಂದ ಮೆರವಣಿಗೆ, ರಸ್ತೆತಡೆ, ಧರಣಿ, ಬಾರುಕೋಲು ಪಾದಯಾತ್ರೆ



ಚಾಮರಾಜನಗರ, ಅ.13– ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಆಗ್ರಹಿಸಿ ನಗರದಲ್ಲಿ ಶುಕ್ರವಾರ ಜಿಲ್ಲೆಯ ಹಲವು ರೈತ ಸಂಘಟನೆಗಳಿಂದ ಬೃಹತ್ ಪ್ರತಿಭಟನೆ ನಡೆಯಿತು.

ಹನೂರು, ಯಳಂದೂರು ಸೇರಿದಂತೆ ಜಿಲ್ಲೆಯ ಹಲವೆಡೆಯಿಂದ ಆಗಮಿಸಿದ ರೈತರು ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡು ರಾಜ್ಯ ಸರ್ಕಾರ, ಇಂಧನ ಸಚಿವರು, ಸೆಸ್ಕ್ ಇಲಾಖೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ಸ್ಥಳಕ್ಕೆ ಜಿಲ್ಲೆಯ ಮೂವರು ಶಾಸಕರು ಭೇಟಿ ನೀಡಿ, ಪರಿಸ್ಥಿತಿ ಕುರಿತು ವಿವರಿಸಿ ಮನವೊಲಿಸಲು ಯತ್ನಿಸಿದರಾದರೂ ರೈತರು ಪಟ್ಟು ಬಿಡದೇ ಧರಣಿ ಮುಂದುವರಿಸಿದ್ದಾರೆ.

ಹನೂರಿನಿಂದ ನೂರಾರು ರೈತರು ಭಾಗಿ: ಹನೂರಿನಿಂದ ಎರಡು ಲಾರಿಗಳಲ್ಲಿ ಮಹಿಳೆಯರು, ಮಕ್ಕಳು ಸೇರಿದಂತೆ ನೂರಾರು ರೈತರು ಆಗಮಿಸಿ, ನಗರದ ಪ್ರವಾಸಿ ಮಂದಿರದಲ್ಲಿ ಸಮಾವೇಶಗೊಂಡರು.

ನಂತರ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗುವ ಮೂಲಕ ಅಲ್ಲಿಂದ ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ ಮೂಲಕ ಭುವನೇಶ್ವರಿ ವೃತ್ತಕ್ಕೆ ಬಂದು ರಸ್ತೆ ತಡೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ, ಅಲ್ಲಿಂದ ಬಿ. ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ಬಂದು ಕಳೆದ ಮೂರು ದಿನಗಳಿಂದ ಅಹೋ ರಾತ್ರಿ ಧರಣಿ ನಡೆಸುತ್ತಿರುವ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳು ಹಾಗೂ ರೈತರಿಗೆ ಬೆಂಬಲ ಸೂಚಿಸಿ, ಧರಣಿ ನಡೆಸಿದರು.

ಯಳಂದೂರಿನಿಂದ ಪಾದಯಾತ್ರೆ: ರೈತ ಸಂಘದ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ರೈತರ ಮತ್ತೊಂದು ತಂಡ ಯಳಂದೂರು ಪಟ್ಟಣದಿಂದ ಬಾರಕೋಲು ಹಿಡಿದುಕೊಂಡು ಪಾದಯಾತ್ರೆಯ ಮೂಲಕ ಸಂಜೆ 5.30ರ ಸುಮಾರಿಗೆ ನಗರಕ್ಕೆ ಆಗಮಿಸಿ, ನಗರದ ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ, ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು.

ಈ ವೇಳೆ ರೈತ ಮುಖಂಡರು ಮಾತನಾಡಿ, ಕೃಷಿ ಪಂಪ್‌ಸೆಟ್‌ಗಳಿಗೆ ಸದ್ಯ 2 ಗಂಟೆಗಳು ಮಾತ್ರ ವಿದ್ಯುತ್ ನೀಡಲಾಗುತ್ತಿದೆ. ಕೇವಲ 2ಗಂಟೆಯ ವಿದ್ಯುತ್‌ನಿಂದ ಯಾವ ಬೆಳೆಗೆ ನೀರುಹರಿಸಲು ಸಾಧ್ಯವಿಲ್ಲ.





ಸರ್ಕಾರ 7ಗಂಟೆ ವಿದ್ಯುತ್ ನೀಡಬೇಕು ಎಂದು ಆಗ್ರಹಿಸಿದರು.

ಮೂವರು ಶಾಸಕರು ಭೇಟಿ: ನಗರದ ಜಿಲ್ಲಾಡಳಿತ ಭವನದ ಮುಂಭಾಗ ನಡೆಯುತ್ತಿರುವ ರೈತರ ಪ್ರತಿಭಟನಾ ಸ್ಥಳಕ್ಕೆ ಜಿಲ್ಲೆಯ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎ.ಆರ್. ಕೃಷ್ಣಮೂರ್ತಿ, ಶಾಸಕ ಗಣೇಶ ಪ್ರಸಾದ್ ಅವರು ಭೇಟಿ ನೀಡಿ ಪ್ರತಿಭಟನಾಕಾರರ ಅಹವಾಲು ಆಲಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ರೈತರ ಸಮಸ್ಯೆಗಳೇನು ಎಂಬುದು ತಿಳಿದಿದೆ. ರೈತರ ಸಂಕಷ್ಟದ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.

ರಾಜ್ಯದಲ್ಲಿ ಈ ಬಾರಿ ಮಳೆ ಕೊರತೆ ಪರಿಣಾಮ ವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆ. ಹೀಗಾಗಿ ವಿದ್ಯುತ್ ಕೊರತೆಯಾಗಿದ್ದು, ನಾವು ಸಹ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚಿಸಿ ಬೇರೆಡೆಯಿಂದ ವಿದ್ಯುತ್ ಖರೀದಿಸುವಂತೆ ಒತ್ತಾಯಿಸಿದ್ದೇವೆ. ಅವರು ಸಹ ವಿದ್ಯುತ್ ಖರೀದಿಗೆ ಆದೇಶಿಸಿದ್ದಾರೆ. ಮಳೆಯಾದರೆ ಸಮಸ್ಯೆ ಸುಧಾರಣೆಯಾಗಲಿದೆ. ಅಲ್ಲಿಯವರೆಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಆದರೆ, ಶಾಸಕರ ಮನವಿಗೆ ರೈತರು ಒಪ್ಪಲಿಲ್ಲ. ನಮ್ಮ ಸಮಸ್ಯೆ ಬಗೆಹರಿಯಬೇಕು. ವಿದ್ಯುತ್ ನಂಬಿಕೊಂಡು ಬೆಳೆದಿರುವ ಬೆಳೆಗಳು ಒಣಗುತ್ತಿದ್ದು, ಬೆಳೆಗೆ ನೀರೊದಗಿಸಲು 7ಗಂಟೆ ಪೂರ್ಣ ವಿದ್ಯುತ್ ಪೂರೈಸಬೇಕು. ಈ ಕುರಿತು ಸರ್ಕಾರ ಸ್ಪಷ್ಟ ಭರವಸೆ ನೀಡುವವರೆಗೂ ನಮ್ಮ ಪ್ರತಿಭಟನೆಯನ್ನುಯ ಮುಂದುವರಿಸುತ್ತೇವೆ ಎಂದು ಪಟ್ಟು ಹಿಡಿದರು.

ಸ್ಥಳದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಹಾಜರಿದ್ದರು. ಪ್ರತಿಭಟನೆ ರೈತ ಮುಖಂಡರಾದ ಮಹೇಶಪ್ರಭು, ಹೊನ್ನೂರು ಪ್ರಕಾಶ್, ಹೆಗ್ಗವಾಡಿಪುರ ಮಹೇಶ ಕುಮಾರ್, ಹೆಬ್ಬಸೂರು ಬಸವಣ್ಣ, ಸಿದ್ದರಾಜು, ಯಶವಂತ್ ಸೇರಿದಂತೆ ಜಿಲ್ಲೆಯ ನಾನಾ ಭಾಗದ ನೂರಾರು ಮಂದಿ ರೈತರು ಪಾಲ್ಗೊಂಡಿದ್ದರು.

ಕಾಯಿ ಒಡೆಯೊಕ್ಕೂ ದುಡ್ಡು, ವಿಭೂತಿ ಹಾಕೋಕು ದುಡ್ಡು...

ಸರತಿ ಸಾಲಿನಲ್ಲಿ ನಿಂತು ಸಮಸ್ಯೆ ಆಲಿಸಿದ ಬೆಟ್ಟದ ಪ್ರಾಧಿಕಾರದ ಕಾರ್ಯದರ್ಶಿ



ಹನೂರು, ಅ.13– ಕಾಯಿ ಒಡೆಯೊಕ್ಕೂ ದುಡ್ಡು, ವಿಭೂತಿ ಹಾಕೋಕು ದುಡ್ಡು, ಇದು ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಬಹುತೇಕ ಭಕ್ತರ ದೂರು.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಇರುವ ಮುಖ್ಯ ಸಮಸ್ಯೆಗಳ ಬಗ್ಗೆ ಭಕ್ತರಿಂದಲೇ ಮಾಹಿತಿ ಪಡೆಯಲು ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಅವರು ಸರತಿ ಸಾಲಿನಲ್ಲಿ ತೆರಳಿದಾಗ ಕೇಳಿ ಬಂದ ದೂರುಗಳು.

ನಂಜನಗೂಡಿನ ಭಕ್ತರೊಬ್ಬರು ಮಾತನಾಡಿ, ಅಂತರಗಂಗೆ, ಕಟ್ಟೆ ಬಸವೇಶ್ವರ ಹಾಗೂ ದೇವಾಲಯದ ಒಳಗಡೆ ಇರುವ ದೇವಾಲಯಗಳಲ್ಲಿ ಕಾಯಿ ಒಡೆಯಲು ಹಾಗೂ ವಿಭೂತಿ ಹಾಕಲು 5,10,20 ರೂ ಪಡೆಯುತ್ತಿದ್ದಾರೆ. ಈ ಬಗ್ಗೆ ಕ್ರಮ ವಹಿಸಬೇಕು ಎಂದರು. ಇದೇ ರೀತಿ ಬಹುತೇಕ ಭಕ್ತರು ಆಪಾದಿಸಿದರು.

ಮಹಿಳೆಯೊಬ್ಬರು ಮಾತನಾಡಿ, ದೇವಾಲಯದ ವತಿಯಿಂದ ನೆರಳಿನ ವ್ಯವಸ್ಥೆ ಕಲ್ಪಿಸಲಾಗಿದೆ. ಇದರ ಬದಲು ಶಾಶ್ವತವಾಗಿ ಶೀಟನ್ನು ಅಳವಡಿಸಿದ್ದರೆ ಎಲ್ಲಾ ಸಂದರ್ಭಗಳಲ್ಲೂ ಅನುಕೂಲವಾಗುತ್ತಿತ್ತು ಎಂದರು.

ಇನ್ನು ಕೆಲವು ಭಕ್ತಾದಿಗಳು ಸಮರ್ಪಕ ಶುದ್ಧ ಕುಡಿಯುವ ನೀರಿನ ಘಟಕವನ್ನು ತೆರೆದರೆ ಅನುಕೂಲವಾಗಲಿದೆ. ಆದ್ದರಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಎಂದು ಮನವಿ ಮಾಡಿದರು. ಭಕ್ತಾದಿಗಳ ಸಲಹೆಯನ್ನು ಆಲಿಸಿದ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಅವರು ಭಕ್ತಾದಿಗಳ ಜೊತೆ ಮಾತನಾಡಿ ಮುಂದಿನ ದಿನಗಳಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಂಬಂಧಪಟ್ಟ ಹಿರಿಯರ ಜೊತೆ ಚರ್ಚಿಸಿ ಕ್ರಮವಹಿಸುತ್ತೇನೆ. ಭಕ್ತರಿಗೆ ಯಾವುದೇ ತೊಂದರೆ ಆಗದಂತೆ ಅನುಕೂಲ ಕಲ್ಪಿಸುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ ಎಂದರು. ಮಹಾಲಯ ಅಮಾವಾಸ್ಯೆ ಪ್ರಯುಕ್ತ ಭಕ್ತಾದಿಗಳಿಗೆ ಕುಡಿಯುವ ನೀರು, ವಿಶೇಷ ದಾಸೋಹ, ನೆರಳಿನ ವ್ಯವಸ್ಥೆ ಸೇರಿದಂತೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಕಾರ್ಯದರ್ಶಿಯಾಗಿ ಸರಸ್ವತಿ ಅವರು ಅಧಿಕಾರ ವಹಿಸಿಕೊಂಡು ಕೇವಲ ಎರಡು ತಿಂಗಳಗಳಷ್ಟೇ ಆಗಿದೆ. ಅವರಿಗೆ ಈ ಜಾತ್ರೆ ಮೊದಲನೇ ಜಾತ್ರೆಯಾಗಿದ್ದು ಇರುವ ಸಮಸ್ಯೆಗಳ ಬಗ್ಗೆ ಭಕ್ತರಿಂದಲೇ ಪಡೆದುಕೊಂಡು ಮುಂದಿನ ಜಾತ್ರಾ ಮಹೋತ್ಸವಕ್ಕೆ ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಅವರೇ ಖುದ್ದು ಸರತಿ ಸಾಲಿನಲ್ಲಿ ದರ್ಶನಕ್ಕೆ ತೆರಳಿ ಭಕ್ತಾದಿಗಳಿಂದ ಸಲಹೆ ಪಡೆದುಕೊಂಡರು.

ಪ್ರಾಧಿಕಾರದ ವತಿಯಿಂದಲೇ ಭಕ್ತರಿಗೆ ಕಡಿಮೆ ದುಡ್ಡಿನಲ್ಲಿ ರೂಮ್ ಹಾಗೂ ಡಾರ್ಮೆಟ್ರಿಗಳನ್ನು ವಿತರಿಸುತ್ತಿದ್ದೇವೆ, ಭಕ್ತಾದಿಗಳು ಖಾಸಗಿ ವಸತಿಗೃಹಗಳನ್ನು ಆಶ್ರಯಿಸದೆ ಪ್ರಾಧಿಕಾರದ ವಸತಿಗೃಹಗಳನ್ನು ಪಡೆಯಬೇಕು ಎಂದು ಸಲಹೆ ನೀಡಿದರು.

ಕಟ್ಟಡಗಳ ಮೇಲೆ ಹತ್ತಿ ಗುಂಪುಗೂಡಿ ವೀಕ್ಷಣೆಗೆ ನಿಷೇಧಾಜ್ಞೆ

ಚಾಮರಾಜನಗರ, ಅ.13– ಚಾಮರಾಜನಗರ ಪಟ್ಟಣದಲ್ಲಿ ಪ್ರತಿಷ್ಠಾಪಿಸಿರುವ ವಿದ್ಯಾಗಣಪತಿ ವಿಗ್ರಹದ ವಿಸರ್ಜನಾ ಕಾರ್ಯಕ್ರಮದಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸೆಕ್ಷನ್ 144 ರನ್ವಯ ಮೆರವಣಿಗೆ ಹೋಗುವ ಬೀದಿಯ ಕಟ್ಟಡಗಳ ಮತ್ತು ವಿಸರ್ಜನಾ ಕಾರ್ಯಕ್ರಮ ಮುಗಿಯುವವರೆಗೆ ವಿಸರ್ಜನಾ ಕಾರ್ಯಕ್ರಮ ನಡೆಯುವ ಸ್ಥಳದ ಸುತ್ತಮುತ್ತಲಿನ ಕಟ್ಟಡಗಳ ಮೇಲೆ ಸಾರ್ವಜನಿಕರು ಹತ್ತಿ ಕುಳಿತುಕೊಳ್ಳುವುದು ಹಾಗೂ ಮಹಡಿ ಮೇಲಿಂದ ಗುಂಪು ಕಟ್ಟಿಕೊಂಡು ವೀಕ್ಷಿಸುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಆದೇಶ ಹೊರಡಿಸಿದ್ದಾರೆ.

ಗುಂಡ್ಲುಪೇಟೆಯಲ್ಲಿ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ಅಭಿವೃದ್ಧಿ ಕಾರ್ಯಗಳು ಕುಂಠಿತ, ಅಸಮರ್ಪಕ ವಿದ್ಯುತ್ ಪೂರೈಕೆಗೆ ಆಕ್ರೋಶ



ಗುಂಡ್ಲುಪೇಟೆ, ಅ.13– ಕಾಂಗ್ರೆಸ್‌ನ ರೈತ ವಿರೋಧಿ ನೀತಿಗಳ ವಿರುದ್ಧ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಿದರು.

ಶುಕ್ರವಾರ ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ನೇತೃತ್ವದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾದರೂ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿಲ್ಲ. ಪಂಪ್‌ಸೆಟ್‌ಗಳಿಗೆ ದಿನಕ್ಕೆ ಕೇವಲ ಎರಡು ಗಂಟೆ ವಿದ್ಯುತ್ ನೀಡುವ ಮೂಲಕ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಸೆಸ್ಕ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿದಿನ ಕನಿಷ್ಠ 8 ಗಂಟೆ ವಿದ್ಯುತ್ ಸರಬರಾಜಿಗೆ ಒತ್ತಾಯಿಸಿದರು.

ಈ ವೇಳೆ ಮನವಿ ಆಲಿಸಲು ಬಂದ ಸೆಸ್ಕ್ ಅಧಿಕಾರಿಗಳನ್ನು ಪ್ರತಿಭಟನಾಕಾರರು ತರಾಟೆಗೆ ತೆಗೆದುಕೊಂಡರು. ನೀವು ಸಮಸ್ಯೆ ಬಗೆಹರಿಸುವ ಬದಲು ಕೇವಲ ಭರವಸೆ ಕೊಡುವುದರಲ್ಲಿಯೇ ಕಾಲ ಕಳೆಯುತ್ತಿದ್ದೀರಿ. ಅನಿಯಮಿತ ವಿದ್ಯುತ್ ಕಡಿತದಿಂದ ಸಾರ್ವಜನಿಕರು ತುಂಬಾ ಸಮಸ್ಯೆ ಎದುರಿಸುತ್ತಿದ್ದಾರೆ. ಕೃಷಿ ಪಂಪ್‌ಸೆಟ್‌ಗಳಿಗೆ ಕೇವಲ ಎರಡು ಗಂಟೆ ವಿದ್ಯುತ್ ಸರಬರಾಜು ಮಾಡುತ್ತಿದ್ದು ಬೆಳೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದಂತಾಗಿದೆ. ಆದ್ದರಿಂದ ನಮ್ಮ ಮನವಿ ಆಲಿಸಲು ಜಿಲ್ಲಾಧಿಕಾರಿಗಳೇ ಬರಬೇಕು ಎಂದು ಸುಮಾರು ಒಂದು ಗಂಟೆಗಳ ಕಾಲ ಧರಣಿ ನಡೆಸಿದರು.

ತಹಸೀಲ್ದಾರ್ ಸೇರಿದಂತೆ ಎಲ್ಲಾ ಅಧಿಕಾರಿಗಳೂ ಜನತಾ ದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರಿಂದ ಯಾವುದೇ ಅಧಿಕಾರಿಯೂ ಸ್ಥಳಕ್ಕೆ ಬಾರದ ಹಿನ್ನೆಲೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನಕ್ಕೆ ತೆರಳಿದರು. ಬಿಜೆಪಿ ಕಾರ್ಯಕರ್ತರು ಹಾಗೂ ರೈತರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದರೂ ಮನವಿ ಸ್ವೀಕರಿಸಲು ಸ್ಥಳಕ್ಕೆ ಬಾರದ ತಹಸೀಲ್ದಾರ್ ರಮೇಶ್ ಬಾಬು ಅವರಿಗೆ ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ತರಾಟೆಗೆ ತೆಗೆದುಕೊಂಡು ತಾಲೂಕು ದಂಡಾಧಿಕಾರಿಯಾಗಿ ಜವಾಬ್ದಾರಿಯುತ ಹುದ್ದೆಯಲ್ಲಿರುವ ತಹಸೀಲ್ದಾರ್ ಯಾರದೋ ಮಾತು ಕೇಳಿ ಕೈಗೊಂಬೆಯಂತಾಗಿದ್ದಾರೆ. ನಿಷ್ಪಕ್ಷಪಾತವಾಗಿ ವಿವೇಕಯುತವಾಗಿ ಕೆಲಸ ಮಾಡುವುದನ್ನು ಕಲಿಯಿರಿ, ಜನರಿಗೆ ನ್ಯಾಯ ಕೊಡುವ ಕೆಲಸ ಮಾಡಿ, ನಿಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳಿ, ನೀವು ಯಾರದೋ ಪರವಾಗಿ ಕೆಲಸ ಮಾಡಲು ಬಂದಿಲ್ಲ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಜಗದೀಶ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಹೊರೆಯಾಲ ಮಹೇಶ್, ಪುರಸಭೆ ಸದಸ್ಯ ನಾಗೇಶ್, ಮುಖಂಡರಾದ ಎಲ್.ಸುರೇಶ್, ಎಸ್.ನಾಗೇಂದ್ರ ಮಾಧ್ಯಮ ಸಂಚಾಲಕ ಎಸ್‌ಸಿ.ಮಂಜುನಾಥ್, ಚೌಡಹಳ್ಳಿ ನಂಜಪ್ಪ ಸೇರಿದಂತೆ ಹಲವರು ಇದ್ದರು.

ಮೈಸೂರು ದಸರಾಗೆ ಜಿಲ್ಲಾಡಳಿತ ಆಹ್ವಾನ

ಪ್ರಮೋದಾದೇವಿ ಒಡೆಯರ್ ಅವರಿಗೆ ಫಲತಾಂಬೂಲ ನೀಡಿ ಅಧಿಕೃತ ಆಹ್ವಾನ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮೈಸೂರು,ಅ.13(ಪಿಎಂ)– ನಾಡ ಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ಮೈಸೂರು ರಾಜವಮನೆತನದವರಿಗೆ ಶುಕ್ರವಾರ ಅಧಿಕೃತ ಆಹ್ವಾನ ನೀಡಲಾಯಿತು. ರಾಜ್ಯ ಸರ್ಕಾರದ ಪರವಾಗಿ ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೈಸೂರು ಒಡೆಯರ್ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಅಧಿಕೃತ ಆಹ್ವಾನ ನೀಡಿದರು.

ಮೈಸೂರು ಅರಮನೆ ಆವರಣದಲ್ಲಿರುವ ರಾಜವಂಶಸ್ಥರ ನಿವಾಸದಲ್ಲಿ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿಯಾದ ಸಚಿವರು, ಸಾಂಪ್ರದಾಯಿಕವಾಗಿ ಅವರಿಗೆ ಹೂಗುಚ್ಛ–ಫಲತಾಂಬೂಲ, ಆಹ್ವಾನ ಪತ್ರಿಕೆ ನೀಡಿ, ದಸರಾ ಉತ್ಸವಕ್ಕೆ ಆತ್ಮೀಯವಾಗಿ ಆಹ್ವಾನಿಸಿದರು. ಅಲ್ಲದೆ, ಪ್ರತಿವರ್ಷ ನೀಡುವಂತೆ ಸರ್ಕಾರದಿಂದ ಗೌರವ ರಾಜಧನದ ಚೆಕ್ ನೀಡಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ದಸರಾ ಮಹೋತ್ಸವದಲ್ಲಿ ಭಾಗವಹಿಸಿ, ಸಂಪೂರ್ಣ ಸಹಕಾರ ನೀಡಬೇಕು. ಆ ಮೂಲಕ ಸರ್ಕಾರದೊಂದಿಗೆ ಇರಬೇಕೆಂದು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿ ಮಾಡಿ, ಅವರಿಗೆ ಆಹ್ವಾನ ನೀಡಲಾಗಿದೆ. ಅವರು ಸಂತೋಷದಿಂದ ದಸರಾ ಯಶಸ್ವಿಯಾಗಲಿ ಎಂದು ಹಾರೈಸಿದಾರೆ. ಮಹೋತ್ಸವಕ್ಕೆ ಎಲ್ಲಾ ಅಗತ್ಯ ಸಹಕಾರ ನೀಡಲು ಸಂತಸದಿಂದ ಸಮ್ಮತಿಸಿದ್ದಾರೆ ಎಂದರು.

ರಾಜಧನವನ್ನು ರಾಜಮನೆತನಕ್ಕೆ ಗೌರವ ಸಲ್ಲಿಸುವ ರೀತಿಯಲ್ಲಿ ಕೊಟ್ಟಿದ್ದೇವೆ. ದಸರಾ ಮಹೋತ್ಸವದ ಅಂತಿಮ ಸಿದ್ಧತೆ ಬಹುತೇಕ ಪೂರ್ಣಗೊಂಡಿದೆ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು.

ಪ್ರಾಯೋಜಕತ್ವಕ್ಕೆ ಸ್ಪಂದನೆ: ದಸರಾ ಪ್ರಾಯೋಜಕತ್ವಕ್ಕೆ ಪ್ರತಿಕ್ರಿಯೆ ಯಾವ ರೀತಿಯಲ್ಲಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಉತ್ತಮ ಸ್ಪಂದನೆ ದೊರೆಯುತ್ತಿದೆ. ಪರಿಸ್ಥಿತಿ ಅರ್ಥ ಮಾಡಿಕೊಂಡು ಹಲವರು ಪ್ರಾಯೋಜಕತ್ವ ನೀಡಲು ಮುಂದೆ ಬಂದಿದ್ದಾರೆ. ಸೈಕಲ್ ಪ್ಯೂರ್ ಅಗರಬತ್ತಿ ವತಿಯಿಂದ 1 ಕೋಟಿ ರೂ. ಪ್ರಾಯೋಜಕತ್ವ ನೀಡಲಾಗಿದೆ. ಕೆನರಾ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ತಲಾ 25 ಲಕ್ಷ ರೂ. ಪ್ರಾಯೋಜಕತ್ವ ಸಿಕ್ಕಿದೆ. ಇನ್ನು ಕೆಲವರು ಪ್ರಾಯೋಜಕತ್ವ ನೀಡುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಮೈಸೂರಿನಲ್ಲಿ ಸಿಆರ್‌ಪಿಸಿ ಸೆಕ್ಷನ್ 144 ಅಡಿಯಲ್ಲಿ ನಿಷೇದಾಜ್ಞೆ ಜಾರಿಯಲ್ಲಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ನಿಷೇದಾಜ್ಞೆ ಏಲ್ಲಿದೆ, ಎಲ್ಲವೂ ಸಹಜವಾಗಿಯೇ ಇದೆಯಲ್ಲವೇ? ಮೈಸೂರು ಶಾಂತಿಯಿಂದ ಕೂಡಿದ್ದು, ಶಾಂತಿ–ಸುವ್ಯವಸ್ಥೆಗೆ ಭಂಗ ಉಂಟು ಮಾಡುವಂತಹ ಯಾವುದೇ ಪರಿಸ್ಥಿತಿ ಇಲ್ಲ ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು, ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ನಗರ ಪಾಲಿಕೆ ಎಡಿಸಿ ರೂಪಾ, ಅರಮನೆ ಎಸಿಪಿ ಹೆಚ್.ಎಂ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ಅರಮನೆ ಅಂಗಳದಲ್ಲೇ ಭೀಮನ ಸರಸ–ಸಲ್ಲಾಪ!



ಮೈಸೂರು,ಅ.13(ಪಿಎಂ)– ಮೈಸೂರು ಅರಮನೆ ಅಂಗಳದಲ್ಲಿ ಎಲ್ಲರೆದುರೇ ಯಾವುದೇ ಮುಚ್ಚುಮರೆ ಇಲ್ಲದೇ ಭೀಮ ತನ್ನ ಪ್ರೇಯಸಿಯೊಂದಿಗೆ ಸರಸ–ಸಲ್ಲಾಪದ ನಡೆಸಿದ್ದಾನೆ! ಯಾವುದೇ ಅಳಕು–ಅಂಜಿಕೆ, ಮುಜುಗರ ಇಲ್ಲದೇ ಸಾರ್ವಜನಿಕವಾಗಿಯೇ ಪ್ರೇಯಸಿಯ ಚುಂಬಿಸಿ ರಮಿಸಿ ಪ್ರೇಮದ ಪರಾಕಾಷ್ಠೆಯಲ್ಲಿ ತೇಲಾಡಿದ್ದಾನೆ!!

ಮೈಸೂರು ಅರಮನೆ ಅಂಗಳದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆಯ ಸದಸ್ಯ ಭೀಮನ ಪ್ರೇಮ ಪ್ರಸಂಗವಿದು. ಅರಮನೆ ಅಂಗಳದಲ್ಲಿ ಹುಲ್ಲು ತಿನ್ನುತ್ತಿದ್ದ ಭೀಮ, ಇದ್ದಕ್ಕಿದ್ದಂತೆ ನನ್ನ ಸನಿಹದಲ್ಲೇ ಇದ್ದ ಮತ್ತೊಂದು ಹೆಣ್ಣಾನೆಯೊಂದಿಗೆ ಸರಸ ಸಲ್ಲಾಪಕ್ಕಿಳಿದ. ರೋಮ್ಯಾಂಟಿಕ್ ಮೂಡ್‌ನಲ್ಲಿ ಈ ಜೊಡಿ ಮೈಮರೆತಿದ್ದರೆ, ಅರಮನೆಗೆ ಭೇಟಿ ನೀಡಿದ್ದ ಪ್ರವಾಸಿಗರು ಈ ದೃಶ್ಯಾವಳಿಯನ್ನು ಅಚ್ಚರಿಯಿಂದ ನೋಡುತ್ತಾ ನಿಂತಿದ್ದರು.

ಇವರಿಗೆ ಆನೆಗಳ ರಮಿಸುವ ದೃಶ್ಯ ಅಪರೂಪವಾದ ಹಿನ್ನೆಲೆಯಲ್ಲಿ ಕೌತುಕದಿಂದ ಅವುಗಳತ್ತಲೇ ದೃಷ್ಟಿನೆಟ್ಟಿದ್ದರು. ಆದರೆ ಅವುಗಳೊಂದಿಗೆ ಪ್ರತಿದಿನ ಕಾಲ ಕಳೆದು ಅವುಗಳ ಲಾಲನೆ ಪಾಲನೆಯಲ್ಲಿ ತೊಡಗುವ ಮಾವುತ, ಕಾವಾಡಿ ಹಾಗೂ ಅವರ ಕುಟುಂಬದವರು ಅಲ್ಲೇ ಇದ್ದರೂ ಅವುಗಳತ್ತ ದೃಷ್ಟಿ ಹಾಯಿಸದೆ ತಮ್ಮ ಪಾಡಿಗೆ ತಾವು ಇತರೆ ಆನೆಗಳ ಮಜ್ಜನ ಕಾರ್ಯ ಸೇರಿದಂತೆ ಮತ್ತಿತರ ತಮ್ಮ ಕಾಯಕದಲ್ಲಿ ನಿರತರಾಗಿದ್ದರು.

ಇಂದು ಮೈಸೂರಿಗೆ ಸಿಎಂ



ಮೈಸೂರು, ಅ.13(ಎಂಕೆ)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಉದ್ಘಾಟನೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ(ಅ.14) ಮೈಸೂರಿಗೆ ಆಗಮಿಸಲಿದ್ದಾರೆ.

ಸಂಜೆ 5.30ಕ್ಕೆ ರಸ್ತೆ ಮೂಲಕ ಮೈಸೂರಿಗೆ ಆಗಮಿಸಲಿದ್ದು, ಅ.15 ರಂದು ಬೆಳಗ್ಗೆ 10.15ಕ್ಕೆ ಚಾಮುಂಡಿಬೆಟ್ಟದಲ್ಲಿ ನಡೆಯುವ ನಾಡಹಬ್ಬ ದಸರಾ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4 ಗಂಟೆಗೆ ಶ್ರೀ ದೇವರಾಜ ಅರಸು ವಿವಿದೋದ್ದೇಶ ಕ್ರೀಡಾಂಗಣದಲ್ಲಿ ದಸರಾ ಕುಸ್ತಿ ಪಂದ್ಯಾವಳಿ, 4.30ಕ್ಕೆ ವಸ್ತು ಪ್ರದರ್ಶನ, ರಾತ್ರಿ 7 ಗಂಟೆಗೆ ಅರಮನೆ ವೇದಿಕೆಯಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮೈಸೂರು ಮಿತ್ರ



ವಿಶ್ವಕಪ್ ಮಹಾಸಮರ 2023

ಅಂಕಪಟ್ಟಿ ವಿವರ					
ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ನ್ಯೂಜಿಲ್ಯಾಂಡ್	3	3	0	0	6
ದಕ್ಷಿಣ ಆಫ್ರಿಕಾ	2	2	0	0	4
ಭಾರತ	2	2	0	0	4
ಪಾಕಿಸ್ತಾನ	2	2	0	0	4
ಇಂಗ್ಲೆಂಡ್	2	1	1	0	2
ಬಾಂಗ್ಲಾದೇಶ	3	1	2	0	2
ಶ್ರೀಲಂಕಾ	2	0	2	0	0
ನೆದರ್‌ಲ್ಯಾಂಡ್ಸ್	2	0	2	0	0
ಆಸ್ಟ್ರೇಲಿಯಾ	2	0	2	0	0
ಅಫ್ಘಾನಿಸ್ತಾನ್	2	0	2	0	0

ನ್ಯೂಜಿಲ್ಯಾಂಡ್‌ಗೆ ಹ್ಯಾಟ್ರಿಕ್ ಗೆಲುವು

ಈ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ ಕೀವಿಸ್



ಚೆನ್ನೈ, ಅ.13– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ನ್ಯೂಜಿಲ್ಯಾಂಡ್, ಬಾಂಗ್ಲಾದೇಶದ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ವಿಶ್ವಕಪ್ ಪಂದ್ಯಾವಳಿಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಇಲ್ಲಿನ ಎಂ.ಎ.ಚಿದಂಬರಂ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಬಾಂಗ್ಲಾದೇಶ ನೀಡಿದ 246 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲ್ಯಾಂಡ್ ಆರಂಭದಲ್ಲೇ 9 ರನ್ ಗಳಿಸಿದ್ದ ರಚಿನ್ ರವೀಂದ್ರ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಒಂದಾದ ನಾಯಕ ಕೇನ್ ವಿಲಿಯಮ್ಸನ್ ಹಾಗೂ ಡಿವೋನ್ ಕಾನ್ವೆ 2ನೇ ವಿಕೆಟ್‌ಗೆ 80 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಕಾನ್ವೆ 3 ಬೌಂಡರಿ ಒಳಗೊಂಡ 45 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ನಾಯಕ ಕೇನ್ ವಿಲಿಯಮ್ಸನ್ ಅರ್ಧ ಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 8 ಬೌಂಡರಿ, 1 ಸಿಕ್ಸರ್ ಒಳಗೊಂಡ 78ರನ್ ಗಳಿಸಿದ್ದ ವೇಳೆ ಕೇನ್ ರಿಟೈರ್ಡ್ ಹರ್ಟ್ ಆಗಿ ಹಿಂತಿರುಗಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ನಡೆಸಿದ ಡ್ಯಾರಿಯಲ್ ಮಿಚೆಲ್ 67 ಎಸೆತಗಳಲ್ಲಿ 4 ಸಿಕ್ಸರ್, 6 ಬೌಂಡರಿ ಒಳಗೊಂಡ 89 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಗ್ಲೆನ್ ಫಿಲಿಫ್ 16 ರನ್ ಗಳಿಸಿದರು. ಅಂತಿಮವಾಗಿ ನ್ಯೂಜಿಲ್ಯಾಂಡ್ 42.5 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 248ರನ್ ಗಳಿಸಿ ಗೆಲುವಿನ ನಗೆ ಬೀರಿತು. ಬಾಂಗ್ಲಾ ಪರ ಶಕೀಬ್ ಅಲ್ ಹಸನ್ ಹಾಗೂ ಮುಸ್ತಾಫಿಜುರ್ ರೆಹಮಾನ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ನಿಗದಿತ 50 ಓವರ್‌ಗಳಲ್ಲಿ 9ವಿಕೆಟ್ ನಷ್ಟಕ್ಕೆ 245ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಮೊತ್ತ 56 ರನ್ ಆಗುವಷ್ಟರಲ್ಲೇ ಬಾಂಗ್ಲಾದೇಶ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಒಂದಾದ ನಾಯಕ ಶಕೀಬ್ ಅಲ್ ಹಸನ್ ಹಾಗೂ ಮುಷ್ಫಿಕರ್ ರಹೀಂ 96 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 150ರ ಗಡಿ ಮುಟ್ಟಿಸಿದರು. ಈ ವೇಳೆ ಶಕೀಬ್ ಅಲ್ ಹಸನ್ 40ರನ್ ಗಳಿಸಿ ನಿರ್ಗಮಿಸಿದರು. ಇದಾದ ಕೆಲ ಹೊತ್ತಲೇ 6 ಬೌಂಡರಿ, 2 ಸಿಕ್ಸರ್ ಒಳಗೊಂಡ 66 ರನ್ ಗಳಿಸಿದ್ದ ಮುಷ್ಫೀಕರ್ ರಹೀಂ ಸಹ ನಿರ್ಗಮಿಸಿದರು. ಉಳಿದಂತೆ ತಂಡದ ಪರ ಮೊಹಮ್ಮದುಲ್ಲಾ 41, ತಸ್ಕಿನ್ ಅಹಮ್ಮದ್ 17, ಮೆಹದಿ ಹಸನ್ ಮಿರಾಜ್ 30, ತಂಜೀದ್ ಅಹಮ್ಮದ್ 16ರನ್ ಗಳಿಸಿದರು. ನ್ಯೂಜಿಲ್ಯಾಂಡ್ ಪರ ಲೂಕಿ ಫರ್ಗೂಸನ್ 3, ಟ್ರೆಂಟ್ ಬೋಲ್ಟ್, ಮ್ಯಾಟ್ ಹೆನ್ರಿ ತಲಾ 2, ಸ್ಯಾಂಟ್ನರ್ ಹಾಗೂ ಗ್ಲೆನ್ ಫಿಲಿಫ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ನ್ಯೂಜಿಲ್ಯಾಂಡ್ ಪರ ಲೂಕಿ ಫರ್ಗೂಸನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರ್ಪಡೆ

ಬೆಂಗಳೂರು, ಅ.13– ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ನಡೆಯುವ 2028ರ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಕ್ರಿಕೆಟ್ ಸೇರಿದಂತೆ ಐದು ಹೊಸ ಕ್ರೀಡೆಗಳನ್ನು ಸೇರ್ಪಡೆ ಮಾಡಲಾಗಿದೆ.

ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಕ್ರಿಕೆಟ್, ಫ್ಲಾಗ್ ಫುಟ್ಬಾಲ್ ಸೇರಿದಂತೆ ಒಟ್ಟು ಐದು ಹೊಸ ಕ್ರೀಡೆಗೆ ಒಲಿಂಪಿಕ್ಸ್‌ನಲ್ಲಿ ವೇದಿಕೆ ಒದಗಿಸಲು ಅಸ್ತು ಎಂದಿದೆ. ಇದರೊಂದಿಗೆ ಬರೋಬ್ಬರಿ ಒಂದು ಶತಮಾನದ ಬಳಿಕ ಕ್ರಿಕೆಟ್ ಒಲಿಂಪಿಕ್ಸ್‌ಗೆ ಕಮ್‌ಬ್ಯಾಕ್ ಮಾಡುತ್ತಿದೆ. 2028ರ ಸಾಲಿನ ಎಲ್‌ಎ ಒಲಿಂಪಿಕ್ಸ್ ಕ್ರೀಡಾಕೂಟದ ಸಂಘಟಕರು ಐದು ಹೊಸ ಕ್ರೀಡೆಗಳ ಸೇರ್ಪಡೆಗೆ ಮನವಿ ಸಲ್ಲಿಸಿದ್ದರು. ಕ್ರಿಕೆಟ್, ಫ್ಲಾಗ್ ಫುಟ್ಬಾಲ್, ಲಾಕ್ರೋಸ್, ಸ್ಕ್ವಾಷ್ ಮತ್ತು ಬೇಸ್‌ಬಾಲ್–ಸಾಫ್ಟ್‌ಬಾಲ್ ಕ್ರೀಡೆಗಳನ್ನು ಒಲಿಂಪಿಕ್ಸ್‌ಗೆ ಸೇರ್ಪಡೆ ಮಾಡಲು ಐಒಸಿ ಅನುಮತಿ ನೀಡಿದೆ.

ಐಒಸಿ ಸಭೆಯಲ್ಲಿ ಆತಿಥೇಯ ನಗರದ ಈ ಮನವಿಗಳಿಗೆ ಮಾನ್ಯತೆ ನೀಡಲಾಗಿದೆ ಎಂದು ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಅತಿಥೇಯರ ಮನವಿ ಮೇರೆಗೆ ಈ ಕ್ರೀಡೆಗಳನ್ನು 2028ರ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಸೇರ್ಪಡೆ ಮಾಡಲಾಗಿದೆ. ಅಮೆರಿಕ ತನ್ನಲ್ಲಿನ ಕೆಲ ಐತಿಹಾಸಿಕ ಕ್ರೀಡೆಗಳನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶನ ಮಾಡಲು ಮುಂದಾಗಿದ್ದು, ಕೆಲ ಅಂತಾರಾಷ್ಟ್ರೀಯ ಕ್ರೀಡೆಗಳಿಗೂ ಮಣೆ ಹಾಕಿದೆ ಎಂದು ಬಾಕ್ ಹೇಳಿದ್ದಾರೆ. ಐಒಸಿ ಇದೇ ಭಾನುವಾರ ಅಂತಿಮ ಸಭೆ ನಡೆಸಲಿದ್ದು, ಸಮಿತಿ ತೆಗೆದುಕೊಂಡಿರುವ ಈ ನಿರ್ಧಾರಗಳಿಗೆ ಅಧಿಕೃತ ಮೊಹರು ಬೀಳಲಿದೆ.

ಶತಮಾನದ ಬಳಿಕ ಒಲಿಂಪಿಕ್ಸ್‌ಗೆ ಕ್ರಿಕೆಟ್: ಭಾರತದಲ್ಲಿ ಕ್ರಿಕೆಟ್ ಒಂದು ಹಬ್ಬದಂತೆ. ಇಂದು ಜಾಗತಿಕ ಮಟ್ಟದಲ್ಲಿ ಕ್ರಿಕೆಟ್‌ನ ಜನಪ್ರಿಯತೆ ಕೂಡ ಹೆಚ್ಚಾಗಿದೆ. ಹೀಗಾಗಿ ಹಲವು ದಶಕಗಳಿಂದ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸೇರ್ಪಡೆ ಮಾಡುವಂತೆ ಕೂಗು ಕೇಳಿ ಬರುತ್ತಲೇ ಇತ್ತು ಅಂದಹಾಗೆ ಭಾರತ ಕೂಡ ಭವಿಷ್ಯದಲ್ಲಿ ಒಲಿಂಪಿಕ್ಸ್ ಆಯೋಜನೆಗೆ ಬಿಡ್ಡಿಂಗ್ ಸಲ್ಲಿಸುವ ಅರ್ಹತೆ ಪಡೆದುಕೊಳ್ಳಲಿದೆ.

ಲಾಸ್ ಏಂಜಲೀಸ್ ಒಲಿಂಪಿಕ್ಸ್ ಕ್ರಿಕೆಟ್‌ನಲ್ಲಿ 6 ತಂಡಗಳ ನಡುವಣ ಪುರುಷರ ಮತ್ತು ಮಹಿಳೆಯರ ಟಿ20 ಕ್ರಿಕೆಟ್ ಟೂರ್ನಿ ಆಯೋಜನೆಗೆ ಯೋಜನೆ ರೂಪಿಸಲಾಗುತ್ತಿದೆ. ಕ್ರಿಕೆಟ್‌ನಲ್ಲಿ ಅತ್ಯಂತ ಕಡಿಮೆ ಓವರ್‌ಗಳ ಮಾದರಿ ಇದಾಗಿದ್ದು, ಒಲಿಂಪಿಕ್ಸ್‌ಗೆ ಪರಿಗಣಿಸಲಾಗಿದೆ. ಐಸಿಸಿ ಶ್ರೇಯಾಂಕದ ಅಗ್ರ 6 ತಂಡಗಳಿಗೆ ಅವಕಾಶ ಸಿಗುವ ಸಾಧ್ಯತೆ ಇದ್ದು, ಈ ಸಲುವಾಗಿ ಅರ್ಹತಾ ಸುತ್ತಿನ ಟೂರ್ನಿಯ ಆಯೋಜನೆ ಸಾಧ್ಯತೆಯೂ ಇದೆ.

ದಸರಾ ಉತ್ಸವ; ಸಾರಿಗೆ ಬಸ್‌ಗಳ ಸಂಚಾರ ಮಾರ್ಗ, ನಿಲುಗಡೆ ಸ್ಥಳ ನಿಗದಿ

ನಾಳೆಯಿಂದ ಅ. 22ರವರೆಗೆ ಈ ನಿಯಮ ಜಾರಿ



ಮೈಸೂರು, ಅ.12(ಎಸ್‌ಬಿಡಿ)– ದಸರಾ ಹಿನ್ನೆಲೆಯಲ್ಲಿ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಮತ್ತು ನಗರ ಸಾರಿಗೆ ಬಸ್ ಸಂಚಾರ ಮಾರ್ಗ ಮತ್ತು ನಿಲುಗಡೆ ವ್ಯವಸ್ಥೆಯಲ್ಲಿ ಅ.15ರಿಂದ 22ರವರೆಗೆ ನಿತ್ಯ ಸಂಜೆ 4 ರಿಂದ ರಾತ್ರಿ 11ರವರೆಗೆ ಬದಲಾವಣೆ ಮಾಡಲಾಗಿದೆ.

ಮೈಸೂರು–ಬೆಂಗಳೂರು ರಸ್ತೆ ಮೂಲಕ ನಗರಕ್ಕೆ ಆಗಮಿಸುವ, ನಿರ್ಗಮಿಸುವ ಬಸ್‌ಗಳ ಮಾರ್ಗ

ಆಗಮನ: ಬೆಂಗಳೂರು ರಸ್ತೆ– ನಾಡಪ್ರಭು ಕೆಂಪೇಗೌಡ ವೃತ್ತ– ಎಡ ತಿರುವು– ರಿಂಗ್ ರಸ್ತೆ ಮೂಲಕ ಮಹದೇವಪುರ ರಿಂಗ್ ರಸ್ತೆ ಜಂಕ್ಷನ್ (ಸಾತಗಳ್ಳಿ ಬಸ್ ಡಿಪೋ)– ಮಹದೇವಪುರ ರಸ್ತೆ– ನೆಕ್ಸಸ್ ಮಾಲ್ ಜಂಕ್ಷನ್– ಕಾಳಿಕಾಂಬ ದೇವಸ್ಥಾನ ರಸ್ತೆ ಜಂಕ್ಷನ್– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್ ಲೈಟ್ ಸರ್ಕಲ್) – ಬಿಎನ್ ರಸ್ತೆ– ಸಬರ್ಬನ್ ಬಸ್ ನಿಲ್ದಾಣ.

ನಿರ್ಗಮನ: ಸಬರ್ಬನ್‌ಬಸ್ ನಿಲ್ದಾಣ– ನವಾಬ್ ಹೈದರಾಲಿ ಖಾನ್ ವೃತ್ತ – ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಡಾ.ಬಿ.ಆರ್.ಅಂಬೇಡ್ಕರ್ ವೃತ್ತ (ಎಫ್‌ಟಿಎಸ್)– ಡಾ.ರಾಜಕುಮಾರ್ ವೃತ್ತ (ಫೌಂಟೆನ್ ಸರ್ಕಲ್)– ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್‌ಐಸಿ) – ಬನ್ನಿಮಂಟಪ ರಸ್ತೆ– ನಂದಿ ಬಸಪ್ಪ ಗೋರಿ ಜಂಕ್ಷನ್– ಟೋಲ್ ಗೇಟ್– ನಾಡಪ್ರಭು ಕೆಂಪೇಗೌಡ ವೃತ್ತ– ಬೆಂಗಳೂರು ರಸ್ತೆ ಮೂಲಕ ಮುಂದೆ ಸಾಗುವುದು.

ತಿ.ನರಸೀಪುರ ರಸ್ತೆಯಿಂದ ನಗರಕ್ಕೆ

ಆಗಮನ: ತಿ.ನರಸೀಪುರ ರಸ್ತೆ 'ಟಿ' ಜಂಕ್ಷನ್– ಲಲಿತಮಹಲ್ ರಸ್ತೆ– ಸಂಗೊಳ್ಳಿ ರಾಯಣ್ಣ ವೃತ್ತ– ಮಹಾರಾಣ ಪ್ರತಾಪ ಸಿಂಹ ವೃತ್ತ– ಟ್ಯಾಂಕ್ ಬಂಡ್ ರಸ್ತೆ– ಸರ್ಕಸ್ ಮೈದಾನ ಜಂಕ್ಷನ್– ಲೋಕರಂಜನ್ ರಸ್ತೆ– ಎಸ್.ಲಿಂಗಣ್ಣ ವೃತ್ತ(ಚಿರಾಗ್)– ಜಯಚಾಮರಾಜೇಂದ್ರ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)– ಬಲ ತಿರುವು– ಬಿ.ಎನ್.ರಸ್ತೆ– ಸಬರ್ಬನ್ ಬಸ್ ನಿಲ್ದಾಣ.

ಬನ್ನೂರು, ಮಳವಳ್ಳಿ ರಸ್ತೆ ಕಡೆಯಿಂದ ನಗರಕ್ಕೆ

ಆಗಮನ: ಬನ್ನೂರು ಮತ್ತು ಮಳವಳ್ಳಿ ಮೂಲಕ ಆಗಮಿಸುವ ಬಸ್ಸುಗಳು ಟೆರಿಷಿಯನ್ ಕಾಲೇಜು– ಬಲ ತಿರುವು– ರಾಜಕುಮಾರ್ ರಸ್ತೆ– ಉದಯಗಿರಿ ಕೆ.ಇ.ಬಿ ಜಂಕ್ಷನ್– ಎಡ ತಿರುವು– ಮಹದೇವಪುರ ರಸ್ತೆ– ಉದಯಗಿರಿ ಜಂಕ್ಷನ್– ನೆಕ್ಸಸ್ ಮಾಲ್ ಜಂಕ್ಷನ್– ಕಾಳಿಕಾಂಭ ದೇವಸ್ಥಾನ ಜಂಕ್ಷನ್– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್ ಲೈಟ್ ವೃತ್ತ) – ಬಿ.ಎನ್. ರಸ್ತೆ– ಸಬರ್ಬನ್ ಬಸ್ ನಿಲ್ದಾಣ.

ನಿರ್ಗಮನ: ಸಬರ್ಬನ್ ಬಸ್ ನಿಲ್ದಾಣ– ಫೈವ್ ಲೈಟ್– ಸರ್ಕಾರಿ ಭವನದ ಉತ್ತರ ದ್ವಾರ– ಕಾಳಿಕಾಂಭ ದೇವಸ್ಥಾನದ ಜಂಕ್ಷನ್– ಡಿ.ಪಿ.ಓ ವೃತ್ತ– ಶಾಂತ ವೇರಿ ಗೋಪಾಲಗೌಡ ವೃತ್ತ– ಮಲೆ ಮಹದೇಶ್ವರ ರಸ್ತೆ– ಡೈರಿ ಜಂಕ್ಷನ್– ಟೆರಿಷಿಯನ್ ಕಾಲೇಜು ಮೂಲಕ ಬನ್ನೂರು ಮತ್ತು ಮಳಮಳ್ಳಿ ರಸ್ತೆ ಕಡೆಗೆ ಸಾಗುವುದು.

ಹೆಚ್.ಡಿ.ಕೋಟೆ ರಸ್ತೆ ಮೂಲಕ ನಗರಕ್ಕೆ ಬಸ್‌ಗಳ ಮಾರ್ಗ

ಆಗಮನ: ಶ್ರೀರಾಂಪುರ ರಿಂಗ್ ರಸ್ತೆ ಜಂಕ್ಷನ್– ಮಾನಂದವಾಡಿ ರಸ್ತೆ– ಶ್ರೀನಿವಾಸ ವೃತ್ತ– ಜೆಎಲ್‌ಬಿ ರಸ್ತೆ– ಕಂಸಾಳೆ ಮಹದೇವಯ್ಯ ವೃತ್ತ– ಶ್ರೀ ಗಣಪತಿ ಸಚ್ಚಿದಾನಂದ ವೃತ್ತ (ಎಲೆ ತೋಟ) – ರಾಜಹಂಸ ಜಂಕ್ಷನ್– ಟ್ರಕ್ ಟರ್ಮಿನಲ್– ಸೋಮಸುಂದರಂ ವೃತ್ತ(ಎಂಆರ್‌ಸಿ)– ಮಹಾರಾಣ ಪ್ರತಾಪ ಸಿಂಹ ವೃತ್ತ– ಟ್ಯಾಂಕ್ ಬಂಡ್ ರಸ್ತೆ– ಸರ್ಕಸ್ ಮೈದಾನ ಜಂಕ್ಷನ್– ಲೋಕರಂಜನ್ ರಸ್ತೆ– ಎಸ್.ಲಿಂಗಣ್ಣ ವೃತ್ತ (ಚಿರಾಗ್)– ಜಯಚಾಮರಾಜೇಂದ್ರ ಒಡೆಯರ್ ವೃತ್ತ(ಹಾರ್ಡಿಂಜ್ ವೃತ್ತ)– ಬಿ.ಎನ್.ರಸ್ತೆ– ಸಬರ್ಬನ್ ಬಸ್ ನಿಲ್ದಾಣ

ನಿರ್ಗಮನ: ಸಬರ್ಬನ್ ಬಸ್ ನಿಲ್ದಾಣ– ಫೈವ್ ಲೈಟ್ ವೃತ್ತ– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಕಾಳಿಕಾಂಭ ದೇವಸ್ಥಾನದ ಜಂಕ್ಷನ್– ಹರಿಕೃಷ್ಣ ವೃತ್ತ (ಡಿಪಿಓ ವೃತ್ತ)– ಶಾಂತವೇರಿ ಗೋಪಾಲಗೌಡ ವೃತ್ತ (ನಜರ್‌ಬಾದ್)– ಟ್ಯಾಂಕ್ ಬಂಡ್ ರಸ್ತೆ– ಮಹಾರಾಣ ಪ್ರತಾಪ ಸಿಂಹ ವೃತ್ತ– ಮಹಾರಾಣ ಪ್ರತಾಪ ಸಿಂಹ ರಸ್ತೆ– ಸಿಎಆರ್ ಕೇಂದ್ರ ಸ್ಥಾನ 'ವೈ' ಜಂಕ್ಷನ್– ಚಾಮಪ್ಪಾಜಿ ರಸ್ತೆ(ರೇಸ್ ಕೋರ್ಸ್ ಹಿಂಭಾಗದ ರಸ್ತೆ)– ಟ್ರಕ್ ಟರ್ಮಿನಲ್ ರಸ್ತೆ ಜಂಕ್ಷನ್– ಸತ್ಯ ಹರಿಶ್ಚಂದ್ರ ರಸ್ತೆ– ಶ್ರೀ ಗಣಪತಿ ಸಚ್ಚಿದಾನಂದ ವೃತ್ತ(ಎಲೆ ತೋಟ)– ಎಡ ತಿರುವು– ನಂಜನಗೂಡು ರಸ್ತೆ– ಜೆ.ಪಿ.ನಗರ ಲಿಂಕ್ ರಸ್ತೆ– ಮಾನಂದವಾಡಿ ರಸ್ತೆ ಮೂಲಕ ಮುಂದೆ ಸಾಗುವುದು.

ಅ.15ರಿಂದ 24ರವರೆಗೆ ಮೈಸೂರಿನ ವಾಹನ ಏಕಮುಖ ಸಂಚಾರ, ನಿಲುಗಡೆ ನಿರ್ಬಂಧ



ಮೈಸೂರು, ಅ.13(ಎಸ್‌ಬಿಡಿ)– ದಸರಾ ಸಂದರ್ಭದಲ್ಲಿ ವಾಹನ ದಟ್ಟಣೆ ಹೆಚ್ಚಾಗುವ ಹಿನ್ನೆಲೆಯಲ್ಲಿ ಅ.15ರಿಂದ 24ರವರೆಗೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ವಾಹನಗಳ ಏಕಮುಖ ಸಂಚಾರ ಮತ್ತು ನಿಲುಗಡೆಗೆ ನಿರ್ಬಂಧ ವಿಧಿಸಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶಿಸಿದ್ದಾರೆ. ಪ್ರತಿ ದಿನ ರಿಂದ ರಾತ್ರಿ 11 ರವರೆಗೆ ಇದು ಅನ್ವಯವಾಗಲಿದೆ

ಏಕಮುಖ ಸಂಚಾರ ಮಾರ್ಗ

ಅರಮನೆಯ ಸುತ್ತ: ಅರಮನೆಯನ್ನು ಮಧ್ಯ ಬಿಂದುವನ್ನಾಗಿ ಪರಿಗಣಿಸಿ ಗಡಿಯಾರದ ಮುಳ್ಳು ಸುತ್ತುವ ದಿಕ್ಕಿಗೆ ವಿರುದ್ಧ ದಿಕ್ಕಿನಲ್ಲಿ(Anti-Clockwise) ವಾಹನ ಗಳು ಸಂಚರಿಸಲು ಅವಕಾಶ ನೀಡಲಾಗಿದೆ. ಅದರಂತೆ ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ(ಗನ್ ಹೌಸ್)–ಕುಸ್ತಿ ಅಖಾಡ ಜಂಕ್ಷನ್–ಬಿ.ಎನ್.ರಸ್ತೆ – ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)– ಆಲ್ಬರ್ಟ್ ವಿಕ್ಟರ್ ರಸ್ತೆ – ಚಾಮರಾಜ ಒಡೆಯರ್ ವೃತ್ತ– ಕೆಆರ್.ವೃತ್ತ– ನ್ಯೂ ಸಯ್ಯಾಜಿ ರಾವ್ ರಸ್ತೆ–ಕಾರ್ಪೊರೇಷನ್ ವೃತ್ತ–ಬಸವೇಶ್ವರ ವೃತ್ತ–ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ(ಗನ್ ಹೌಸ್– ಪುರಂದರ ರಸ್ತೆಯನ್ನು ಒಳಗೊಂಡಂತೆ) ಸಂಚರಿಸಬೇಕು.

ಕೆ.ಆರ್.ವೃತ್ತ– ನ್ಯೂ ಸಯ್ಯಾಜಿರಾವ್ ರಸ್ತೆ– ಬಾಟಾ ಜಂಕ್ಷನ್ – ಆಯುರ್ವೇದಿಕ್ ವೃತ್ತ – ಇರ್ವಿನ್ ರಸ್ತೆ – ನೆಹರು ವೃತ್ತ – ಅಶೋಕ ರಸ್ತೆ – ಮಹಾವೀರ ವೃತ್ತ (ದೊಡ್ಡ ಗಡಿ ಯಾರ)– ಚಾಮರಾಜ ಒಡೆಯರ್ ವೃತ್ತ – ಕೆ.ಆರ್.ವೃತ್ತ. **ಅಶೋಕ ರಸ್ತೆಯಲ್ಲಿ** ದಾವೂದ್‌ಖಾನ್ ರಸ್ತೆ ಜಂಕ್ಷನ್(ಗಾಂಧಿ ಮೆಡಿಕಲ್ಸ್) ನೆಹರು ಸರ್ಕಲ್‌ವರೆಗೆ ದಕ್ಷಿಣಕ್ಕೆ ಸಂಚಾರಕ್ಕೆ ಅವಕಾಶ ನೀಡಿರುತ್ತದೆ. **ಚಾಮರಾಜ ಜೋಡಿ ರಸ್ತೆ**ಯಿಂದ ಬನುಮಯ್ಯ ಚೌಕದವರೆಗೆ ಉತ್ತರಕ್ಕೆ ವಾಹನಗಳ ಸಂಚಾರ. **ತ್ಯಾಗರಾಜ ರಸ್ತೆ**ಯಲ್ಲಿ ಎನ್.ಮಾಧವರಾವ್ ವೃತ್ತ(ಅಗ್ರಹಾರ ವೃತ್ತ)ದಿಂದ ಉತ್ತರಕ್ಕೆ ಚಾಮರಾಜ ಜೋಡಿ ರಸ್ತೆಯವರೆಗೆ ಅವಕಾಶ.

ಲೋಕರಂಜನ್ ರಸ್ತೆಯಲ್ಲಿ ಸರ್ಕಸ್ ಮೈದಾನದ ಜಂಕ್ಷನ್‌ನಿಂದ ಪೂರ್ವದಿಂದ ಪಶ್ಚಿಮಕ್ಕೆ ಜಯಚಾಮರಾಜ ಒಡೆಯರ್ ವೃತ್ತದ (ಹಾರ್ಡಿಂಜ್ ವೃತ್ತ)ವರೆಗೆ ಸಂಚಾರಕ್ಕೆ ಅವಕಾಶ. **ಚಂದ್ರಗುಪ್ತ ರಸ್ತೆ**ಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ ಅಶೋಕ ರಸ್ತೆ ಜಂಕ್ಷನ್‌ವರೆಗೆ ಏಕಮುಖ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿ, ಅಶೋಕ ರಸ್ತೆಯಿಂದ ಬಿ.ಎನ್.ರಸ್ತೆ ಜಂಕ್ಷನ್‌ವರೆಗೆ ಸಂಚರಿಸಲು ಅವಕಾಶ. **ಮೃಗಾಲಯ ರಸ್ತೆ**ಯಲ್ಲಿ ಎಸ್.ಲಿಂಗಣ್ಣ ವೃತ್ತದಿಂದ (ಚಿರಾಗ್ ಜಂಕ್ಷನ್) ಎಫ್.ಕೆ.ಇರಾನಿ ವೃತ್ತದವರೆಗೆ (ಮಿರ್ಜಾ ವೃತ್ತ) ದಕ್ಷಿಣದಿಂದ ಉತ್ತರಕ್ಕೆ ಸಂಚಾರ ಅವಕಾಶ.

ಅ.23, 24 ಸಂಚಾರ ನಿರ್ಬಂಧ: ಹಳೆ ಬೆಂಗಳೂರು–ಮೈಸೂರು ರಸ್ತೆ ಮಾರ್ಗವಾಗಿ ಬರುವ ವಾಹನಗಳು ಲಿಂಕ್ ರಸ್ತೆ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತ – ರಾಜೇಂದ್ರನಗರ ಮುಖ್ಯ ರಸ್ತೆ– ಡಾ|| ರಾಜಕುಮಾರ್ ವೃತ್ತದವರೆಗೆ(ಫೌಂಟೆನ್ ವೃತ್ತ) ಸಂಚರಿಸಬಹುದು. ಡಾ|| ರಾಜಕುಮಾರ್ ವೃತ್ತದಿಂದ ಬೆಂಗಳೂರು ರಸ್ತೆ ಕಡೆಗೆ ಸಾಗುವ ವಾಹನಗಳಿಗೆ ಟಿಪ್ಪು ವೃತ್ತದ ಕಡೆಯಿಂದ ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್‌ವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಎಲ್.ಐ.ಸಿ ವೃತ್ತದಿಂದ ಲಿಂಕ್ ರಸ್ತೆಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ.

ಹುಣಸೂರು ರಸ್ತೆ ಮೂಲಕ ಮೈಸೂರು ನಗರಕ್ಕೆ

ಆಗಮನ: ಹುಣಸೂರು ರಸ್ತೆ– ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ (ಮೆಟ್ರೋಪೋಲ್ ವೃತ್ತ)– ದಾಸಪ್ಪ ವೃತ್ತ– ಬಾಬು ಜಗಜೀವನರಾಂ ವೃತ್ತ (ರೈಲ್ವೇ ನಿಲ್ದಾಣ ವೃತ್ತ) –ಪುಟ್ಟು ಗೋಪಾಲಕೃಷ್ಣ ಶೆಟ್ಟಿ ವೃತ್ತ (ಜೆ.ಕೆ.ಗ್ರೌಂಡ್)– ಶೇಷಾದ್ರಿ ಅಯ್ಯರ್ ರಸ್ತೆ– ಸುಭಾಷ್‌ಚಂದ್ರ ಬೋಸ್ ವೃತ್ತ(ಆರ್‌ಎಂಸಿ) ಅಬ್ದುಲ್ ಕಲಾಂ ಆಜಾದ್ ವೃತ್ತ (ಹೈವೇ ಸರ್ಕಲ್)– ನೆಲ್ಸನ್ ಮಂಡೇಲಾ ರಸ್ತೆ– ಟಿ.ಎನ್.ನರಸಿಂಹ ಮೂರ್ತಿ ವೃತ್ತ(ಎಲ್‌ಐಸಿ ವೃತ್ತ)– ಟಿಪ್ಪು ವೃತ್ತ– ಡಾ.ರಾಜಕುಮಾರ್ ವೃತ್ತ (ಫೌಂಟೆನ್ ವೃತ್ತ)– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ನವಾಬ್ ಹೈದರಾಲಿ ಖಾನ್ ವೃತ್ತ(ಫೈವ್ ಲೈಟ್ ವೃತ್ತ) – ಬಿ.ಎನ್.ರಸ್ತೆ– ಸಬರ್ಬನ್ ಬಸ್ ನಿಲ್ದಾಣ.

ನಿರ್ಗಮನ: ಸಬರ್ಬನ್ ಬಸ್ ನಿಲ್ದಾಣ – ಫೈವ್ ಲೈಟ್ ಸರ್ಕಲ್– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಎಫ್.ಟಿ.ಎಸ್– ಫೌಂಟೆನ್ ಸರ್ಕಲ್– ಎಲ್.ಐ.ಸಿ ವೃತ್ತ– ನೆಲ್ಸನ್ ಮಂಡೇಲಾ ರಸ್ತೆ– ಹೈವೇ ಸರ್ಕಲ್– ಆರ್‌ಎಂಸಿ– ಶೇಷಾದ್ರಿ ಅಯ್ಯರ್ ರಸ್ತೆ– ಜೆ.ಕೆ.ಗ್ರೌಂಡ್– ರೈಲ್ವೇ ನಿಲ್ದಾಣ ವೃತ್ತ– ದಾಸಪ್ಪ ವೃತ್ತ– ಮೆಟ್ರೋಪೋಲ್ ವೃತ್ತ– ಹುಣಸೂರು ರಸ್ತೆ ಮೂಲಕ ಮುಂದೆ ಸಾಗುವುದು.

ನಗರ ಸಾರಿಗೆ ಬಸ್‌ಗಳು ಸಂಚರಿಸುವ ಮಾರ್ಗ

ರಾಮಸ್ವಾಮಿ ವೃತ್ತದ ಕಡೆಯಿಂದ ಎಂ.ಎನ್. ಜೋಯಿಸ್ ವೃತ್ತ(ಮುಡಾ) –ರಮಾವಿಲಾಸ ರಸ್ತೆ– ಬನುಮಯ್ಯ ಕಾಲೇಜು ಹತ್ತಿರ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಬಿ.ರಾಚಯ್ಯ ವೃತ್ತ (ಕಾರ್ಪೊರೇಷನ್)– ಬಸವೇಶ್ವರ ವೃತ್ತ– ಎನ್. ಮಾಧವರಾವ್ ವೃತ್ತ(ಅಗ್ರಹಾರ ವೃತ್ತ)– ಎಂ.ಜಿ ರಸ್ತೆಯಲ್ಲಿ ಮುಂದು ವರೆಯುವುದು. **ಸಿದ್ದಪ್ಪ ಸ್ಕ್ವೇರ್ ಕಡೆಯಿಂದ** ಆರ್‌ಟಿಓ ವೃತ್ತ– ರಾಮಸ್ವಾಮಿ ವೃತ್ತ– ಮುಡಾ –ರಮಾವಿಲಾಸ ರಸ್ತೆ– ಬನುಮಯ್ಯ ಕಾಲೇಜು ಹತ್ತಿರ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಕಾರ್ಪೊರೇಷನ್– ಬಸವೇಶ್ವರ ವೃತ್ತ– ಅಗ್ರಹಾರ ವೃತ್ತ– ಎಂ.ಜಿ ರಸ್ತೆಯಲ್ಲಿ ಮುಂದು ವರೆಯುವುದು. **ನಂಜನಗೂಡು ರಸ್ತೆ ಮಾರ್ಗದಿಂದ** ಜೆ.ಪಿ.ನಗರ ಲಿಂಕ್ ರಸ್ತೆ– ಮಾನಂದವಾಡಿ ರಸ್ತೆ– ಶ್ರೀನಿವಾಸ ವೃತ್ತ– ವೇದಾಂತ ಹೆಮ್ಮಿಗೆ ವೃತ್ತ– ಆರ್.ಟಿ.ಓ ವೃತ್ತ– ರಾಮಸ್ವಾಮಿ ವೃತ್ತ–ಮುಡಾ–ರಮಾವಿಲಾಸ ರಸ್ತೆ– ಬನುಮಯ್ಯ ಕಾಲೇಜು ಹತ್ತಿರ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಕಾರ್ಪೊರೇಷನ್– ಬಸವೇಶ್ವರ ವೃತ್ತ– ಅಗ್ರಹಾರ ವೃತ್ತ– ಸಿದ್ದಪ್ಪ ಚೌಕ ಮೂಲಕ ಮುಂದುವರೆ ಯುವುದು. **ಕೆಆರ್‌ಎಸ್ ರಸ್ತೆ ಕಡೆಯಿಂದ** ಆಕಾಶವಾಣಿ ವೃತ್ತ– ದಾಸಪ್ಪ ವೃತ್ತ– ರೈಲ್ವೇ ನಿಲ್ದಾಣ– ಜೆ.ಕೆ.ಗ್ರೌಂಡ್– ಆಯುರ್ವೇದಿಕ್ ವೃತ್ತ– ಇರ್ವಿನ್ ರಸ್ತೆ– ನೆಹರು ವೃತ್ತ– ಅಶೋಕ ರಸ್ತೆ– ದೊಡ್ಡ ಗಡಿಯಾರ– ಗಾಂಧಿ ವೃತ್ತದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು– ಓಲ್ಡ್ ಬ್ಯಾಂಕ್ ರಸ್ತೆ– ಸಯ್ಯಾಜಿ ರಾವ್ ರಸ್ತೆ ಜಂಕ್ಷನ್– ಆಯುರ್ವೇದಿಕ್ ವೃತ್ತ– ಎಡ ತಿರವು ಪಡೆದು ಮುಂದೆ ಸಾಗುವುದು. **ಫೈವ್ ಲೈಟ್ ಸರ್ಕಲ್ ಕಡೆಯಿಂದ** ಸರ್ಕಾರಿ ಭವನ ಉತ್ತರ ದ್ವಾರ ಜಂಕ್ಷನ್– ಫೈವ್ ಲೈಟ್– ದಾವೂದ್ ಖಾನ್ ರಸ್ತೆ– ಅಶೋಕ ರಸ್ತೆ– ನೆಹರು ವೃತ್ತ– ಅಶೋಕ ರಸ್ತೆ– ದೊಡ್ಡ ಗಡಿಯಾರ– ಗಾಂಧಿ ವೃತ್ತದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ದೊಡ್ಡ ಗಡಿಯಾರ– ಚಂದ್ರಗುಪ್ತ ರಸ್ತೆ– ಬಿ.ಎನ್.ರಸ್ತೆ– ಸಬರ್ಬನ್ ಬಸ್ ನಿಲ್ದಾಣ– ಫೈವ್ ಲೈಟ್ ಕಡೆಯಿಂದ ಮುಂದುವರೆಯುವುದು. **ಲೋಕರಂಜನ್ ರಸ್ತೆ ಕಡೆಯಿಂದ** ಲೋಕರಂಜನ್ ರಸ್ತೆ– ಎಸ್.ಲಿಂಗಣ್ಣ ವೃತ್ತ – ಲೋಕರಂಜನ್ ರಸ್ತೆ ಅಂತ್ಯದಲ್ಲಿ (ಹಾರ್ಡಿಂಜ್ ವೃತ್ತದ ಬಳಿ) ಬಲಕ್ಕೆ ತಿರುಗಿ(Free Right Turn) ಮಿರ್ಜಾ ರಸ್ತೆಯ ಬಸ್ ಸ್ಟಾಪ್‌ನಲ್ಲಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಎಫ್.ಕೆ.ಇರಾನಿ ವೃತ್ತ– ವಸಂತಮಹಲ್ ಜಂಕ್ಷನ್ ಮೂಲಕ ಮುಂದೆ ಸಾಗುವುದು (ಹಾರ್ಡಿಂಜ್ ವೃತ್ತದ ಕಡೆ ಬರುವಂತಿಲ್ಲ). **ಎಂ.ಎಂ. ರಸ್ತೆಕಡೆಯಿಂದ** ಡೈರಿ ಸರ್ಕಲ್– ವಾಯುವಿಹಾರ ಮಾರ್ಗ– ಸಂಗೊಳ್ಳಿ ರಾಯಣ್ಣ ವೃತ್ತ– ಬುಲೆವರ್ಡ್ ವೃತ್ತ– ಟ್ಯಾಂಕ್ ಬಂಡ್ ರಸ್ತೆ– ಸರ್ಕಸ್ ಗ್ರೌಂಡ್ ಜಂಕ್ಷನ್– ಲೋಕ ರಂಜನ್ ರಸ್ತೆ– ಎಸ್.ಲಿಂಗಣ್ಣ ವೃತ್ತ(ಚಿರಾಗ್)– ಲೋಕರಂಜನ್ ರಸ್ತೆ ಅಂತ್ಯದಲ್ಲಿ ಹಾರ್ಡಿಂಜ್ ವೃತ್ತದ ಬಳಿ ಬಲಕ್ಕೆ ತಿರುಗಿ ಮಿರ್ಜಾ ರಸ್ತೆಯ ಬಸ್ ಸ್ಟಾಪ್‌ನಲ್ಲಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಎಫ್.ಕೆ.ಇರಾನಿ ವೃತ್ತ– ವಸಂತ ಮಹಲ್ ಜಂಕ್ಷನ್ ಮೂಲಕ ಮುಂದೆ ಸಾಗುವುದು.

ನಂಜನಗೂಡು ರಸ್ತೆ ಮೂಲಕ ನಗರಕ್ಕೆ ಬಸ್‌ಗಳ ಮಾರ್ಗ

ಆಗಮನ: ನಂಜನಗೂಡು ರಿಂಗ್ ರಸ್ತೆ ಜಂಕ್ಷನ್– ಶ್ರೀ ಗಣಪತಿ ಸಚ್ಚಿದಾನಂದ ವೃತ್ತ (ಎಲೆ ತೋಟ)– ರಾಜಹಂಸ ಜಂಕ್ಷನ್– ಟ್ರಕ್ ಟರ್ಮಿನಲ್– ಸೋಮಸುಂದರಂ ವೃತ್ತ (ಎಂಆರ್‌ಸಿ)– ಮಹಾರಾಣ ಪ್ರತಾಪ ಸಿಂಹ ವೃತ್ತ– ಟ್ಯಾಂಕ್ ಬಂಡ್ ರಸ್ತೆ– ಸರ್ಕಸ್ ಮೈದಾನ ಜಂಕ್ಷನ್– ಲೋಕರಂಜನ್ ರಸ್ತೆ– ಎಸ್. ಲಿಂಗಣ್ಣ ವೃತ್ತ (ಚಿರಾಗ್)– ಜಯಚಾಮರಾಜೇಂದ್ರ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)– ಬಿ.ಎನ್.ರಸ್ತೆ– ಸಬರ್ಬನ್ ಬಸ್ ನಿಲ್ದಾಣ.

ನಿರ್ಗಮನ: ಸಬರ್ಬನ್ ಬಸ್ ನಿಲ್ದಾಣ– ಫೈವ್ ಲೈಟ್ ವೃತ್ತ– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಕಾಳಿಕಾಂಭ ದೇವಸ್ಥಾನದ ಜಂಕ್ಷನ್– ಡಿಪಿಓ ವೃತ್ತ– ಶಾಂತವೇರಿ ಗೋಪಾಲಗೌಡ ವೃತ್ತ– ಟ್ಯಾಂಕ್ ಬಂಡ್ ರಸ್ತೆ– ಮಹಾರಾಣ ಪ್ರತಾಪ ಸಿಂಹ ವೃತ್ತ– ಮಹಾರಾಣ ಪ್ರತಾಪ ಸಿಂಹ ರಸ್ತೆ– ಸಿ.ಎ.ಆರ್ ಕೇಂದ್ರ ಸ್ಥಾನ 'ವೈ' ಜಂಕ್ಷನ್– ರೇಸ್ ಕೋರ್ಸ್ ಹಿಂಭಾಗದ ರಸ್ತೆ– ಟ್ರಕ್ ಟರ್ಮಿನಲ್ ರಸ್ತೆ ಜಂಕ್ಷನ್– ಸತ್ಯ ಹರಿಶ್ಚಂದ್ರ ರಸ್ತೆ– ಶ್ರೀ ಗಣಪತಿ ಸಚ್ಚಿದಾನಂದ ವೃತ್ತ – ನಂಜನಗೂಡು ರಸ್ತೆ ಮೂಲಕ ಮುಂದೆ ಸಾಗುವುದು.

ನೈಪುಣ್ಯದಲ್ಲಿ ದಸರಾ ಗೊಂಬೆ ವೈಭವ

ಸಾಂಪ್ರದಾಯಿಕ ಹಬ್ಬಗಳು ಸಂಬಂಧ ಬೆಸೆಯುವ ಕೊಂಡಿಗಳು: ಡಾ.ತುಳಸಿರಾಮಚಂದ್ರ




ಮೈಸೂರು, ಅ. 13– ಭಾರತೀಯ ಸಂಸ್ಕೃತಿಯಲ್ಲಿ ಆಚರಿಸಲ್ಪಡುವ ಪ್ರತಿ ಹಬ್ಬವೂ ಮಾನವೀಯ ಸಂಬಂಧಗಳನ್ನು ಬೆಸೆಯುವ ಕೊಂಡಿಗಳಾಗಿವೆ. ಈ ನಿಟ್ಟಿನಲ್ಲಿ ವಿಶಿಷ್ಟತೆ ಹಾಗೂ ಸಂಸ್ಕೃತಿಯನ್ನು ಬಹುದೊಡ್ಡ ಪ್ರಮಾಣದಲ್ಲಿ ಪಸರಿಸುವ ನಾಡಹಬ್ಬ ದಸರಾ, ಐತಿಹಾಸಿಕ ಹಿರಿಮೆಯನ್ನು ಹೊಂದಿದೆ ಎಂದು ಖ್ಯಾತ ನೃತ್ಯ ಕಲಾವಿದೆ ಡಾ|| ತುಳಸಿ ರಾಮಚಂದ್ರ ಅಭಿಪ್ರಾಯಿಸಿದರು. ಅವರು ಇಂದು ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಆಯೋಜಿಸಲಾಗಿದ್ದ ದಸರಾ ಬೊಂಬೆ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು. ನಾಡ ಅಧಿದೇವತೆ ಚಾಮುಂಡೇಶ್ವರಿಯನ್ನು ಪೂಜಿಸುವ ಮೂಲಕ ಆರಂಭಿಸಲಾಗುವ ನವರಾತ್ರಿಯ ಪ್ರತಿಯೊಂದು ದಿನವೂ ಮಹತ್ವದ ಸಂದೇಶ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಈ ಸಂದರ್ಭದಲ್ಲಿ ಬೊಂಬೆ ಸಂಗ್ರಹಿಸಿ ಇಡಲಾಗುವ ಪದ್ಧತಿ ಮೈಸೂರು ಭಾಗದ ಕುಟುಂಬ ವ್ಯವಸ್ಥೆಯಲ್ಲಿ ನಿರಂತರ ಸಹಬಾಳ್ವೆಯ ಹಾಗೂ ಚಾರಿತ್ರಿಕ ಹಿರಿಮೆ ಸಾರುವ ಒಂದು ಪದ್ಧತಿಯಾಗಿ ಬೆಳೆದು ಬಂದಿದೆ ಎಂದು ಹೇಳಿದರು.

ಕೂಡು ಕುಟುಂಬದ ಮಹತ್ವ ಮತ್ತು ಕುಟುಂಬಗಳು ಪರಸ್ಪರ ಬೆರೆಯುವ ಸಂದರ್ಭವನ್ನು ದಸರಾ ಬೊಂಬೆ ಹಬ್ಬ ಪ್ರತಿನಿಧಿಸುತ್ತದೆ. ಕಳೆದು ಹೋಗುತ್ತಿರುವ ಪರಂಪರೆಯನ್ನು ಉಳಿಸಲು ನಾಡಹಬ್ಬ ದಸರೆ ಸಂದರ್ಭದಲ್ಲಿ ಶಾಲೆಗಳಲ್ಲಿಯೇ ಗೊಂಬೆ ಕೂರಿಸುವ ಪದ್ಧತಿ ಮಕ್ಕಳಲ್ಲಿ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಯನ್ನು ತಿಳಿಸಿಕೊಡುವ ಮೂಲಕ ನಮ್ಮ ದೇಶೀಯ ಶಿಕ್ಷಣಕ್ಕೆ ಒತ್ತು ನೀಡುವ ಕಾರ್ಯಕ್ರಮವಾಗಿದೆ ಎಂದು ಹೇಳಿ, ಈ ನಿಟ್ಟಿನಲ್ಲಿ ನೈಪುಣ್ಯ ಶಾಲೆಯು ಆರಂಭಿಸಿರುವ ಗೊಂಬೆ ಕೂರಿಸುವ ಪದ್ಧತಿಯು ನಿಜಕ್ಕೂ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನ ಚಿಣ್ಣರ ವಿಭಾಗದ ಮಕ್ಕಳು, ಪೋಷಕರು ಹಾಗೂ ಶಿಕ್ಷಕರು ಜೊತೆಗೂಡಿ ದಸರಾ ಗೊಂಬೆ ಹಬ್ಬವನ್ನು ಆಚರಿಸಿ ಸಂಭ್ರಮಿಸಿದರು. ವಿವಿಧ ನಮೂನೆಗಳ ಹಲವು ಸಂದೇಶಗಳ ಪ್ರತಿನಿಧಿಸುವ ಗೊಂಬೆಗಳು ಸೇರಿದಂತೆ ರಾಮಾಯಣ, ಮಹಾಭಾರತ ಮತ್ತು ಮೈಸೂರು ರಾಜಮನೆತನದ ಪರಂಪರೆಯನ್ನು ಪ್ರತಿನಿಧಿಸುವ ಗೊಂಬೆಗಳನ್ನು ಸಂಗ್ರಹಿಸಿ ಪ್ರದರ್ಶನಕ್ಕಿಡಲಾಗಿತ್ತು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲೆ ಶೋಭಿತಾ ಎಸ್.ಆರಾಧ್ಯ ಇದ್ದರು.

ಗುತ್ತಿಗೆದಾರನ ಮನೆಯಲ್ಲಿ ಸಿಕ್ಕ 42 ಕೋಟಿ ಕಂತೆ ಕಂತೆ ಹಣ

ಬೆಂಗಳೂರು ನಗರ ಅಭಿವೃದ್ಧಿ ಇಲಾಖೆಯ 'ಕೈ' ಕರಾಮತ್ತು!



ಬೆಂಗಳೂರು, ಅ.13(ಕೆಎಂಶಿ)– ಗುತ್ತಿಗೆದಾರನ ಮನೆಯಲ್ಲಿ ಸಿಕ್ಕಿರುವ 42 ಕೋಟಿ ರೂಪಾಯಿ ಕಂತೆ ಕಂತೆ ಹಣದ ಮೂಲವನ್ನು ಪ್ರಶ್ನೆ ಮಾಡಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಇದು 'ಬೆಂಗಳೂರು ನಗದು ಅಭಿವೃದ್ಧಿ ಇಲಾಖೆ'ಯ ಕೈ ಕರಾಮತ್ತು ಎಂದು ಕಾಂಗ್ರೆಸ್ ಪಕ್ಷಕ್ಕೆ ಕಾಲೆಳೆದಿದ್ದಾರೆ.

ಈ ಬಗ್ಗೆ ಖಾರವಾದ ಪ್ರತಿಕ್ರಿಯೆ ನೀಡಿರುವ ಅವರು; ಪಂಚರಾಜ್ಯ ಚುನಾವಣೆ ಘೋಷಣೆ ಆಗಿದ್ದೇ ತಡ, ರಾಜ್ಯದಲ್ಲಿ ಕುರುಡು ಕಾಂಚಾಣ ಕಂತೆ ಕಂತೆಯಾಗಿ ಕಾಟನ್ ಬಾಕ್ಸ್‌ಗಳಲ್ಲಿ ಕುಣಿಯುತ್ತಿದೆ. ಅದೂ ಮಂಚದ ಕೆಳಗೆ ಐಟಿ ದಾಳಿ ವೇಳೆ ಗುತ್ತಿಗೆದಾರನ ಮನೆಯಲ್ಲಿ ಪತ್ತೆಯಾದ ಹಣ ಯಾರದ್ದು? ಯಾರ ಹೆಣದ ಮೇಲೆ ಸಂಗ್ರಹಿಸಿದ ಪಾಪದ ಹಣವಿದು? ಈ ಪ್ರಶ್ನೆಗಳಿಗೆ ಉತ್ತರ ಬೇಕಿದೆ ಎಂದು ಹೇಳಿದ್ದಾರೆ. ಆಯ್ದು ಗುತ್ತಿಗೆದಾರರಿಗೆ ಬಿಬಿಎಂಪಿಯಿಂದ 650 ಕೋಟಿ ರೂ. ಬಿಡುಗಡೆಯಾದ ಬೆನ್ನಲ್ಲೇ ಈ 42 ಕೋಟಿ ರೂ. ಐಟಿ ಅಧಿಕಾರಿಗಳಿಗೆ ಸಿಕ್ಕಿಬೀಳುತ್ತದೆ. ಅಲ್ಲಿಗೆ ಕಲೆಕ್ಷನ್ ನಿಜ ಎಂದಾಯಿತು. ಅದು ಎಷ್ಟು ಪರ್ಸಂಟೇಜ್? ಅದರ ಹಿಂದೆ ಅಡಗಿ ಕೂತಿರುವ ಆದಿಪುರುಷರು ಯಾರು? ಎಂದು ಅವರು ಪ್ರಶ್ನಿಸಿದ್ದಾರೆ. 23 ಬಾಕ್ಸ್ ಗಳಲ್ಲಿ ತುಂಬಿಡಲಾಗಿದ್ದ ಈ ಇಡಗಂಟು ಪಕ್ಕದ ತೆಲಂಗಾಣಕ್ಕೆ ಹೊರಟು ನಿಂತಿತ್ತು ಎನ್ನುವುದು ಮಾಹಿತಿ. ಅಲ್ಲಿಗೆ ಚುನಾವಣೆಗಾಗಿ ಈ ಹಣವನ್ನು ಸಂಗ್ರಹ ಮಾಡಲಾಗಿತ್ತು ಎನ್ನುವುದು ಸತ್ಯ. ಈ ಕನಕ ಮಹಾ ಲಕ್ಷ್ಮಿಯ ಕಲೆಕ್ಷನ್‌ಗೆ 'ಬೆಂಗಳೂರು ನಗದು ಅಭಿವೃದ್ಧಿ ಇಲಾಖೆಯ ಕೈ ಕರಾಮತ್ತು ಅಂತ ಇನ್ನೊಂದು ಮಾಹಿತಿ. ಅಷ್ಟರಲ್ಲಿ ಐಟಿ ಇಲಾಖೆ ಮುಗಿಬಿದ್ದ ಪರಿಣಾಮ, ಗುಟ್ಟು ರಟ್ಟಾಗಿದೆ

ಬಸವಣ್ಣ ಭಾವಚಿತ್ರ ವಿರೂಪಗೊಳಿಸಿರುವ ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ

ನಂಜನಗೂಡಿನಲ್ಲಿ ಪ್ರತಿಭಟನೆ



ನಂಜನಗೂಡು, ಅ.13–ಕಲ್ಬುರ್ಗಿಯಲ್ಲಿ ಜಗಜ್ಯೋತಿ ಬಸವಣ್ಣ ಅವರ ಭಾವಚಿತ್ರವನ್ನು ವಿರೂಪಗೊಳಿಸಿರುವ ಕಿಡಿಗೇಡಿಗಳನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಮಿನಿವಿಧಾನಸೌಧ ಮುಂದೆ ಜಮಾವಣೆಗೊಂಡ ಪ್ರತಿಭಟನಾಕಾರರು, ಕಿಡಿಗೇಡಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತಮ್ಮ ಜಾತ್ಯತೀತ ಹಾಗೂ ಕ್ರಾಂತಿಕಾರಿಕ ನಿಲುವುಗಳ ಮೂಲಕ ವಿಶ್ವಮಾನ್ಯತೆ ಪಡೆದಿರುವ ಬಸವಣ್ಣನವರ ಭಾವಚಿತ್ರಕ್ಕೆ ಸಿಗರೇಟಿನಿಂದ ಸುಟ್ಟು ವಿರೂಪಗೊಳಿಸಲಾಗಿದೆ. ಇದರಿಂದ ಬಸವಣ್ಣನವರ ಅನುಯಾಯಿಗಳನ್ನು ಕೆರಳುವಂತೆ ಮಾಡಿದ್ದಾರೆ. ಸಮಸಮಾಜ ನಿರ್ಮಾಣ ಆಗಬೇಕೆಂದು ಕನಸು ಕಂಡಿದ್ದ ಮಹಾಮಾನವತಾವಾದಿಗೆ ಈ ರೀತಿ ಅಪಚಾರ ಎಸಗಿರುವುದು ಇಡೀ ನಾಗರಿಕ ಸಮಾಜ ತಲೆತಗ್ಗಿಸುವ ವಿಚಾರವಾಗಿದೆ. ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥ ಕಿಡಿಗೇಡಿಗಳನ್ನು ಕೂಡಲೇ ಪತ್ತೆಹಚ್ಚಿ ಬಂಧಿಸಬೇಕು ಎಂದು ಒತ್ತಾಯಿಸಿದರು.

ಕಿಡಿಗೇಡಿಗಳನ್ನು ಕಾನೂನಿನಡಿ ಶಿಕ್ಷೆಗೆ ಗುರಿಪಡಿಸಬೇಕು. ಇಲ್ಲವಾದಲ್ಲಿ ಅಖಿತ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ಬಸವ ಬಳಗ ಒಕ್ಕೂಟ ಸೇರಿದಂತೆ ವಿವಿಧ ಸಂಘಟನೆಗಳು ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ನಂತರ ತಾಲೂಕು ಕಚೇರಿಯ ಶಿರಸ್ತೇದಾರ್ ಶ್ರೀನಾಥ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಕಾರ್ಯದರ್ಶಿ ಮಂಜುನಾಥ್, ಖಜಾಂಚಿ ಮಾಧು, ಜಿಪಂ ಮಾಜಿ ಸದಸ್ಯ ಎಸ್.ಎಂ. ಕೆಂಪಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಪಿ. ಮಹೇಶ್, ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ. ಬಸವಣ್ಣ, ನಂದಿನಿ, ಕೋಮಲಾ, ಮಹೇಶ್, ಮಂಜುಳಾ ಮಧು, ದುಗ್ಗಳ್ಳಿ ಶಿವನಾಗಪ್ಪ, ದೇಬೂರು ಅಶೋಕ್, ಶಿವಲಿಂಗಪ್ಪ, ಮಂಜುಳಾ ರಾಜೇಶ್, ಗುರುಸಿದ್ದಪ್ಪ ಸೋಮೇಶ್, ತರಗನಹಳ್ಳಿ ನಂಜುಂಡಸ್ವಾಮಿ, ಶಿವಕುಮಾರ್, ಮುಳ್ಳೂರು ಶೇಖರ್, ನಗರಸಭಾ ಮಾಜಿ ಅಧ್ಯಕ್ಷ ಎಚ್.ಎಸ್. ಮಹದೇವಸ್ವಾಮಿ, ಅನಸೂಯ ಗಣೇಶ್, ಮುದ್ದಹಳ್ಳಿ ಪ್ರಕಾಶ್, ಸತೀಶ್, ಬಸವಣ್ಣ, ಆಲತ್ತೂರು ನಂಜುಂಡಸ್ವಾಮಿ, ಮಂಜುಳಾ, ಚಿಕ್ಕಮಾದಪ್ಪ, ತ್ರಿನೇಶ್, ಶಿವಬುದ್ಧಿ, ನಾಗೇಂದ್ರ, ಬಸವಟ್ಟಿಗೆ ನಂಜಪ್ಪ, ಬಸವಣ್ಣ, ಶಂಕರ, ಮಾಧು, ಶಿವಕುಮಾರ್, ನಂಜುಂಡಸ್ವಾಮಿ, ಉಮಾ ಮಹೇಶ್, ಅನುಸೂಯ, ಬಸವರಾಜಪ್ಪ ಇತರರಿದ್ದರು.

ಮರಯ್ಯನ ಕೆರೆ ತುಂಬಿಸಲು ಗ್ರಾಮಸ್ಥರ ಒತ್ತಾಯ



ಬನ್ನೂರು: ಸಮೀಪದ ಯಾಚೇನಹಳ್ಳಿ, ಹುಣಸಗಹಳ್ಳಿ, ತುರಗನೂರು, ನೆರಳೆಕೆರೆ ಗ್ರಾಮದ ಮರಯ್ಯನ ಕೆರೆಗೆ ನೀರು ತುಂಬಿಸುವಂತೆ ಆಗ್ರಹಿಸಿ ಗ್ರಾಮಸ್ಥರು ರಾಜ್ಯ ರೈತ ಸಂಘ(ಮೂಲ ಸಂಘಟನೆ) ನೇತೃತ್ವದಲ್ಲಿ ಕೆರೆಯಂಗಳದಲ್ಲಿ ಪ್ರತಿಭಟನೆ ನಡೆಸಿದರು.

ಮರಯ್ಯನ ಕೆರೆ ಸುತ್ತಮುತ್ತಲಿನ ಗ್ರಾಮಗಳಿಗೆ ಜೀವಾಧಾರವಾಗಿದೆ. ಟಿಪ್ಪು ಯುದ್ಧಕ್ಕೆ ಹೋಗುವ ಮುನ್ನ ಈ ಭಾಗದಲ್ಲಿ ವಿಶ್ರಾಂತಿ ಪಡೆದು ಹೋಗುತ್ತಿದ್ದ ವಿಶ್ರಾಂತಿಮಂಟಪ ಇನ್ನೂ ಇದೆ. ಇಂತಹ ಐತಿಹಾಸಿಕ ಕೆರೆ ಇತ್ತೀಚಿನ ದಿನಗಳಲ್ಲಿ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಗುರಿಯಾಗಿ ನೀರು ಕಾಣದಂತಾಗಿದೆ. ಆದ್ದರಿಂದ ಕೂಡಲೇ ಅಧಿಕಾರಿಗಳು ಎಚ್ಚೆತ್ತು ನೀರು ತುಂಬಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕೆರೆಗೆ ನೀರು ತುಂಬಿಸುವುದರಿಂದ ಕೇವಲ ರೈತರಿಗೆ ಮಾತ್ರ ಅನುಕೂಲವಾಗುವುದಿಲ್ಲ. ಹೈನುಗಾರಿಕೆ, ಮೀನುಗಾರಿಕೆ, ಜಾನುವಾರುಗಳಿಗೂ ಆಶ್ರಯವಾಗಿದೆ. ಹಿಂದಿನ ಸರ್ಕಾರದಿಂದಲೂ ಗ್ರಾಮಸ್ಥರು ಶಾಸಕರನ್ನು ಭೇಟಿ ಮಾಡುತ್ತಿದ್ದಾರೆ ವಿನಾಹಃ ಇನ್ನೂ ಕೆರೆಗೆ ನೀರು ಬಿಡುವ ಕೆಲಸವನ್ನು ಮಾಡುತ್ತಿಲ್ಲ ಎಂದು ದೂರಿದರು.

ರೈತರ ಕಷ್ಟವನ್ನು ಕೇಳಲು ಸಂಬಂಧಪಟ್ಟವರು ಸ್ಥಳಕ್ಕೆ ಬರಬೇಕೆಂದು ಪಟ್ಟುಹಿಡಿದು ಅಧಿಕಾರಿಗಳು ಹಾಗೂ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ನಂತರ ಸ್ಥಳಕ್ಕೆ ಆಗಮಿಸಿದ ಸಣ್ಣ ನೀರವಾರಿ ಇಲಾಖೆಯ ಎಇಇ ತಮ್ಮಯ್ಯ ಪ್ರತಭಟನಾಕಾರರ ಸಮಸ್ಯೆ ಆಲಿಸಿ ಮಾತನಾಡಿ, ಮರಯ್ಯನ ಕೆರೆಗೆ ನೀರು ತುಂಬಿಸಲು ಮೇಲಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ನಂತರ ಗ್ರಾಮಸ್ಥರು ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಯಾಚೇನಹಳ್ಳಿ ಗ್ರಾಪಂ ಸದಸ್ಯ ವೈ.ಎಸ್.ರಾಮಸ್ವಾಮಿ, ರೈತ ಸಂಘದ ಜಿಲ್ಲಾಧ್ಯಕ್ಷ ನಾರಾಯಣ್, ಮೈಮುಲ್ ಮಾಜಿ ಅಧ್ಯಕ್ಷ ನಾಗೇಶ್, ನೆರಳೆಕೆರೆ ನಾಗರಾಜು, ಹನುಮಂತು, ರಮೇಶ, ತುರಗನೂರು ಕೃಷ್ಣ, ಮೇಗಲಕೊಪ್ಪಲಿನ ರಂಗಸ್ವಾಮಿ, ಗಾಡಿಜೋಗಿಹುಂಡಿ ಜಯರಾಂ, ನಾಗಪ್ಪ, ಕೃಷ್ಣಪ್ಪ, ಮಹದೇವು, ಸೀಹಳ್ಳಿ ರವಿ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ರಾಜಮಾರ್ತಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಚಂದ್ರಮುಖಿ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ತಂತಿರಾಂ ಚಾಪ್ಟರ್–1 (ತೆ)	4 ಪ್ರದರ್ಶನಗಳು
ಸಂಗಂ	
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕಂದ (ತೆ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಎಗ್ಸಾರ್‌ಸಿಸ್ಟ್ ಬಿಲೀವರ್ (ಇಂ): ಬೆ.10.50ಕ್ಕೆ, ರಾ.10ಕ್ಕೆ, **800 (ತ)**: ಮ.1.15ಕ್ಕೆ, **ಅಭಿರಾಮಚಂದ್ರ (ಕ)**: ಸಂ.4.25ಕ್ಕೆ, **ದಿ ವ್ಯಾಕ್ಸಿನ್ ವಾರ್ (ಹಿಂ)**: ಸಂ.6.50ಕ್ಕೆ.
ಸ್ಕ್ರೀನ್ 2	**ಕನ್ನೂರ ಸ್ಕ್ವಾಡ್ (ಮ)**: ಬೆ.10.40ಕ್ಕೆ, **ರಥಂ (ತ)**: ಮ.1.45ಕ್ಕೆ, **ರೂಲ್ಸ್ ರಂಜನ್ (ತೆ)**: ಸಂ.4.10ಕ್ಕೆ, **ಮಿಷನ್ ರಾಣಿಗಂಜ್ (ಹಿಂ)**: ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	**ರಾಜಮಾರ್ತಾಂಡ (ಕ)**: ಬೆ.10.55ಕ್ಕೆ, **ತೋತಾಪುರಿ 2 (ಕ)**: ಮ.1.35ಕ್ಕೆ, **ಜವಾನ್ (ಹಿಂ)**: ಸಂ.4.05ಕ್ಕೆ, **ಥ್ಯಾಂಕ್ಯೂ ಫಾರ್ ಕಮಿಂಗ್ (ಹಿಂ)**: ರಾ.7.25ಕ್ಕೆ, **ಚಾವರ್ (ಮ)**: ರಾ.10ಕ್ಕೆ.
ಸ್ಕ್ರೀನ್ 4	**ಫೈಟರ್ (ಕ)**: ಬೆ.10.40ಕ್ಕೆ, **ಬಾನ ದಾರಿಯಲ್ಲಿ (ಕ)**: ಮ.1.10ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಮ್ಯಾಡ್ 2023 (ತೆ)**: ಸಂ.4.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಬಾನ ದಾರಿಯಲ್ಲಿ (ಕ)**: ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45, ರಾ.9ಕ್ಕೆ.
ಸ್ಕ್ರೀನ್ 2	**ಪಾವ್ ಪಟ್ರೋಲ್ (ಇಂ)**: ಬೆ.10.50ಕ್ಕೆ, **ಜವಾನ್ (ಹಿಂ)**: ಮ.1.50ಕ್ಕೆ, ರಾ.8.15ಕ್ಕೆ, **ಮಿಷನ್ ರಾಣಿಗಂಜ್ (ಹಿಂ)**: ಸಂ.5.15ಕ್ಕೆ.
ಸ್ಕ್ರೀನ್ 3	**ಜವಾನ್ (ಹಿಂ)**: ಬೆ.11.55ಕ್ಕೆ, **ಪಾವ್ ಪಟ್ರೋಲ್ (ಇಂ)**: ಮ.3.20ಕ್ಕೆ, ಸಂ.5.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 4	**ಮಿಷನ್ ರಾಣಿಗಂಜ್ (ಹಿಂ)**: ಬೆ.11ಕ್ಕೆ, **ಮಾರಕಾಸ್ತ್ರ (ಕ)**: ಮ.3ಕ್ಕೆ, **ಅಭಿರಾಮಚಂದ್ರ (ಕ)**: ಸಂ.6.20ಕ್ಕೆ, **ಮ್ಯಾಡ್ (ತೆ)**: ರಾ.9ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪರಿಶುದ್ಧಂ (ಕ)**: ಬೆ.10.30ಕ್ಕೆ, **ಹನಿಮೂನ್ ಇನ್ ಬ್ಯಾಂಕಾಕ್(ಕ)**: ಮ.1.30ಕ್ಕೆ, **ಧ್ವಂಧ್ವ (ಕ)**: ಸಂ.4.20ಕ್ಕೆ, **ಬನ್ ಟೀ (ಕ)**: ಸಂ.6.45ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ)**: ರಾ.9.15ಕ್ಕೆ.
ಸ್ಕ್ರೀನ್ 2	**ಜವಾನ್ (ಹಿಂ)**: ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ದಿ ನನ್ 2 (ಇಂ)**: ಸಂ.4.45ಕ್ಕೆ, **ಜವಾನ್ (ಹಿಂ)**: ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ)**: ಬೆ.10.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ)**: ಮ.1.45ಕ್ಕೆ, ಸಂ.4.45ಕ್ಕೆ, **ದಿ ನನ್ 2 (ಇಂ)**: ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ)**: ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ)**: ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ)**: ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)**: ರಾ.9.45ಕ್ಕೆ, **ಆಚಾರ್ & ಕೋ (ಕ)**: ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ)**: ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ)**: ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ)**: ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ)**: ಸಂ.6.35ಕ್ಕೆ, **ಭೋಳಾ ಶಂಕರ್ (ತೆ)**: ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ)**: ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಲಕ್ಷ್ಮೀನಾರಾಯಣಸ್ವಾಮಿ ದೇಗುಲದ ಗೋಡೆ ಕುಸಿತ

ಮೂಗೂರು, ಅ.13– ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇಗುಲದ ಗೋಡೆ ಶುಕ್ರವಾರ ಕುಸಿದಿದೆ.



ಚೋಳರ ಕಾಲದಲ್ಲಿ ನಿರ್ಮಿಸಿರುವ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ ಪಾಳು ಬಿದ್ದು ಶಿಥಿಲಗೊಂಡಿತ್ತು. ನಂತರ ಸ್ಥಳೀಯ ದಾನಿಗಳು ಹಾಗೂ ಸೇವಾರ್ಥದಾರರ ನೆರವಿನಿಂದ ಲಕ್ಷಾಂತರ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಳಿಸಲಾಗಿತ್ತು. ಆದರೆ, ಇತ್ತೀಚೆಗೆ ಸುರಿದ ಭಾರಿ ಮಳೆಗೆ ದೇವಸ್ಥಾನದ ಒಂದು ಭಾಗದ ಗೋಡೆ ಕುಸಿದಿದೆ.

ಸ್ಥಳೀಯ ಜನಪ್ರತಿನಿಧಿಗಳು ಇತ್ತ ಗಮನಹರಿಸಿ ಈ ಹಳೆಯ ದೇಗುಲವನ್ನು ಉಳಿಸಿ, ಅಭಿವೃದ್ಧಿ ಪಡಿಸಬೇಕು ಎಂದು ಭಕ್ತರು ಹಾಗೂ ಸ್ಥಳೀಯರು ಆಗ್ರಹಿಸಿದ್ದಾರೆ.



ತಿ.ನರಸೀಪುರ ತಾಲೂಕಿನ ತಲಕಾಡು ಹಸ್ತಿಕೇರಿ ಮಠದ ಡಾ. ಶ್ರೀ ಸಿದ್ದಮಲ್ಲಿಕಾರ್ಜುನ ಸ್ವಾಮೀಜಿ ಬರೆದಿರುವ 'ಹಾವು ಮತ್ತು ಚೇಳಿನ ವಿಷ ಚಿಕಿತ್ಸೆ' ಕುರಿತ ಎರಡು ಕಿರುಕೃತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಿದರು. ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಪುಟ್ಟಸ್ವಾಮಿ, ಹಸ್ತಿಕೇರಿ ಮಠದ ವಿಕಾಸ ವೇದಿಕೆ ಟ್ರಸ್ಟ್‌ನ ಸದಸ್ಯರಾದ ಸಿ.ಬಸವಣ್ಣ, ಗುರುರಾಜ್, ರೇಣುಕಾಪ್ರಸಾದ್, ಮಹೇಶ್, ಮನುಕುಮಾರ್ ಇದ್ದರು.

ನಂಜನಗೂಡು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧ



ಮಲ್ಲುಂಡಿ, ಅ.13–ಕ್ಷೇತ್ರದ ಮತದಾರರು ನನಗೆ ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ನಂಜನಗೂಡು ತಾಲೂಕಿನ ನಲ್ಲಿತಾಳಪುರ ಗ್ರಾಪಂ ವ್ಯಾಪ್ತಿಯ ರಾಜೂರು, ಕಡಬೂರು, ಚಂದ್ರವಾಡಿ, ಕಪಸೋಗೆ ಗ್ರಾಮದಲ್ಲಿ ನಡೆಸಿದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಪಕ್ಷತೀತ ಹಾಗೂ ಜಾತ್ಯತೀತವಾಗಿ ಕೆಲಸ ಮಾಡಲು ಬಂದಿದ್ದೇನೆ. ಕಾಂಗ್ರೆಸ್ ಚುನಾವಣೆಯ ಪೂರ್ವದಲ್ಲಿ ಘೋಷಿಸಿದ 5 ಗ್ಯಾರಂಟಿ ಯೋಜನೆಗಳನ್ನು ಈಗಾಗಲೇ ಜಾರಿಗೆ ತಂದು ಬಡವರ ಪರ ಕೆಲಸ ಮಾಡುತ್ತಿದೆ ಎಂದರು.

ಸರ್ಕಾರದ ಯೋಜನೆಗಳು ಜನರಿಗೆ ಸಮರ್ಪಕವಾಗಿ ತಲುಪಿಸಲು ನಾನು ಬದ್ಧನಾಗಿದ್ದೇನೆ. ಮುಂದಿನ ದಿನಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಆದ್ಯತೆ ನೀಡಲಾಗುವುದು. ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಆಲಿಸಿ ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲಾಗುವುದು. ಕ್ಷೇತ್ರದ ಅಭಿವೃದ್ಧಿಗೆ ಪ್ರತಿಯೊಬ್ಬರು ಕೈಜೋಡಿಸಿ ಸಹಕರಿಸಬೇಕು. ಗ್ರಾಮೀಣ ಭಾಗದಲ್ಲಿ ಯಾವುದೇ ಸಮಸ್ಯೆ ಇದ್ದರು ನನ್ನ ಗಮನಕ್ಕೆ ತನ್ನಿ. ನಾನು ಅದನ್ನು ಹಂತ ಹಂತವಾಗಿ ಪರಿಹರಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ಸಭೆಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಗ್ರಾಪಂ ಅಧ್ಯಕ್ಷೆ ಕೆಂಪಮ್ಮ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಎಸ್ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿನಾಯಕ, ತಾಪಂ ಇಓ ರಮೇಶ್, ಸಿಡಿಪಿಓ ಕವಿತಾ, ಟಿಹೆಚ್‌ಓ ಈಶ್ವರ್, ಅಧಿಕಾರಿಗಳು ಹಾಜರಿದ್ದರು.

ಡಿವೈಎಸ್ಪಿ ಗೋಪಾಲಕೃಷ್ಣ ಅಧಿಕಾರ ಸ್ವೀಕಾರ

ಹುಣಸೂರು, ಅ.13–ಹುಣಸೂರಿನ ನೂತನ ಡಿವೈಎಸ್ಪಿಯಾಗಿ ಗೋಪಾಲಕೃಷ್ಣ ಅಧಿಕಾರ ಸ್ವೀಕರಿಸಿದರು.



ಇಲ್ಲಿ ಡಿವೈಎಸ್ಪಿಯಾಗಿದ್ದ ಮಹೇಶ್ ವರ್ಗವಣೆಯಾಗಿದ್ದರಿಂದ ಸಿಐಡಿ ಇಲಾಖೆಯಲ್ಲಿದ್ದ ಮಂಡ್ಯ ಜಿಲ್ಲೆಯ ಕೆ.ಎಂ. ದೊಡ್ಡಿಯ ಗೋಪಾಲಕೃಷ್ಣ ಅವರನ್ನು ಸರ್ಕಾರ ನಿಯೋಜಿಸಿದೆ.

ವಿದ್ಯುತ್ ಅವಘಡದಿಂದ ಸಾಮಗ್ರಿ ಬೆಂಕಿಗಾಹುತಿ

ಹೆಚ್.ಡಿ.ಕೋಟೆ: ಹಂಪಾಪುರ ಸಮೀಪದ ಗುಜ್ಜಪ್ಪನಹುಂಡಿ ಗ್ರಾಮದಲ್ಲಿ ಶುಕ್ರವಾರ ವಿದ್ಯುತ್ ಅವಘಡ ಸಂಭವಿಸಿ ಮನೆಯಲ್ಲಿದ್ದ ಸಾಮಗ್ರಿಗಳು ಬೆಂಕಿಗೆ ಅಹುತಿಯಾಗಿವೆ.



ಗ್ರಾಮದ ಪುನೀತ್ ಕುಮಾರ್ ಮನೆಯಲ್ಲಿ ವಿದ್ಯುತ್ ಶಾರ್ಕ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದರು.

ಅ.16ರಂದು ಸಾಮೂಹಿಕ ಯೋಗ, ಶಿವ ನಮಸ್ಕಾರ

ನಂಜನಗೂಡು: ಯೋಗ ದಸರಾ ಅಂಗವಾಗಿ ಅ.16ರಂದು ಬೆಳಗ್ಗೆ 6 ರಿಂದ 7 ಗಂಟೆ ವರೆಗೆ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಸಾಮೂಹಿಕ ಯೋಗ ಹಾಗೂ ಶಿವ ನಮಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಬಿ.ಅಶೋಕ್ ಕುಮಾರ್ ತಿಳಿಸಿದ್ದಾರೆ.

ಅ.28, ಸರಗೂರಲ್ಲಿ ವಾಲ್ಮೀಕಿ ಜಯಂತಿ



ಹೆಚ್.ಡಿ.ಕೋಟೆ: ಈ ಬಾರಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅ.28ರಂದು ಸರಗೂರು ತಾಲೂಕಿನಲ್ಲಿ ಅದ್ದೂರಿಯಾಗಿ ಆಚರಿಸಲು ಸಹಕಾರ ನೀಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ನಡೆದ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೂರು ನಾಲ್ಕು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ವಾಲ್ಮೀಕಿ ಜಯಂತಿ ಸೇರಿದಂತೆ ಮತ್ತಿತರರ ಮಹಾನೀಯರ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸಲು ಸಾಧ್ಯವಾಗಿರಲಿಲ್ಲ. ಹಾಗಾಗಿ ಎಲ್ಲಾ ಸಮುದಾಯದ ಸಹಕಾರದಿಂದ ಈ ಬಾರಿ ಆಚರಣೆಗೆ ಸಿದ್ಧತೆ ನಡೆಸಲಾಗಿದೆ ಎಂದರು.

ಪಟ್ಟಣದ ಗದ್ದಿಗೆ ಸರ್ಕಲ್ ಹತ್ತಿರ ನಿರ್ಮಿಸುತ್ತಿರುವ 6 ಕೋಟಿ ರೂ. ವೆಚ್ಚದ ವಾಲ್ಮೀಕಿ ಸಮುದಾಯ ಭವನದ ಸಣ್ಣಪುಟ್ಟ ಕೆಲಸ ಬಾಕಿ ಇದ್ದು, ಮುಂದಿನ ಏಪ್ರಿಲ್ ತಿಂಗಳಲ್ಲಿ ಲೋಕಾರ್ಪಣೆ ಮಾಡಲು ಎಲ್ಲಾ ತಯಾರಿ ನಡೆಸಲಾಗಿದೆ. ಸರಗೂರಿನಲ್ಲೂ ವಾಲ್ಮೀಕಿ ಭವನ ನಿರ್ಮಾಣಕ್ಕೆ ಜಾಗ ಗುರುತಿಸಲಾಗಿದೆ. 12 ಅಡಿ ಎತ್ತರದ ವಾಲ್ಮೀಕಿ ಪುತ್ಥಳಿಯನ್ನು ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ನಿರ್ಮಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

ಕ್ಯಾತನಹಳ್ಳಿ ನಾಗರಾಜು ಮಾತನಾಡಿದರು. ತಹಶೀಲ್ದಾರ್ ಸಣ್ಣರಾಮಪ್ಪ, ತಾಪಂ ಇಓಗಳಾದ ಧರಣೀಶ್, ಸುಷ್ಮಾ, ನಾಯಕ ಸಮಾಜದ ಅಧ್ಯಕ್ಷ ಶಂಭುಲಿಂಗನಾಯಕ, ಸಿಪಿಎಂ ಶಿವಣ್ಣ, ಜಿನ್ನಹಳ್ಳಿ ರಾಜನಾಯಕ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ನಾರಾಯಣಸ್ವಾಮಿ, ಎಇಇ ನಾಗರಾಜು, ರೈತ ಸಂಘದ ಅಧ್ಯಕ್ಷ ಮಹಾದೇವನಾಯಕ ಇದ್ದರು.

ಮದ್ಯ ವ್ಯಸನ ಎಲ್ಲಾ ಪಾಪಗಳ ಕೂಪ

ಹುಣಸೂರು, ಅ.13– ಮದ್ಯ ವ್ಯಸನ ಎಲ್ಲಾ ಪಾಪಗಳ ತಾಯಿಯಿದ್ದಂತೆ. ಆದ್ದರಿಂದ ಯುವ ಸಮೂಹ ದುಶ್ಚಟಗಳಿಂದ ದೂರಾಗುವತ್ತ ಎಚ್ಚರಿಕೆ ವಹಿಸಬೇಕು ಎಂದು ಮುಸ್ಲಿಂ ಧರ್ಮಗುರು ಸಜ್ಜದ್ ಅಹಮದ್ ತಿಳಿಸಿದರು.



ನಗರದ ಗುರುಬೂದಿ ಮಂಗಳ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೆ.ಆರ್.ನಗರದ ಜಿಲ್ಲಾ ಕಚೇರಿ ಮತ್ತು ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ವತಿಯಿಂದ ಆಯೋಜಿಸಿದ್ದ ಜನಜಾಗೃತಿ ಸಮಾವೇಶ ಮತ್ತು ವ್ಯಸನಮುಕ್ತ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಬ್ಬ ವ್ಯಕ್ತಿಯಿಂದ ಸಮಾಜ ಸೃಷ್ಟಿಯಾಗುವುದಿಲ್ಲ. ಸಮಾಜದ ಸುಧಾರಣೆ ಮತ್ತು ಅವನತಿ, ಅಲ್ಲಿನ ಪಾಪ ಕೃತ್ಯಗಳನ್ನು ಅವಲಂಬಿಸಿದೆ. ಇಸ್ಲಾಂ ಧರ್ಮ ಸಾರ್ವತ್ರಿಕ ಧರ್ಮವಾಗಿದೆ. ಮದ್ಯಪಾನ ಎನ್ನುವುದು ಎಲ್ಲಾ ಪಾಪಕೃತ್ಯಗಳಿಗೆ ತಾಯಿ ಇದ್ದಂತೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಎಚ್.ಎಲ್. ಮುರಳೀಧರ್ ಮಾತನಾಡಿ, ಯೋಜನೆ ವತಿಯಿಂದ ಆಡಳಿತಾತ್ಮಕ ಅನುಕೂಲಕ್ಕಾಗಿ ಕೆ.ಆರ್.ನಗರ ಮತ್ತು ಮೈಸೂರನ್ನು ಗುರುತಿಸಲಾಗಿದೆ. ಕೆ.ಆರ್.ನಗರ ಜಿಲ್ಲಾ ವ್ಯಾಪ್ತಿ ಹುಣಸೂರು, ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲೂಕಿನ 7 ಯೋಜನಾ ಕಚೇರಿಗಳನ್ನು ಒಳಗೊಂಡಿದೆ. ಎಲ್ಲರ ಸಂಘಟಿತ ಪ್ರಯತ್ನದಿಂದ ಮಾತ್ರ ದುಶ್ಚಟಗಳು ದೂರಾಗಲು ಸಾಧ್ಯ ಎಂದು ತಿಳಿಸಿದರು.

ಮಾದಳ್ಳಿ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮೀಜಿ, ಆಶೀರ್ವಚನ ನೀಡಿದರು. ಜಿಲ್ಲಾ ಜನಜಾಗೃತಿ ಸಮಿತಿ ಜಿಲ್ಲಾಧ್ಯಕ್ಷ ಹಂದನಹಳ್ಳಿ ಸೋಮಶೇಖರ್ ಮಾತನಾಡಿದರು. ಉಪಾಧ್ಯಕ್ಷ ಅಶ್ವಥ್ ಕುಮಾರೇಗೌಡ, ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಿ.ವಿ.ರವಿ, ಕೋಶಾಧಿಕಾರಿ ಎ.ಎನ್. ಸಂಪತ್‌ಕುಮಾರ್, ಕಾನೂನು ಸಲಹೆಗಾರ ಪವಿತ್ರಶ್ರೀಧರ್, ರಮೇಶ್ ಕುಮಾರ್, ಯೋಜನಾಧಿಕಾರಿಗಳಾದ ನಾರಾಯಣಶೆಟ್ಟಿ, ಧನಂಜಯ, ಪ್ರಗತಿ ಸ್ವಸಹಾಯ ಸಂಘದ ಸದಸ್ಯರು ಮೇಲ್ವಿಚಾರಕರು ಇತರರು ಹಾಜರಿದ್ದರು. ಇದೇ ವೇಳೆ ಮದ್ಯವ್ಯಸನ ಮುಕ್ತರಾದ 7 ಜನರನ್ನು ಸನ್ಮಾನಿಸಲಾಯಿತು.

ಬಡಾವಣೆಗೆ ಸೌಲಭ್ಯ ಕಲ್ಪಿಸುವಂತೆ ಮನವಿ ಸಲ್ಲಿಕೆ



ತಿ.ನರಸೀಪುರ, ಅ.13–ಹೆಳವರಹುಂಡಿ ಸಮೀಪದ ಬಂಗಾರಪ್ಪ ಬಡಾವಣೆಗೆ ಮೂಲಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಗುರುವಾರ ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ ಅವರಿಗೆ ಮನವಿ ಸಲ್ಲಿಸಿದರು.

ಹೆಳವರಹುಂಡಿ ಗ್ರಾಮದ ಈಶ್ವರಗೌಡನಹಳ್ಳಿ ಮುಖ್ಯರಸ್ತೆಯಲ್ಲಿ ನಿವೇಶನವನ್ನು 2 ಹಂತದಲ್ಲಿ ಸುಮಾರು 287 ಜನರಿಗೆ ನೀಡಲಾಗಿತ್ತು. ಆದರೆ, ಹಿಂದೆ ಆಲಗೂಡು ಗ್ರಾಪಂ ಇದ್ದಾಗ 2014–15ನೇ ಸಾಲಿನವರೆಗೆ ಕಂದಾಯ ಪಾವತಿಸಿಕೊಂಡು ಕೆಲವರಿಗೆ ಇ–ಸ್ವತ್ತು ಮಾಡಿಕೊಡಲಾಗಿತ್ತು. ಮತ್ತೆ ಕೆಲವರಿಗೆ ಇ–ಸ್ವತ್ತು ಮಾಡದೆ ಕಂದಾಯ ಪಡೆಯುತ್ತಿಲ್ಲ. ಹಾಗಾಗಿ ಬಡಾವಣೆಗೆ ಯಾವುದೇ ಮೂಲಸೌಕರ್ಯ ಒದಗಿಸುತ್ತಿಲ್ಲ ಎಂದು ಮನವಿಯಲ್ಲಿ ದೂರಲಾಗಿದೆ.

ಸ್ಥಳ ಪರಿಶೀಲನೆ ನಡೆಸಿ ಕಂದಾಯ ಕಟ್ಟಿಸಿಕೊಂಡು ಇ–ಸ್ವತ್ತು ಮಾಡಬೇಕು. ಬಡಾವಣೆಗೆ ಮೂಲಸೌಕರ್ಯ ಒದಗಿಸಬೇಕು ಎಂದು ಮನವಿಯಲ್ಲಿ ಕೋರಲಾಗಿದೆ. ಮನವಿ ಸ್ವೀಕರಿಸಿದ ಮುಖ್ಯಾಧಿಕಾರಿ ವಸಂತಕುಮಾರಿ, ಕೂಡಲೇ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ವೇಳೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಮುಖ್ಯಸ್ಥೆ ನಾಗರತ್ನಮ್ಮ, ಸರೋಜಮ್ಮ, ಸಾವಿತ್ರಮ್ಮ, ಉಮಾ ಮಂಗಳಾ, ನಾಗರಾಜು, ಕಾಂತರಾಜ ಅರಸ್, ಕೃಷ್ಣಮೂರ್ತಿ, ಮಹದೇವಯ್ಯ, ರಮೇಶ್, ಚಂದ್ರು, ಮಹದೇವಪ್ಪ, ಮಹೇಶ್ ಮತ್ತಿತರರಿದ್ದರು.

ಈ ಬಾರಿ ತಿಪ್ಪೂರು ಲಕ್ಷ್ಮಿನಾರಾಯಣಸ್ವಾಮಿ ರಥೋತ್ಸವ

ಗ್ರಾಮದ ದೇವಾಲಯ ಆವರಣದಲ್ಲಿ ಸಭೆ ನಡೆಸಿದ ಶಾಸಕ ರವಿಶಂಕರ್

ಕೆಆರ್.ನಗರ, ಅ.13– ತಾಲೂಕಿನ ತಿಪ್ಪೂರು ಗ್ರಾಮದ ಶ್ರೀ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾಮಗಾರಿ ನಡೆಯುತ್ತಿರುವುದರಿಂದ 3 ವರ್ಷಗಳಿಂದ ರಥೋತ್ಸವ ನಡೆದಿಲ್ಲ. ಈ ಬಾರಿ ಕಾಮಗಾರಿ ಪೂರ್ಣಗೊಳಿ, ರಥೋತ್ಸವ ನಡೆಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು

ತಿಪ್ಪೂರು ಗ್ರಾಮದ ದೇವಾಲಯದ ಆವರಣದಲ್ಲಿ ಗ್ರಾಮಸ್ಥರು, ಮುಜರಾಯಿ ಹಾಗೂ ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, 2019ರಲ್ಲಿ ಪುರಾತತ್ವ ಇಲಾಖೆ ವತಿಯಿಂದ 2.38 ಕೋಟಿ ರೂ. ವೆಚ್ಚದಲ್ಲಿ ಜೀರ್ಣೋದ್ಧಾರ ಕಾಮಗಾರಿಗೆ ಚಾಲನೆ ನೀಡಲಾಗಿತ್ತು ಆದರೆ, ನಿಗದಿತ ಸಮಯಕ್ಕೆ ಪೂರ್ಣಗೊಳಿಸಲು ಸಾಧ್ಯವಾಗದೆ ಅರ್ಧಕ್ಕೆ ನಿಂತಿರುವುದರಿಂದ ರಥೋತ್ಸವ ನಡೆಸಲು ಸಾಧ್ಯವಾಗಿಲ್ಲ ಎಂದರು.

ಸಾವಿರ ವರ್ಷ ಇತಿಹಾಸವಿರುವ ಈ ದೇವಾಲಯದ ಕಾಮಗಾರಿಯನ್ನು ಪೂರ್ಣಗೊಳಿಸಿ ರಥೋತ್ಸವ ನಡೆಸಬೇಕು ಎಂದು ಗ್ರಾಮಸ್ಥರು ಹಲವು ಬಾರಿ ಮನವಿ ಸಲ್ಲಿಸಿದ್ದಾರೆ ಮುಂದುವರಿದ ಕಾಮಗಾರಿಗಾಗಿ 1.10 ಕೋಟಿ ರೂ. ಅಂದಾಜು ಪಟ್ಟಿ ತಯಾರಿಸಿದ್ದು, ಶೀಘ್ರದಲ್ಲೇ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಲಾಗುವುದು ಎಂದು ಹೇಳಿದರು.



ದೇವಸ್ಥಾನಗಳ ಜೀರ್ಣೋದ್ಧಾರ ಸಂದರ್ಭದಲ್ಲಿ ಈಶಾನ್ಯ ಮೂಲೆಯಿಂದ ಕಾಮಗಾರಿ ಆರಂಭಿಸಬೇಕು. ಆಗ ಮಾತ್ರ ದೇವಾಲಯದ ಕೆಲಸ ಸುಲಲಿತವಾಗಿ ನಡೆಯುವ ಜತೆಗೆ ಗ್ರಾಮಕ್ಕೂ ಒಳ್ಳೆಯದಾಗಲಿದೆ. ಇದಕ್ಕೆ ತದ್ವಿರುದ್ಧವಾಗಿ ಕೆಲಸ ಮಾಡಿರುವುದರಿಂದ ತೊಂದರೆಯಾಗಿದೆ. ಇದನ್ನು ಸರಿಪಡಿಸಲು ಅ.16ರಿಂದ ಯಾಗಶಾಲೆ ಕಾಮಗಾರಿ ಪ್ರಾರಂಭಿಸುವಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ದೇವಾಲಯ ಆವರಣದ ನೆಲಹಾಸು, ಧ್ವಜಸ್ಥಂಬ, ರಥದ ಮನೆ ನಿರ್ಮಾಣ ಮತ್ತು ವಿದ್ಯುತ್ ಸಂಪರ್ಕ ಸೇರಿದಂತೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಅನುದಾನ ಮಂಜೂರಾದ ಕೂಡಲೇ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಮೂಲ ದೇವರ ಪ್ರತಿಷ್ಠಾಪನೆ ಸೇರಿದಂತೆ ಇತರ ಧಾರ್ಮಿಕ ಕಾರ್ಯಗಳನ್ನು ನಡೆಸಲು ಗ್ರಾಮಸ್ಥರಿಗೆ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸಿ.ಎಸ್.ಪೂರ್ಣಿಮಾ, ಪುರಾತತ್ವ ಇಲಾಖೆಯ ಎಇಇ ಮಮತಾ, ಪುರಸಭೆ ಮಾಜಿ ಅಧ್ಯಕ್ಷ ನರಸಿಂಹರಾಜು, ತಿಪ್ಪೂರು ಗ್ರಾಪಂ ಅಧ್ಯಕ್ಷ ಮಧು, ಸದಸ್ಯರಾದ ಶಿವಣ್ಣ, ಸತ್ಯನಾರಾಯಣ್, ವಿಎಸ್‌ಎಸ್‌ಎನ್ ಅಧ್ಯಕ್ಷ ಎಸ್.ಸಿದ್ದೇಗೌಡ, ಮುಖಂಡರಾದ ಮಂಜುನಾಥ್, ಗಂಗಾಧರ್, ಕುಮಾರ್, ತಿಪ್ಪೂರುರವಿ, ಮಂಜು, ರಾಜೇಗೌಡ, ಸಾನಂದ, ಸಾಹಿತಿ ಕೃಷ್ಣ, ಮಹದೇವ ನಾಯಕ, ರಾಜನಾಯಕ, ಶಿವಕುಮಾರ್, ದಿವಾಕರ್, ಪಿಡಿಓ ಭಾಸ್ಕರ್ ಮತ್ತಿತರರು ಹಾಜರಿದ್ದರು.

ಕೃಷ್ಣೇಗೌಡ ನಿಧನ



ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದ ನಂಜಾಪುರ ಬಡಾವಣೆಯ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಕೃಷ್ಣೇಗೌಡ (ಬೋರಶೆಟ್ಟಿ ತಮ್ಮಣ್ಣ–68 ವರ್ಷ) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಅಪಾರ ಬಂಧು–ಬಳಗ ಇದ್ದಾರೆ. ನಂಜಾಪುರ ಬಡಾವಣೆಯ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ಕುಕ್ಕರಹಳ್ಳಿ ಕೆರೆ ದಂಡೆಯಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಚಾಲನೆ

ಮೈಸೂರು, ಅ.13(ಎಸ್‌ಬಿಡಿ)– ಮೈಸೂರು ವಿಶ್ವವಿದ್ಯಾನಿಲಯ ತೋಟಗಾರಿಕೆ ವಿಭಾಗದ ವತಿಯಿಂದ ಕುಕ್ಕರಹಳ್ಳಿ ಕೆರೆ ಪೂರ್ವ ದಂಡೆಯಲ್ಲಿ ಆಯೋಜಿಸಿರುವ ದಸರಾ ಫಲಪುಷ್ಪ ಪ್ರದರ್ಶನವನ್ನು ವಿವಿಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಶುಕ್ರವಾರ ಉದ್ಘಾಟಿಸಿದರು.

ಕೆರೆಯ ಪೂರ್ವ ಗೇಟ್‌ನಲ್ಲಿ ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿ ಶುಭ ಕೋರಿದ ಅವರು, ಗಣ್ಯರೊಂದಿಗೆ ಒಂದು ಸುತ್ತು ಹಾಕಿ ಫಲಪುಷ್ಪದ ಸೊಬಗನ್ನು ಕಣ್ತುಂಬಿಕೊಂಡು ಸಂತಸ ವ್ಯಕ್ತಪಡಿಸಿದರು.

ಈ ವೇಳೆ ವಿವಿ ಕುಲಸಚಿವೆ ವಿ.ಆರ್.ಶೈಲಜ, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ಎಸ್.ಕೆ.ಮುಜಾವರ್, ವಿಶೇಷಾಧಿಕಾರಿ ಕುಮಾರ್, ಇಇ ಪ್ರತಾಪ್, ವಿಶ್ವಮಾನವ ವೇದಿಕೆ ಅಧ್ಯಕ್ಷ ವಾಸು ಮತ್ತಿತರರು ಉಪಸ್ಥಿತರಿದ್ದರು.

ಪರಿಸರ ಪ್ರೇಮಿಗಳ ನೆಚ್ಚಿನ ತಾಣ ಕುಕ್ಕರಹಳ್ಳಿ ಕೆರೆಯ ಪೂರ್ವ ದಂಡೆ ಫಲಪುಷ್ಪಗಳಿಂದ ಅಲಂಕೃತಗೊಂಡಿರುವುದರಿಂದ ಇಲ್ಲಿನ ಸೌಂದರ್ಯ



ಇಮ್ಮಡಿಯಾಗಿದೆ. ದಸರಾ ಹೊಸ್ತಿಲಲ್ಲಿ ಬಣ್ಣ ಬಣ್ಣದ ಅತ್ಯಾಕರ್ಷಕ ಹೂವುಗಳು, ನಿತ್ಯ ಬಳಸುವ ತರಕಾರಿಗಳು, ಎಲೆ ಜಾತಿಯ ಗಿಡಗಳು ಕಣ್ಮನ ಸೆಳೆಯುತ್ತಿವೆ. ಪೂರ್ವ ದ್ವಾರದ ಎದುರು ಹಾಗೂ ಏರಿಯಲ್ಲಿ ಹೂವಿನ ತೋಟ ನಿರ್ಮಾಣವಾದಂತಿದೆ. ನಿತ್ಯ ಇಲ್ಲಿಗೆ ಬರುವ ವಾಯು ವಿಹಾರಿಗಳಿಗೆ ನವೀನತೆಯ ಅನುಭವ ಕಲ್ಪಿತವಾಗಿದೆ. ಇತರೆ ಸಾರ್ವಜನಿಕರನ್ನೂ ಆಕರ್ಷಿಸುವ ಸೊಬಗು ನಿರ್ಮಾಣವಾಗಿವೆ.

6 ಸಾವಿರ ಕುಂಡ: ಕಾಸ್ಮೋಸ್, ಮಾರಿಗೋಲ್ಡ್, ಜಿನಿಯಾ, ಸಾಲ್ವಿಯಾ, ಗ್ಲಾಡಿಯೋಲಸ್, ಫ್ಲೋಕ್ಸ್, ಪಿಂಕ್ ಫ್ಲವರ್ ಸೇರಿದಂತೆ ವಿವಿಧ ಜಾತಿಯ ಬಣ್ಣ ಬಣ್ಣದ ಹೂಗಳು, ಕ್ರೊಟಾನ್, ಅಗ್ಲೋನಿಮಾ, ಫಾಮ್ಸ್, ಎಲೆಕ್ಯೂಯಮ್, ಕೋಲಿಯಸ್, ಡಿಫೆನ್ ಬಾಚಿಯಾ ಸೇರಿದಂತೆ ಹಲವು ಎಲೆ ಜಾತಿಯ ಗಿಡಗಳು, ಸಾವಯವ ವಿಧಾನದಲ್ಲಿ ಬೆಳೆದ ಟೊಮಾಟೋ, ಬದನೆಕಾಯಿ, ಮೆಣಸಿನಕಾಯಿ, ಕಾಲಿಫ್ಲವರ್, ಹಾಗಲ ಇನ್ನಿತರ ತರಕಾರಿ ಹಾಗೂ ಸೊಪ್ಪುಗಳು ಸೇರಿದಂತೆ ಇಲ್ಲಿ 6 ಸಾವಿರಕ್ಕೂ ಹೆಚ್ಚು ಕುಂಡಗಳಲ್ಲಿ ಫಲಪುಷ್ಪ ಮೈದಳೆದಿದೆ.

ಏರಿಯ ಮಧ್ಯದಲ್ಲಿ ವಿವಿಧ ಬಣ್ಣದ ಹೂವುಗಳ ಕುಂಡಗಳನ್ನು ಗೋಪುರ ಮಾದರಿಯಲ್ಲಿ ಜೋಡಿಸಿರುವುದು ಸೊಗಸಾಗಿದೆ ಇವುಗಳ ಮುಂದೆ ನಿಂತು ಹಲವು ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದ್ದು ಕಂಡು ಬಂತು. ಈ ಸುಂದರ ತಾಣದಲ್ಲಿ ಒಂದು ಸುತ್ತು ಹಾಕಿದರೆ ಏನೇ ಒತ್ತಡವಿದ್ದರೂ ಮನಸ್ಸು ಹಗುರವಾಗುವುದಂತೂ ನಿಶ್ಚಿತ.

ಕುಕ್ಕರಹಳ್ಳಿ ಕೆರೆ ಬಳಿಯ ಫಲಪುಷ್ಪ ಪ್ರದರ್ಶನ, ಕ್ರಾಫರ್ಡ್ ಹಾಲ್, ವಿವಿಧ ವಿಭಾಗಗಳ ಕಟ್ಟಡಗಳು ಸೇರಿ ಒಟ್ಟಾರೆ 20 ಸಾವಿರಕ್ಕೂ ಹೆಚ್ಚು ಗಿಡಗಳನ್ನು ಜೋಡಿಸಲಾಗಿದೆ ಎಂದು ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ಮುಜಾವರ್ ಇದೇ ವೇಳೆ ತಿಳಿಸಿದರು.

ಮೈಸೂರು ವಿವಿ ತೋಟಗಾರಿಕೆ ವಿಭಾಗದ ವತಿಯಿಂದ ಏರ್ಪಡಿಸಲಾಗಿರುವ 18ನೇ ವರ್ಷದ ದಸರಾ ಫಲಪುಷ್ಪ ಪ್ರದರ್ಶನವನ್ನು ಅ.24ರವರೆಗೆ ಇರಲಿದ್ದು ನಿತ್ಯ ಬೆಳಗ್ಗೆ 9 ರಿಂದ ಸಂಜೆ 7 ರವರೆಗೆ ವೀಕ್ಷಿಸಬಹುದು. ಹೂವುಗಳನ್ನು ಮುಟ್ಟದೆ ವೀಕ್ಷಿಸುವಂತೆ ವಿವಿಯ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ (ರಿ)

ಇವರ ರಿಟರ್ನಿಂಗ್ ಅಧಿಕಾರಿರವರ ಕಾರ್ಯಾಲಯ,
ಜೆ.ಎಲ್.ಬಿ. ರಸ್ತೆ, ಮೈಸೂರು

ಪ್ರಕಟಣೆ । ತಿದ್ದುಪಡಿ

ಚುನಾವಣೆ ವೇಳಾಪಟ್ಟಿಯಲ್ಲಿ ಕ್ರ.ಸಂ. 1 ರಲ್ಲಿ ನಾಮಪತ್ರಗಳನ್ನು ಸಲ್ಲಿಸಲು ಕೊನೆ ದಿನಾಂಕ 19-10-2023ರ ಬದಲಾಗಿ 20-10-2023 ಎಂದು ಓದಿಕೊಳ್ಳಬೇಕಾಗಿ ವಿನಂತಿ.

ಸೂಚನೆಗಳು : ಪುಟಸಂಖ್ಯೆ 40 ರಲ್ಲಿ ಕ್ರಮ ಸಂಖ್ಯೆ 1 ರಲ್ಲಿ ಒಟ್ಟು 30 ನಿರ್ದೇಶಕರ ಸ್ಥಾನಗಳ ವಿಸ್ತರಣೆಯಲ್ಲಿ ತಪ್ಪಾಗಿದ್ದು ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

ಮೈಸೂರು ನಗರ -15 ಸ್ಥಾನ, ಬೆಂಗಳೂರು -02 ಸ್ಥಾನ, ಮಂಡ್ಯ -01 ಸ್ಥಾನ ಮಳವಳ್ಳಿ -02 ಸ್ಥಾನ, ಚಾಮರಾಜನಗರ -01 ಸ್ಥಾನ, ಹೆಬ್ಬಸೂರು – 01 ಸ್ಥಾನ ನಂಜನಗೂಡು-02 ಸ್ಥಾನ, ಹೆಚ್.ಡಿ.ಕೋಟೆ- 01 ಸ್ಥಾನ, ಹುಣಸೂರು-01 ಸ್ಥಾನ. ಮೈಸೂರು ಗ್ರಾಮಾಂತರ -02 ಸ್ಥಾನ, ಗುಂಡ್ಲುಪೇಟೆ 01- ಸ್ಥಾನ, ಟಿ.ನರಸೀಪುರ / ಕೊಳ್ಳೇಗಾಲ- 01 ಸ್ಥಾನ, ಒಟ್ಟು -30 ಸ್ಥಾನಗಳು

ಸಹಿ/– ಸಿ.ಪುಟ್ಟರಾಜು, ನಿವೃತ್ತ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ರಿಟರ್ನಿಂಗ್ ಆಫೀಸರ್, ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ (ರಿ), ಮೈಸೂರು

ಗಜಪಡೆಗೆ ಮತ್ತೆ ಸಿಡಿಮದ್ದು ತಾಲೀಮು: ಮೊದಲ ತಂಡದ ಕೇವಲ 9 ಆನೆಗಳಷ್ಟೇ ಭಾಗಿ

- ಮೊದಲ ಬಾರಿ ಬೆದರಿದ್ದ ಆನೆಗಳು ಗೈರು
- ಸಿಡಿಮದ್ದಿನ ಸದ್ದಿಗೂ ಜಗ್ಗದ ಗಜಗಳು



ಮೈಸೂರು, ಅ.13(ಎಂಟಿವೈ)– ಜಂಬೂಸವಾರಿಗೆ ದಿನಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ದಸರಾ ಗಜಪಡೆ ಮತ್ತು ಅಶ್ವಪಡೆಗೆ 2ನೇ ಹಂತದ ಫಿರಂಗಿ ಸಿಡಿಮದ್ದು ತಾಲೀಮು ಶುಕ್ರವಾರ ಸಂಜೆ ಯಶಸ್ವಿಯಾಗಿ ನೆರವೇರಿತು.

ನವರಾತ್ರಿ ಆರಂಭಕ್ಕೆ ಕೇವಲ ಎರಡು ದಿನ ಮಾತ್ರವಿದ್ದು, ಜಂಬೂಸವಾರಿಗೆ ಗಜಪಡೆ ಹಾಗೂ ಅಶ್ವಪಡೆಯನ್ನು ಸಜ್ಜುಗೊಳಿಸಲು ಶುಕ್ರವಾರ ಸಂಜೆ ಎರಡನೇ ಹಂತದ ತಾಲೀಮು ನಡೆಸಲಾಯಿತು. ದಸರಾ ವಸ್ತುಪ್ರದರ್ಶನ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ನಡೆದ ಕುಶಾಲತೋಪು ಸಿಡಿಸುವ ತಾಲೀಮಿನಲ್ಲಿ ದಿಟ್ಟತನ ಪ್ರದರ್ಶಿಸಿದರೆ, ಅಶ್ವಪಡೆಯ ಕೆಲ ಕುದುರೆಗಳು ಬೆಚ್ಚಿದವು.

ಅ.11ರಂದು ನಡೆದ ಮೊದಲ ತಾಲೀಮಿನಲ್ಲಿ ಬೆದರಿದ 5 ಆನೆಗಳನ್ನು ಅರಮನೆಯಲ್ಲೇ ಬಿಟ್ಟು, ಉಳಿದ ಮೊದಲ ತಂಡದ 9 ಆನೆಗಳನ್ನು ಎರಡನೇ ತಾಲೀಮಿಗೆ ಕರೆತರಲಾಗಿತ್ತು. ಎರಡನೇ ತಂಡದ 5 ಆನೆಗಳು ಸಿಡಿಮದ್ದು ತಾಲೀಮಿನಿಂದ ದೂರವುಳಿದವು. ಅಶ್ವರೋಹಿ ದಳದ 27 ಕುದುರೆಗಳು ತಾಲೀಮಿನಲ್ಲಿ ಪಾಲ್ಗೊಂಡವು. ಫಿರಂಗಿ ದಳದ ಸಿಬ್ಬಂದಿ 7 ಫಿರಂಗಿ ಬಳಸಿ, 3 ಸುತ್ತಿನಲ್ಲಿ 21 ಬಾರಿ ಕುಶಾಲತೋಪು ಹಾರಿಸಿ, ತಮ್ಮ ಜವಾಬ್ದಾರಿ ಯಶಸ್ವಿಯಾಗಿ ನಿಭಾಯಿಸಿದರು.

ಮಿಸುಕಾಡದ ಆನೆಗಳು: ಕುಶಾಲತೋಪು ಸಿಡಿತದ ತಾಲೀಮಿನ ವೇಳೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 9 ಆನೆಗಳು ದಿಟ್ಟತನ ಪ್ರದರ್ಶಿಸಿ ಗಮನ ಸೆಳೆದವು. ಮೊದಲ ತಾಲೀಮಿನ ವೇಳೆ ಬೆದರಿದ್ದ ಧನಂಜಯ ಈ ಬಾರಿ ಅಲುಗಾಡಲಿಲ್ಲ. ಕ್ಯಾಪ್ಟನ್ ಅಭಿಮನ್ಯು, ಅರ್ಜುನ ಜಗ್ಗಲಿಲ್ಲ. ಗೋಪಿ, ಭೀಮ, ವರಲಕ್ಷ್ಮೀ, ವಿಜಯ, ಮಹೇಂದ್ರ, ಕಂಜನ್ ಶಾಂತಚಿತ್ತದಿಂದ ವರ್ತಿಸಿದವು. ಇಂದು ನಡೆದ ತಾಲೀಮಿನ ವೇಳೆ ಒಂದೊಂದು ಫಿರಂಗಿಗೂ 1.5 ಕೆಜಿಯಿಂದ 2 ಕೆಜಿ ಗನ್‌ಪೌಡರ್ ಬಳಸಿ ತಯಾರಿಸಿದ್ದ ಸಿಡಿಮದ್ದು ಬಳಸಲಾಗಿತ್ತು. ಇದರಿಂದ 104 ಡೆಸಿಬಲ್ ಶಬ್ಧ ಹೊರಹೊಮ್ಮಿತು. ಆದರೂ ಗಜಪಡೆ ಅಲುಗಾಡದೇ ನಿಂತಿದ್ದವು.

ಫಿರಂಗಿಯತ್ತ ನುಗ್ಗಿದ ಗಜಪಡೆ: ಮೂರನೇ ಸುತ್ತಿನ ಸಿಡಿಮದ್ದು ಸಿಡಿಸುವ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆಯೇ, ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಆನೆಗಳು ಫಿರಂಗಿಯತ್ತ ಸಾಗಿದವು. ಸಿಡಿಮದ್ದು ಸಿಡಿಸುತ್ತಿದ್ದರೂ ಅಂಜದೇ ಫಿರಂಗಿ ಸಮೀಪವೇ ಬಂದವು. ಆನೆಗಳ ಈ ವರ್ತನೆಯಿಂದ ಅರಣ್ಯಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಆಶ್ಚರ್ಯಚಕಿತರಾದರು.

5 ಆನೆಗಳು ಗೈರು: ಮೊದಲ ತಾಲೀಮಿನಲ್ಲಿ ಹೆದರಿದ್ದ ಆನೆಗಳಿಗೆ ವಿನಾಯಿತಿ ನೀಡಲಾಗಿತ್ತು. 2ನೇ ತಂಡದಲ್ಲಿ ಆಗಮಿಸಿದ್ದ ಸುಗ್ರೀವ, ಪ್ರಶಾಂತ, ಲಕ್ಷ್ಮೀ, ರೋಹಿತ್ ಮತ್ತು ಹಿರಣ್ಯಾ ಆನೆಗಳು ತಾಲೀಮಿನಲ್ಲಿ ಭಾಗವಹಿಸಿರಲಿಲ್ಲ.

ಈ ಸಂದರ್ಭ ಡಿಸಿಎಫ್‌ಗಳಾದ ಸೌರಭ್ ಕುಮಾರ್, ಡಾ.ಬಸವರಾಜು, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಮಹೇಶ್ ಕುಮಾರ್, ಡಿಸಿಪಿ ಮುತ್ತುರಾಜ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

ಎರಡನೇ ಹಂತದ ಕುಶಾಲತೋಪು ಸಿಡಿಸುವ ತಾಲೀಮು ಯಶಸ್ವಿಯಾಗಿದೆ. ಯಾವುದೇ ಆನೆ ಮಿಸುಕಾಡಲಿಲ್ಲ. ಮೊದಲ ತಂಡದ 9 ಆನೆಗಳು ಭಾಗವಹಿಸಿವೆ. ಮೊದಲ ತಾಲೀಮಿನಲ್ಲಿ ಬೆದರಿದ ಎರಡನೇ ತಂಡದ 5 ಆನೆಗಳನ್ನು ಕರೆತಂದಿಲ್ಲ. ಮೂರನೇ ತಾಲೀಮಿನಲ್ಲಿ ಎಲ್ಲಾ ಆನೆಗಳು ಭಾಗವಹಿಸಲಿವೆ. ಪಟ್ಟದ ಆನೆ, ನಿಶಾನೆ ಆನೆ ಹಾಗೂ ಶ್ರೀರಂಗಪಟ್ಟಣ ದಸರಾಗೆ ಕಳುಹಿಸುವ ಆನೆಯನ್ನು ಆಯ್ಕೆ ಮಾಡಿದ್ದು, ಕೆಲ ದಿನಗಳಲ್ಲಿ ಪಟ್ಟಿ ಬಿಡುಗಡೆ ಮಾಡಲಾಗುವುದು.

-ಸೌರಭ್ ಕುಮಾರ್, ಡಿಸಿಎಫ್

ಗಜಪಡೆ, ಅಶ್ವಪಡೆಗೆ ಎರಡನೇ ಹಂತದ ಸಿಡಿಮದ್ದು ಸಿಡಿಸುವ ತಾಲೀಮು ಯಶಸ್ವಿಯಾಗಿ ನಡೆದಿದೆ. ಅ.17ರಂದು ಮೂರನೇ ಹಾಗೂ ಅಂತಿಮ ತಾಲೀಮು ನಡೆಯಲಿದೆ. ಮಹಿಷಾ ದಸರಾ, ಚಾಮುಂಡಿ ಚಲೋ ಹಿನ್ನೆಲೆಯಲ್ಲಿ ನಿಷೇದಾಜ್ಞೆ ಹೇರಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆದಿಲ್ಲ.

- ರಮೇಶ್ ಬಾನೋತ್, ಪೊಲೀಸ್ ಆಯುಕ್ತ

ಸ್ತ್ರೀ ಬಂಜೆತನ ವೈದ್ಯಕೀಯ ಶಿಬಿರ

ಮೈಸೂರು, ಅ. 13– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಅ. 13 ರಿಂದ 31 ರವರೆಗೆ ಸ್ತ್ರೀ ಬಂಜೆತನ ವೈದ್ಯಕೀಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9686790610, 9886176690 ಸಂಪರ್ಕಿಸಬಹುದು.

ಹಸಿರು ನಮ್ಮ ಉಸಿರು

1ನೇ ವರ್ಷದ ಸವಿನೆನಪು



ಶ್ರೀಮತಿ ವಿ.ಕಮಲಮ್ಮ

ದುಃಖತಪ್ತರು: ಪತಿ: ನಾರಾಯಣಪ್ಪ ಹಾಗೂ ಕುಟುಂಬವರ್ಗದವರು

PAPER PUBLICATION

Our client Sri. Vishwanatha Kini, aged about 59 years, son of Late. Krishna Kini, residing at No. 119, 4" Main, 12th Cross, Jayanagara, Mysuru- 570014, is intending to purchase the schedule property from one K.Raghavendra Rao, son of K.Krishna Rao, residing at # 361, 6th Cross, T.K.Layout, Near Kamakshi Hospital, Mysuru.If anybody has got any claim over the schedule property, they can file their objection with authentic documents in support of their objection and claims if any, within 7 days from the date of this publication, failing which, our client will go ahead with the transaction with respect to the schedule property.

SCHEDULE

All that piece and parcel of Residential House property No.2847/4, New No.CH 47 built on Site No.4, Block No.3, situated at Krishnadevaraya Road, Jayanagara 2nd Main, Chamaraja Mohalla, Mysuru, measuring East to West 90 ft. and North to South 48 ft., bounded on: East by : Road, West by: Conservancy Road North by: House property bearing No.3, South by ; House property bearing No.5.

Sd/- O. SHAMA BHAT, BA LL.B., Reg. No. KAR 417/77, O. SATHISHA, B.Sc. LL.B., Reg No KAR 721/89, Advocates No. 20/c. 2 Floor, Near Airlines Hotel, Jayalakshmi Vilas Road, Chamarajapuram, Mysuru-570005.

Date: 13-10-2023

ಮೈಸೂರು ಮಿತ್ರ ಬೇಕಾಗಿದ್ದಾರೆ

ಡಿಟಿಪಿ ಆಪರೇಟರ್

ಪೇಜ್‌ಮೇಕರ್ 7, ಫೋಟೋಶಾಪ್, ಕೋರಲ್‌ಡ್ರಾ, ನುಡಿ ಮತ್ತು ಬರಹ ಲಿಪಿ ಗೊತ್ತಿರಬೇಕು. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವುಳ್ಳ ಸ್ವವಿವರದೊಂದಿಗೆ ಕೂಡಲೇ ಸಂಪರ್ಕಿಸಿ. ಸಮಯ: ಮಧ್ಯಾಹ್ನ 3 ರಿಂದ 5

ವ್ಯವಸ್ಥಾಪಕ ಸಂಪಾದಕರು 'ಮೈಸೂರು ಮಿತ್ರ' ಪ್ರಾದೇಶಿಕ ಬೆಳಗಿನ ಪತ್ರಿಕೆ, ಬನ್ನಿಮಂಟಪ, ಮೈಸೂರು-570015

4ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಶ್ರೀ ಜೆ.ಸುರೇಶ್, ಶ್ರೀಮತಿ ನಿಂಗಮ್ಮ, ಶ್ರೀ ಕೆ.ಅಂದಾನಯ್ಯ, ಶ್ರೀ ನಾಗರಾಜು ಹಾಗೂ ಸ್ನೇಹಿತರು, ಕುಕ್ಕರಹಳ್ಳಿ, ಸರಸ್ವತಿಪುರಂ, ಮೈಸೂರು

ಶ್ರೀ ಸುನಿಲ್ ಜೆ. (ಕಾಫಿ)

ಹಾಲು ಮಾರಾಟಗಾರರು, ಹಂಚಿಕೆದಾರರು ಪಿಎಂ ಸ್ವಾ–ನಿಧಿ ಯೋಜನೆಗೆ ಸೇರ್ಪಡೆ



ಮೈಸೂರು, ಅ.13(ಎಂಕೆ)– ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ (ಮೈಮುಲ್) ಆವರಣದಲ್ಲಿ ನಗರಪಾಲಿಕೆ ಡೇ–ನಲ್ಮ್ ವಿಭಾಗದ ಸಹಯೋಗದೊಂದಿಗೆ ಹಾಲು ಮಾರಾಟಗಾರರು ಮತ್ತು ಹಂಚಿಕೆದಾರರನ್ನು ಪಿಎಂ ಸ್ವಾ–ನಿಧಿ ಯೋಜನೆಗೆ ಸೇರ್ಪಡೆಗೊಳಿಸುವ ಕಾರ್ಯಕ್ರಮಕ್ಕೆ ಚಾಲನೆ ಪಿಎಂ ಸ್ವಾ–ನಿಧಿ ರಾಜ್ಯ ಸಂಚಾಲಕರೂ ಆದ ಮಾಜಿ ಸಚಿವ ಎಸ್.ಎ.ರಾಮದಾಸ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪಿಎಂ ಸ್ವಾ–ನಿಧಿ ಯೋಜನೆಯನ್ನು ಬೀದಿ ಬದಿ ವ್ಯಾಪಾರಿಗಳಿಗಾಗಿ ಲಾಕ್‌ಡೌನ್ ಸಮಯದಲ್ಲಿ ಅನುಷ್ಠಾನಗೊಳಿಸಲಾಗಿತ್ತು. ತದನಂತರ ಕರ್ನಾಟಕ ರಾಜ್ಯದಲ್ಲಿ ಹಾಲು ಮಾರಾಟಗಾರರು ಮತ್ತು ಹಂಚಿಕೆದಾರರು ಹಾಗೂ ದಿನಪತ್ರಿಕೆ ಮಾರಾಟಗಾರರನ್ನು ಪಿಎಂ ಸ್ವಾ–ನಿಧಿ ಯೋಜನೆಗೆ ಸೇರ್ಪಡೆಗೊಳಿಸಿ ಸೌಲಭ್ಯ ಕಲ್ಪಿಸುತ್ತಿರುವುದು ದೇಶದಲ್ಲಿಯೇ ಮಾದರಿಯಾಗಿದೆ ಎಂದರು.

ಹಾಲು ಮಾರಾಟಗಾರರು ಮತ್ತು ಹಂಚಿಕೆದಾರರನ್ನು ನೋಂದಾಯಿಸಿದ ನಂತರ ಪಾಲಿಕೆಯಿಂದ ಶಿಫಾರಸು ಪತ್ರ ಪಡೆದವರಿಗೆ ಬ್ಯಾಂಕ್‌ಗಳ ಮೂಲಕ 10 ಸಾವಿರ ರೂ. ಸಾಲ ನೀಡಲಾಗುವುದು. ನಂತರ ದಿನಗಳಲ್ಲಿ 20 ಮತ್ತು 50 ಸಾವಿರ ರೂ. ಸಾಲ ನೀಡುವುದರ ಜೊತೆಗೆ ಶೇ.7 ಬಡ್ಡಿ ಸಹಾಯ ಧನವನ್ನು ಡಿಜಿಟಲ್ ಪಾವತಿ ಮೂಲಕ ಪ್ರತಿ ತಿಂಗಳು 100 ರೂ.ನಂತೆ ಒಟ್ಟು 1900 ರೂ. ಗಳನ್ನು ಕೇಂದ್ರ ಸರ್ಕಾರವು ಫಲಾನುಭವಿಗಳ ಖಾತೆಗೆ ನೇರವಾಗಿ ಜಮಾ ಮಾಡುತ್ತದೆ ಎಂದು ಮಾಹಿತಿ ನೀಡಿದರು.

ಮೈಮುಲ್ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ವಿಜಯ ಶಂಕರ್, ನಗರ ಪಾಲಿಕೆ ಅಭಿಯಾನ ವ್ಯವಸ್ಥಾಪಕ ಡಾ.ಜಿ.ಎಸ್.ಭೈರಲಿಂಗಯ್ಯ, ಮೈಮುಲ್ ಮಾರುಕಟ್ಟೆ ವ್ಯವಸ್ಥಾಪಕ ಜೈಶಂಕರ್, ಹಾಲು ಮಾರಾಟಗಾರರು ಮತ್ತು ಹಂಚಿಕೆದಾರರ ಸಂಘದ ಅಧ್ಯಕ್ಷ ಕುಮಾರ್, ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ

ಜಿಲ್ಲೆ: ಮೈಸೂರು) ಪಿನ್ ಕೋಡ್–571 602 (ರಾಜ್ಯ: ಕರ್ನಾಟಕ

E-Mail ID: apmckrnagar@gmail.com Ph:08223-262342-297312

ಸಂ:ಕೃಉಮಾಸ(ಕೃರಾನ)/416/2023–24 ದಿನಾಂಕ: 12.10.2023

ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಕೆ.ಆರ್.ನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ತಾತ್ಕಾಲಿಕ ಕ್ಯಾಂಟೀನ್ ಶೆಡ್ ಅನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ಮಾರುಕಟ್ಟೆ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು–2004 ರಂತೆ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಗರಿಷ್ಠ 55 ತಿಂಗಳ ಅವಧಿಗೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.1 ವಿವರ: ಕೆ.ಆರ್.ನಗರ ಸಮಿತಿಯ ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ತಾತ್ಕಾಲಿಕ ಕ್ಯಾಂಟೀನ್ ಶೆಡ್. **ಅರ್ಜಿ ಶುಲ್ಕ ರೂ.(ತೆರಿಗೆ ಪ್ರತ್ಯೇಕ):** 500–00 **ಮಾಸಿಕ ನಿಗಧಿಪಡಿಸಿರುವ ಲೀವ್ & ಲೈಸನ್ಸ್ ಶುಲ್ಕ ರೂ.**1,045–00 **ಮುಂಗಡ ರೂ.**2,090–00

1) ನೋಂದಣಿ ಶುಲ್ಕ ರೂ.500–00 ನ್ನು ಪಾವತಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ನಿಗಧಿತ ಅರ್ಜಿ ನಮೂನೆ–1 ನ್ನು ಸಲ್ಲಿಸಲು ಕೊನೆಯ ದಿ: 30.10.2023 ರಂದು ಸಂಜೆ 4.00 ಗಂಟವರೆಗೆ. **2)** ನೋಂದಣಿ ಪಡೆದ ಅರ್ಜಿದಾರರು ನಿಗಧಿತ ಅರ್ಜಿ ನಮೂನೆಯೊಂದಿಗೆ ಮುಂಗಡ ಪಾವತಿಯೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿ: 04.11.2023ರ ಸಂಜೆ 4.00 ಗಂಟೆವರೆಗೆ. **3)** ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಕೊನೆಯ ದಿ: 04.11.2023 ರ ಸಂಜೆ 12.30 ಗಂಟೆಯವರೆಗೆ. **4)** ಮುಂಗಡ ಪಾವತಿಯನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೆ.ಆರ್.ನಗರ ಇವರ ಹೆಸರಿಗೆ ಪಡೆದ ಬ್ಯಾಂಕ್ ಡಿ.ಡಿ ಮೂಲಕ ಪಾವತಿಸುವುದು. **5)** ಟೆಂಡರ್ ಕಂ ಬಹಿರಂಗ ಹರಾಜನ್ನು ದಿ: 04.11.2023 ರಂದು ಮಧ್ಯಾಹ್ನ 02.30 ಗಂಟೆಗೆ ಸಮಿತಿಯ ಆಡಳಿತ ಕಛೇರಿಯಲ್ಲಿ ನಡೆಸಲಾಗುವುದು. ತಪ್ಪಿದಲ್ಲಿ ಮುಂದಿನ ದಿನಾಂಕ ತಿಳಿಸಲಾಗುವುದು. ಹರಾಜಿನ ನಂತರ ಟೆಂಡರ್ ತೆರೆಯಲಾಗುವುದು. **6)** ಈ ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಅನುಮೋದನೆಯ ಷರತ್ತಿಗೊಳಪಟ್ಟಿರುತ್ತದೆ. **7)** ಹೆಚ್ಚಿನ ಷರತ್ತು/ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಕೆ.ಆರ್.ನಗರ

ಸಹಿ/– ಆಡಳಿತಾಧಿಕಾರಿ, ಕೃ.ಉ.ಮಾ.ಸ., ಕೆ.ಆರ್.ನಗರ

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಇ–ಮೇಲ್: manmulpandi18@gmail.com

ಸಂಖ್ಯೆ: ಮಹಾಒ/ಶೇ.ತಾಂ/ಇ–ಪ್ರೊಕ್ಯೂರ್‌ಮೆಂಟ್/2023–24 ದಿನಾಂಕ: 10.10.2023

ತಾಂತ್ರಿಕ / ವಾಣಿಜ್ಯ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಒಕ್ಕೂಟದ ವ್ಯಾಪ್ತಿಯ ಸಂಘಗಳಿಂದ ಮುಖ್ಯಡೇರಿ ಹಾಗೂ ಕೆ.ಆರ್.ಪೇಟೆ ಸಿ.ಸಿಗೆ ಹಾಲು ಸಾಗಾಣಿಕೆ ಮಾಡಲು 2013 ಹಾಗೂ ನಂತರದ ಸಾಲಿನಲ್ಲಿ ನೋಂದಾಯಿಸಲಾದ 5.0 ಟನ್ ಸಾಮರ್ಥ್ಯದ 03 ವಾಹನಗಳು, 4.0 ಟನ್ ಸಾಮರ್ಥ್ಯದ 04 ವಾಹನಗಳು **ಒಟ್ಟು 07 ವಾಹನಗಳಿಗೆ,** ಹಾಲಿನ ಪುಡಿ ಸಾಗಾಣಿಕೆ ಮಾಡಲು ಸಿ.ಡಿ.ಪಿ.ಓ ಕೇಂದ್ರಗಳ 08 ಮಾರ್ಗಗಳಿಗೆ ಪ್ರತಿ ಮಾರ್ಗಕ್ಕೆ 3.5 ಟನ್/ 6.0 ಟನ್ ಸಾಮರ್ಥ್ಯದ 02 ವಾಹನಗಳು, ಶಾಲೆಗಳ 07 ಮಾರ್ಗಗಳಿಗೆ ಪ್ರತಿ ಮಾರ್ಗಕ್ಕೆ 0.7 ಟನ್ ಸಾಮರ್ಥ್ಯದ 02 ವಾಹನಗಳು ಸೇರಿ **ಒಟ್ಟು 15 ಮಾರ್ಗಗಳಿಗೆ,** ದ್ವೈವಾರ್ಷಿಕ ಅವಧಿಗೆ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ದರಖಾಸ್ತನ್ನು ಇ.ಎಂ.ಡಿ ಹಣದ ಸಮೇತ ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿದ ರೀತಿಯಲ್ಲಿ ಮತ್ತು ನಿರ್ದಿಷ್ಟಪಡಿಸಿದ ದಿನಾಂಕ ಮತ್ತು ವೇಳೆಯ ಒಳಗೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವುದು.

ಬಿಡ್ಡುದಾರರು, ಇ.ಎಂ.ಡಿ ಮೊತ್ತವನ್ನು ತಾಂತ್ರಿಕ ಬಿಡ್ಡಿನ ಅನುಬಂಧ–ಅ ರಂತೆ ಪಾವತಿಸುವುದು.

ಟೆಂಡರ್ ಹೆಸರು: **(1)** Tender for Transportation of Milk Procurement Route, from Mandya Milk Union Gejjalagere. ಟೆಂಡರ್ ಸಂಖ್ಯೆ: MMU:P&I/E-PROCUREMENT/ P&I-15/ 2023-24. **(2)** Tender for Transportation of Milk Powder to CDPO for Two Years. ಟೆಂಡರ್ ಸಂಖ್ಯೆ: MMU:P&I/K.B/E-PROCUREMENT/K.B.S-2 /2023-24. **(3)** Tender for Transportation of Milk Powder to Schools for Two Years. ಟೆಂಡರ್ ಸಂಖ್ಯೆ: MMU:P&I/K.B/E-PROCUREMENT/K.B.S-1 / 2023-24.

(1) ಇ–ಟೆಂಡರ್ ಲಭಿಸುವ ದಿನಾಂಕ: **11.10.2023** ರಿಂದ ದಿನಾಂಕ: **10.11.2023** ರ **17.00 ಗಂಟೆವರೆಗೆ.** (2) ಪ್ರೀಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : **20.10.2023** ರ **ಮಧ್ಯಾಹ್ನ 12.00 ಗಂಟೆಗೆ.** (3) ಟೆಂಡರ್ ಬಗ್ಗೆ ಸ್ಪಷ್ಟನೆ/ಆಕ್ಷೇಪಣೆ ಪಡೆಯುವ ದಿನಾಂಕ ಮತ್ತು ಸಮಯ: ದಿನಾಂಕ: **30.10.2023 ರ ಸಂಜೆ 17.00 ಗಂಟೆಗೆ.** (4) ಟೆಂಡರ್ ಸಲ್ಲಿಸುವ/ ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ: **10.11.2023 ರ ಸಂಜೆ 17.00 ಗಂಟೆವರೆಗೆ.** (5) ತಾಂತ್ರಿಕ ಟೆಂಡರ್ (ಭಾಗ–1) ತೆರೆಯುವ ದಿನಾಂಕ ಮತ್ತು ಸಮಯ: **13.11.2023 ರ ಬೆಳಿಗ್ಗೆ 11.00 ಗಂಟೆಗೆ.** (6) ವಾಣಿಜ್ಯ ಟೆಂಡರ್ (ಭಾಗ–2) ತೆರೆಯುವ ದಿನಾಂಕ ಮತ್ತು ಸಮಯ: **ನಂತರ ತಿಳಿಸಲಾಗುವುದು.** (7) ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ: **ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಆಡಳಿತ ಮಂಡಳಿ ಸಭಾಂಗಣ.**

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ. ಮೊತ್ತ ಹಾಗೂ ಟೆಂಡರ್ ಷರತ್ತು ಮತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** ರಲ್ಲಿ **download** ಮಾಡಿಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ವ್ಯವಸ್ಥಾಪಕರು (ಶೇ.ತಾಂ) **ಮೊ: 9513888243** ಇವರನ್ನು ಸಂಪರ್ಕಿಸಬಹುದಾಗಿದೆ.

ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಪರವಾಗಿ
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮೈಸೂರು ಸಿಟಿ, ಖಿಲ್ಲೇ ಮೊಹಲ್ಲ, ವಿದ್ಯಾರಣ್ಯಪುರಂ, 4ನೇ ಮುಖ್ಯ ರಸ್ತೆ, 6ನೇ ಅಡ್ಡ ರಸ್ತೆಯಲ್ಲಿರುವ ಮನೆ ನಂ. 905/107 ರಲ್ಲಿ ವಾಸವಿರುವ ಶ್ರೀ. ಎಂ. ಎನ್. ಮಂಜುನಾಥ್ (ಬಿನ್ ಲೇಟ್. ಎಂ. ಆರ್. ನಾಗರಾಜ) ರವರಿಂದ ಖರೀದಿಸುವ ಉದ್ದೇಶದಿಂದ ಸದರಿಯವರೊಡನೆ ಮಾರಾಟ ಒಪ್ಪಂದ ಕರಾರನ್ನು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರೂ ಯಾವುದೇ ರೀತಿಯಲ್ಲಾದರೂ ಹಕ್ಕು, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 10 (ಹತ್ತು) ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲೀ ದಾಖಲೆಗಳೊಂದಿಗೆ ಕೆಳಕಂಡ ವಕೀಲರನ್ನು ಕಛೇರಿಯಲ್ಲಿ (ಸೋಮವಾರದಿಂದ ಶನಿವಾರದೊಳಗೆ) ಸಂಜೆ 6:30 ಇಂದ 8:00 ರೊಳಗೆ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂಧಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೊಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್

ಐಟಂ 1: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 30/1. (ಹಳೆ ನಂ. 30) ರಲ್ಲಿರುವ 00 ಎಕರೆ : 31 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚಕ್ಕುಬಂದಿ;– **ಪೂರ್ವಕ್ಕೆ:** ನೀಲಮ್ಮರವರ ಜಮೀನು, **ಪಶ್ಚಿಮಕ್ಕೆ:** ನಿಂಗಮ್ಮಣ್ಣಿರವರ ಜಮೀನು, **ಉತ್ತರಕ್ಕೆ:** ಪಂಚಾಕ್ಷರಿ ರವರ ಜಮೀನು, **ದಕ್ಷಿಣಕ್ಕೆ:** ಶಂಕರನಾಯಕ್ ರವರ ಜಮೀನು.

ಐಟಂ–2: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 30/2 (ಹಳೆ ನಂ. 30) ರಲ್ಲಿರುವ 00 ಎಕರೆ : 38 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚಕ್ಕುಬಂದಿ: **ಪೂರ್ವಕ್ಕೆ:** ಮಹದೇವಪ್ಪರವರ ಜಮೀನು, **ಪಶ್ಚಿಮಕ್ಕೆ:** ನಿಂಗಮ್ಮಣ್ಣಿರವರ ಜಮೀನು, **ಉತ್ತರಕ್ಕೆ:** ಪಂಚಾಕ್ಷರಿ ರವರ ಜಮೀನು, **ದಕ್ಷಿಣಕ್ಕೆ:** ಶಂಕರನಾಯಕ್ ರವರ ಜಮೀನು.

ಐಟಂ –3: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 31/1 (ಹಳೆ ನಂ. 31) ರಲ್ಲಿರುವ 00 ಎಕರೆ : 12 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚೆಕ್ಕುಬಂದಿ: **ಪೂರ್ವಕ್ಕೆ:** ಶಿವನಂಜಪ್ಪರವರ ಜಮೀನು, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ಶಿವಮೂರ್ತಿ ರವರ ಜಮೀನು, **ದಕ್ಷಿಣಕ್ಕೆ:** ಮಲ್ಲೇಗೌಡರ ಜಮೀನು.

ಐಟಂ– 4: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 31/2 (ಹಳೆ ನಂ. 31) ರಲ್ಲಿರುವ 00 ಎಕರೆ : 11 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚೆಕ್ಕುಬಂದಿ: **ಪೂರ್ವಕ್ಕೆ :** ನಿಂಗಪ್ಪರವರ ಜಮೀನು, **ಪಶ್ಚಿಮಕ್ಕೆ:** ಶಿವಣ್ಣರವರ ಜಮೀನು, **ಉತ್ತರಕ್ಕೆ:** ಶಿವಮೂರ್ತಿರವರ ಜಮೀನು, **ದಕ್ಷಿಣಕ್ಕೆ:** ಮಲ್ಲೇಗೌಡರ ಜಮೀನು.

ಐಟಂ –5: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 31/3 (ಹಳೆ ನಂ. 31) ರಲ್ಲಿರುವ 00 ಎಕರೆ : 12 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚೆಕ್ಕುಬಂದಿ: **ಪೂರ್ವಕ್ಕೆ:** ಕಾಳಪ್ಪರವರ ಜಮೀನು, **ಪಶ್ಚಿಮಕ್ಕೆ:** ಶಿವನಂಜಮ್ಮರವರ ಜಮೀನು, **ಉತ್ತರಕ್ಕೆ:** ಶಿವಮೂರ್ತಿರವರ ಜಮೀನು, **ದಕ್ಷಿಣಕ್ಕೆ:** ಮಲ್ಲೇಗೌಡರ ಜಮೀನು.

ಐಟಂ–6: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 31/4 (ಹಳೆ ನಂ. 31) ರಲ್ಲಿರುವ 00 ಎಕರೆ : 21 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚಕ್ಕುಬಂದಿ: **ಪೂರ್ವಕ್ಕೆ:** ಮಹದೇವಪ್ಪ ರವರ ಜಮೀನು, **ಪಶ್ಚಿಮಕ್ಕೆ:** ನಿಂಗಪ್ಪ ರವರ ಜಮೀನು, **ಉತ್ತರಕ್ಕೆ:** ಶಿವಮೂರ್ತಿರವರ ಜಮೀನು, **ದಕ್ಷಿಣಕ್ಕೆ:** ಮಲ್ಲೇಗೌಡರ ಜಮೀನು.

ಐಟಂ–7: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 31/5 (ಹಳೆ ನಂ. 31) ರಲ್ಲಿರುವ 00 ಎಕರೆ : 19 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚಕ್ಕುಬಂದಿ: **ಪೂರ್ವಕ್ಕೆ:** ಮಹದೇವಮೂರ್ತಿ ರವರ ಜಮೀನು, **ಪಶ್ಚಿಮಕ್ಕೆ:** ಕಾಳಪ್ಪ ರವರ ಜಮೀನು, **ಉತ್ತರಕ್ಕೆ:** ಶಿವಮೂರ್ತಿ ರವರ ಜಮೀನು, **ದಕ್ಷಿಣಕ್ಕೆ:** ತಮ್ಮಯ್ಯಪ್ಪ ರವರ ಜಮೀನು.

ಐಟಂ 8: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 31/6 (ಹಳೆ ನಂ. 31) ರಲ್ಲಿರುವ 00 ಎಕರೆ : 35 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚೆಕ್ಕುಬಂದಿ: **ಪೂರ್ವಕ್ಕೆ :** ನಿಂಗಮ್ಮಣ್ಣಿ ರವರ ಜಮೀನು, **ಪಶ್ಚಿಮಕ್ಕೆ:** ಮಹದೇವಪ್ಪ ರವರ ಜಮೀನು, **ಉತ್ತರಕ್ಕೆ:** ಶಿವಮೂರ್ತಿ ರವರ ಜಮೀನು, **ದಕ್ಷಿಣಕ್ಕೆ:** ತಮ್ಮಯ್ಯಪ್ಪ ರವರ ಜಮೀನು.

ಐಟಂ 9: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 31/7 (ಹಳೆ ನಂ. 31) ರಲ್ಲಿರುವ 00 ಎಕರೆ : 11 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚೆಕ್ಕುಬಂದಿ: **ಪೂರ್ವಕ್ಕೆ:** ಮಂಜುನಾಥ್ ರವರ ಜಮೀನು, **ಪಶ್ಚಿಮಕ್ಕೆ:** ಮಹದೇವಮೂರ್ತಿ ರವರ ಜಮೀನು **ಉತ್ತರಕ್ಕೆ:** ಶಿವಮೂರ್ತಿರವರ ಜಮೀನು, **ದಕ್ಷಿಣಕ್ಕೆ:** ಶಂಕರನಾಯಕ ರವರ ಜಮೀನು.

ಐಟಂ 10: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡ ಕಾನ್ಯ ಗ್ರಾಮಕ್ಕೆ ಸೇರಿದ ಸರ್ವೇ ನಂ. 34/3 (ಹಳೆ ನಂ. 34/1) ರಲ್ಲಿರುವ 02 ಎಕರೆ : 02 ಗುಂಟೆ, ಖುಷ್ಕಿ ಜಮೀನು, ಇದಕ್ಕೆ ಚಕ್ಕುಬಂದಿ: **ಪೂರ್ವಕ್ಕೆ:** ಸರ್ಕಾರಿ ರಸ್ತೆ, **ಪಶ್ಚಿಮಕ್ಕೆ:** ಮಂಜುನಾಥ್ ರವರ ಜಮೀನು, **ಉತ್ತರಕ್ಕೆ:** ನಿಂಗಣ್ಣ ರವರ ಜಮೀನು, **ದಕ್ಷಿಣಕ್ಕೆ:** ಮರಿಜವನಯ್ಯ ರವರ ಜಮೀನು.

ದಿನಾಂಕ: 13.10.2023 **ಮೈಸೂರು**

ಸಹಿ/– ಎನ್. ಗೌರಿಶಂಕರ್ ವಕೀಲರು, #46, 4ನೇ ಅಡ್ಡರಸ್ತೆ, 5ನೇ ಹಂತ, ಜೆಟಿಕೆ ಬಡಾವಣೆ, (ಆರ್‌ಎಂಪಿ ಕಾಲೋನಿ ಹತ್ತಿರ) ಕುವೆಂಪುನಗರ, ಮೈಸೂರು. **(ಮೊ. 9886994255)**